ಐಕ್ಯರಂಗ

ದುಡಿವ ಜನರ ಪ್ರಾಣ ಮಿತ್ರ

ಸಂಪುಟ 25 ಸಂಚಿಕೆ 6
ಫೆಬ್ರವರಿ 9, 2003 ಬೆಲೆ ರೂ. 3.00



ಕೋಮುವಾದದ ವೈರಸ್‌ಗೆ ಕೊಣ್ಣೂರು ಬಲಿ




ವಿದ್ಯುತ್ ದರ ಏರಿಕೆ ಅಸಹನೀಯ ಹೊರೆ



ಗಣತಂತ್ರದ ಆಂತರಿಕ ಶಕ್ತಿ ಉಳಿಸಬೇಕಿದೆ

ಇರಾಕ್ ಯುದ್ಧಕ್ಕೆ ಬುಶ್ ತರಾತುರಿ




ಸಾಲದ ಹೊರೆಗೆ ಗುಬ್ಬಿ ರೈತನ ಆತ್ಮಹತ್ಯೆ



ಎಲ್ಲೆಡೆ ಪ್ರತಿರೋಧ..

ಕೆಂಪು ಸಾಹಿತ್ಯದ ರುಚಿ....

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ

14



ಕಳೆದ ಸಂಚಿಕೆಯಲ್ಲಿ ಸೈಜ ಕಾರ್ಯಾಚರಣೆಯಲ್ಲಿ ಪಾಲ್ಗೊಳ್ಳಲು ಹಾತೊರೆಯುತ್ತಿದ್ದ ಜಯಪಾಲ್‌ಸಿಂಗ್ ಲಾಹೋರ್‌ನಲ್ಲಿ ಕಮ್ಯುನಿಸ್ಟರತ್ತ ಕಣ್ಣು, ಮೆಟ್ರೋದ ಗಾರ್ಡ್‌ನಲ್ಲಿ ಕ್ಯಾ. ವೈ. ಕಾಯುತ್ತಿದ್ದದ್ದು. ಸಾಮ್ರಾಜ್ಯಶಾಹಿಗಳಿಗೆ ರಾಷ್ಟ್ರೀಯ ಪ್ರತಿರೋಧದ ಕುರುಹು ದೊರೆತದ್ದು, ಮೋಜು ಮಜಾದ ನಾಡಿನಲ್ಲಿ ಜಯಪಾಲ್‌ಸಿಂಗ್, 60 ಸಾವಿರ ಭಾರತೀಯ ಸೈನಿಕರನ್ನು ಸಿಂಗಾಪೂರ್‌ನಲ್ಲಿ ಬಿಟ್ಟುಬಂದ ಬ್ರಿಟಿಷರು, ಬಿಳಿಯ ಪಡೆ ಉಳಿಸಲು ಸೇತುವೆ ಸ್ಫೋಟ ಮತ್ತು ಯುದ್ಧದ ಪಳಯುಳಿಕೆಗಳ ನಡುವಿನಿಂದ ಹೊಸಕಟ್ಟಡ, ಹೊಸ ದಿಗಂತ,ಹೊಸ ಭಾರತದ ಬಗ್ಗೆ ಅಚಲ ನಂಬಿಕೆ...ಈಬಗ್ಗೆ ಓದಿರುವಿರಿ. ಮುಂದೆ...

ಕನ್ನಡಕ್ಕೆ: **ಬಿಷ್ಣು ಕುಂದಾಪುರ**

"ಸಂಘಟನೆಯನ್ನು ಯಾವಾಗ ಸೇರುತ್ತೀರಿ" -ಆತ ನನ್ನನ್ನು ಪ್ರಶ್ನಿಸಿದ.

ಅವನೇನಂದುಕೊಂಡಿದ್ದಾನೆ ಎನ್ನುವುದು ನನಗೆ ಗೊತ್ತು. ಆದರೆ ನಾನು 'ಯೆಲ್ಲೊ' ಆಡಬೇಕಿತ್ತು.

"ಯಾವ ಸಂಘಟನೆ" ನನ್ನದು ಮರುಪ್ರಶ್ನೆ. ಆತ ಸಂಘಟನೆಯ 11 ಅಂಶ ಕಾರ್ಯವನ್ನು ವಿವರವಾಗಿ ತಿಳಿಸಿದ. "ಸೂಕ್ತ ಕಾಲದಲ್ಲಿ ಬ್ರಿಟಿಷರ ವಿರುದ್ಧ ಬಂಡೇಳಲು ಸಂಘಟಿತರಾಗಿ" ಎಂದ.

ಈ ಸಂಘಟನೆ ಸೇರಲು ನನ್ನ ಅಸಮರ್ಥತೆಯನ್ನು ನಾನು ವಿವರಿಸಿದೆ. "ನಾನು ಬದುಕಬೇಕಾಗಿದೆ, ಕ್ಯಾಪ್ಟನ್. ನೀವು ನನ್ನನ್ನು ರಾಜಕೀಯಕ್ಕೆ ಎಳೆಯಬೇಡಿ ಅದೊಂದು ಕೊಳಕು ವ್ಯಾಪಾರ" ಎಂದು ಹೇಳಿದೆ.

"ಓಹ್ ನೀನೋ. ನಿನ್ನಂಥ ರ್‍ಯಾಸ್ಕಲ್‌ಗಳು ಈ ದೇಶಕ್ಕೆ ಶಾಪ. ರಾಜಕೀಯ! ಮುಂದೆ ತಲೆತಲಾಂತರದವರೆಗೂ ಬ್ರಿಟೀಷರ ಆಡಳಿತದಲ್ಲಿ ಬಾಳುವುದೇ ಪರಿಶುದ್ಧ ವಿಚಾರ" ಉದ್ವೇಗಗೊಂಡ ಕ್ಯಾಪ್ಟನ್ ಬಡಬಡಿಸಿದ. ಆಕ್ರೋಶ- ವ್ಯಂಗ್ಯ ಆತನ ಮಾತುಗಳಲ್ಲಿ ತುಂಬಿತ್ತು.

"ಗುಂಗುರು ಕೂದಲು ಹುಡುಗಿ ಜತೆ ಲಲ್ಲೆ ಹೊಡೆಯುವುದು ಮತ್ತು ಇನ್ನೂ ಒಂದು ಪೆಗ್ ಸ್ಕಾಚ್ ಹೀರುವುದು ಅತ್ಯಂತ ಶುದ್ಧ ವಿಚಾರ, ಕ್ಯಾಪ್ಟನ್!" ಎಂದು ಆವೇಶ ಕಡಿಮೆಗೊಳಿಸಲು ಪ್ರಯತ್ನಿಸಿದ ನಾನು ಹಾಸ್ಯವಾಗಿ ಹೇಳಿದೆ.

"ನಮ್ಮ ಮಾತುಕತೆಯನ್ನು ಯಾರಿಗೂ ಹೇಳುವುದಿಲ್ಲವೆಂದು ಭಾಷೆ ಕೊಡಿ" ಎಂದು ವೈ ಹೇಳಿದ. ಹಾಗೇ ಆಗಲಿ ಎಂದು ನಾನವನಿಗೆ ಮಾತುಕೊಟ್ಟೆ.

ಸಂಘಟನೆಯನ್ನು ಸೇರಲು ಒಪ್ಪದ ಭಾರತೀಯ ಅಧಿಕಾರಿಗಳನ್ನು ಸಂಘಟನೆಯ ಅನೇಕ ಸದಸ್ಯರು ಹಲವು ಬಾರಿ ಸಂಪರ್ಕಿಸುತ್ತಿದ್ದರು. ಆದರೆ ಒಪ್ಪದವರು ಬ್ರಿಟೀಷರಿಗೆ ಮಾತ್ರ ಗುಟ್ಟು ಬಿಟ್ಟುಕೊಡುತ್ತಿರಲಿಲ್ಲ. ಯುದ್ಧದ ವರ್ಷಗಳಲ್ಲಿ ಇಂಥ ನೈತಿಕತೆಯ ವಾತಾವರಣ ಇತ್ತು.

ಲಾಹೋರ್‌ನಲ್ಲಿ ನನ್ನ ಮೇಲೆ ಹದ್ದಿನ ಕಣ್ಣಿಡಲಾಗಿತ್ತು. ಕೆಂಚು ಕೂದಲಿನ, ಮಚ್ಚೆಗಳಿಂದ ಕೂಡಿದ ಮುಖದ ಸ್ಕಾಟ್‌ಲ್ಯಾಂಡ್‌ನವನಾದ ಕ್ಯಾಪ್ಟನ್ ಬ್ರೌನ್ (ಹೆಸರು ಇದೇ ಎಂಬುದು ಸರಿಯಾಗಿ ಗೊತ್ತಿಲ್ಲ) ಡಿಪೋದ ಅಡ್ಜುಟಂಟ್ ಆಗಿದ್ದ. ನನ್ನ ಮೇಲೆ ಕಣ್ಣಿಡುವಂತೆ ಮೇಜರ್ ಕ್ಯಾನಿಂಗ್ ನಿರ್ದಿಷ್ಟ ಆದೇಶ ನೀಡಿದ್ದ. ನಾಟಕೀಯ ರೀತಿಯಲ್ಲಿ ನನಗೆ ಈ ವಿಷಯ ಗೊತ್ತಾಯಿತು.

ಸಂಘಟನೆಯ ನೇರ ಕೆಲಸಗಳಿಂದ ಸಂಪರ್ಕ ಕಡಿದುಹೋದ ನಾನು ಲಾಹೋರ್‌ನಲ್ಲಿ ಭಾರತೀಯ ರಾಜಕೀಯ ಪಕ್ಷಗಳ ವ್ಯಕ್ತಿಗಳ ಜತೆ ಸಂಪರ್ಕ ಸಾಧಿಸಲು ನಿರ್ಧರಿಸಿದೆ. ಯುದ್ಧ ಪರಿಸ್ಥಿತಿಯನ್ನು ಅವರು ಹೇಗೆ ಪರಿಗಣಿಸುತ್ತಾರೆ, ಮತ್ತು ವಿಶೇಷವಾಗಿ ಅದು ಭಾರತದ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬ ಬಗ್ಗೆ ಅವರ ಅಭಿಪ್ರಾಯ ತಿಳಿಯುವುದು ನನ್ನ ಮುಖ್ಯ ಉದ್ದೇಶವಾಗಿತ್ತು.

ಕಾಂಗ್ರೆಸ್ ಜನರು ನನಗೆ ಗೊತ್ತು. ಸೈನ್ಯವನ್ನು ಅವರು ದ್ವೇಷಿಸುತ್ತಿದ್ದರು. ಅವರ ಪ್ರಕಾರ ಭಾರತೀಯ ಸಶಸ್ತ್ರ ಪಡೆಗಳಿಗೆ ಯಾವ ಪಾತ್ರವೂ ಇಲ್ಲ. ನನ್ನ ಗಮನ ಕಮ್ಯುನಿಸ್ಟರ ಮೇಲೆ ನೆಟ್ಟಿತ್ತು. ಪಂಜಾಬ್‌ನ ಕ್ರಾಂತಿಕಾರಿ ಜನರೊಂದಿಗೆ ಸಂಪರ್ಕ ಬೆಳೆಸಲು ನಾನು ಕಾತರಿಸುತ್ತಿದ್ದೆ. ಆದರೆ ಹೇಗೆ ಆ ಕೆಲಸ ಮಾಡುವುದೆಂದು ಗೊತ್ತಿರಲಿಲ್ಲ.

ಡಬ್ಲ್ಯು.ಎ.ಸಿ(ಐ) ನ 'ಶೇಖ್ ಸೋದರಿಯರು' ನನ್ನ ನೆರವಿಗೆ ಬಂದರು....

ಕಮ್ಯುನಿಸ್ಟರ 'ಬೇಟೆ'ಯಲ್ಲಿ

ಕೆಂಪು ಸಾಹಿತ್ಯದ ರುಚಿ

ಡಬ್ಲ್ಯು.ಎ.ಸಿ.ನಿಂದ 'ಶೇಖ್ ಸೋದರಿಯರು' ನನ್ನ ರಕ್ಷಣೆಗೆ ಬಂದರು. ಕರಾಚಿಯ ಈ ಇಬ್ಬರು ಸೋದರಿಯರು ಅಪ್ರತಿಮ ಸುಂದರಿಯರಾಗಿದ್ದರು, ಅವರ ನರಗಳಲ್ಲಿ ಬಿಸಿ ಬಲೂಚಿ ರಕ್ತ ಹರಿಯುತ್ತಿತ್ತು. ನಾನು ಈ ಮೊದಲೇ ಪ್ರಸ್ತಾವಿಸಿದ, ದೆಹಲಿಯ ಕ್ವೀನ್ ವಿಕ್ಟೋರಿಯಾ ರಸ್ತೆಯಲ್ಲಿನ ರೇಸ್ ಕುದುರೆ ಮಾಲಿಕನ ಮನೆಯಲ್ಲಿ ನಡೆದ ಸಭೆಯಲ್ಲಿ ಇವರ ಭೇಟಿಯಾಗಿತ್ತು.

ಇವರು ಅಮೇರಿಕಾದ ಹುಡುಗಿಯರಂತೆ ಬಟ್ಟೆ ತೊಟ್ಟಿದ್ದರು, ಕೂದಲನ್ನು ಬಾಬ್‌ಕಟ್ ಮಾಡಿಕೊಂಡಿದ್ದರು, ಕೆಂಚನೆ ಕಾಣುವಂತೆ ಡೈ ಮಾಡಿಕೊಂಡಿದ್ದರು. ಈ ಮೋಹಕ ಹಾಗೂ ಉತ್ಸಾಹಿ ತರುಣಿಯರು ತರಬೇತಾದ ವೈರಲೆಸ್ ಆಪರೇಟರ್‌ಗಳಾಗಿ 1942ರಲ್ಲೇ ನಮ್ಮ ಸಂಘಟನೆಯನ್ನು ಸೇರಿದ್ದರು. ಅವರು ಡಬ್ಲ್ಯುಎಸಿ(1) ಯಲ್ಲಿ ನಮ್ಮ ಮುಖ್ಯ ಸಂಘಟಕರಾಗಿದ್ದರು. ನೃತ್ಯ ಹಾಗೂ ವಿಲಾಸಜೀವನ ಪ್ರಿಯರಾದ ಇವರು ನೃತ್ಯ ಕೂಟಗಳಲ್ಲಿ ಅಚ್ಚುಮೆಚ್ಚಿನ ಜೋಡಿಯಾಗಿದ್ದರು. ತಾವು ಪಿತೂರಿ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿರುವ ಬಗ್ಗೆ ಎಳ್ಳಷ್ಟೂ ಸುಳಿವನ್ನು ಈ ಸೋದರಿಯರು ನೀಡಿರಲಿಲ್ಲ.

ಅವರು ಲಾಹೋರ್‌ನಲ್ಲಿದ್ದುದು ನನಗೆ ಗೊತ್ತಿತ್ತು. ಆದರೆ ಅವರನ್ನು ಸಂಪರ್ಕಿಸಬಾರದೆಂದು ಆದೇಶ ನನಗಿತ್ತು. ಅವರನ್ನು ಎಲ್ಲಿ ಸಂಧಿಸಬಹುದೆಂಬುದು ನನಗೆ ತಿಳಿದಿತ್ತು. ಸಂಜೆ ಹೊತ್ತು ಲಾಹೋರ್‌ನ ಡಾನ್ಸ್ ಪಾರ್ಟಿಗಳಿಗೆ ಆಗಾಗ ಹೋಗತೊಡಗಿದೆ. ಒಂದು ಸಂಜೆ ಅವರು ಬ್ರಿಟಿಷ್ ಅಧಿಕಾರಿಗಳಿಂದ ತುಂಬಿದ್ದ ನರ್ತನ ಕೂಟದಲ್ಲಿದ್ದರು. ಸರಬರಾಜು ಡಿಪೋದ ಅಡ್ಜುಟಂಟ್ ಹಾಜರಿದ್ದ. ಬೀರು ನೀರಿನಂತೆ ಸರಬರಾಜಾಯಿತು. ಕೆಂಗೂದಲಿನ ಸ್ಕಾಟ್ ಅಧಿಕಾರಿ ಗ್ಯಾಲನ್ ಗಟ್ಟಲೆ ಕುಡಿದು ಮತ್ತನಾಗಿದ್ದ. ನನ್ನನ್ನು ನೋಡಿದವನೇ ಬೀರ್ ತುಂಬಿದ ಮಗ್ಗನ್ನು ಎತ್ತಿ ಹಿಡಿದು ನನ್ನತ್ತ ಧಾವಿಸಿ ಬಂದ.

"ಹೇ ಜೈಪಾಲ್, ಬನ್ನಿ ನಮ್ಮ ಜತೆಸೇರಿ. ನಾನು ಎರಡು ಡಬ್ಲ್ಯು.ಎ.ಸಿ. ಗಳನ್ನು ನೋಡಿಕೊಳ್ಳಬೇಕಾಗಿದೆ" ಎಂದು ಹೇಳಿದ.

ಕುಡಿದ ಅಮಲಿನ ನಡುವೆಯೂ ಕರ್ತವ್ಯ ಮತ್ತು ಸಂತೋಷವನ್ನು ಸಮಾನವಾಗಿ ತೂಗಿಸಿಕೊಂಡು ಹೋಗಲು ಬುದ್ಧಿವಂತ ಸ್ಕಾಟ್ ನಿರ್ಧರಿಸಿದ್ದ. ಶೇಖ್ ಸೋದರಿಯರು ನಿರ್ಲಕ್ಷ್ಯದಿಂದಿದ್ದರು. ನಾನು ಕಣ್ಣು ಮಿಟುಕಿಸಿದರೂ' ಹಳೆಯ ಮಿತ್ರರಂತೆ ಅವರು ನನ್ನನ್ನು ಭೇಟಿ ಮಾಡಿದರು.

"ನೀವು ಪರಸ್ಪರ ಪರಿಚಿತರು, ಅಲ್ಲವೇ?" ಅಡ್ಜುಟಾಟ್ ಪ್ರಶ್ನಿಸಿದ.

"ಓ, ಹೌದು, ಹೀಗೆ ಸುಮ್ಮನೆ ನಿನ್ನೆಯಷ್ಟೆ ನಾವು ಹೀಗೆ ಸುಮ್ಮನೆ ಭೇಟಿಯಾಗಿದ್ದೆವು" ನಾನು ಉತ್ತರಿಸಿದೆ.

ಇದರಿಂದ ಸುಳಿವು ಪಡೆದ ಬುದ್ಧಿವಂತ ಸೋದರಿಯರು ಅಡ್ಜುಟಾಟ್‌ನನ್ನು ನಿಭಾಯಿಸಿದರು. "ನೀವು ಚಿಂತಿಸಬೇಕಿಲ್ಲ ಕ್ಯಾಪ್ಟನ್ ಅವರು ನಮ್ಮ ವೈರಿಯಲ್ಲ ನಾವು ಇಲ್ಲಿ ವರ್ಮಾರನ್ನು ಭೇಟಿಯಾಗಿಲ್ಲ. ಮೆಟ್ರೋದಲ್ಲಿ ಸಾಧಿಸಿದ್ದೆವು. ನೀವು ಇಷ್ಟೊಂದು ಜಾಸ್ತಿಯಾಕೆ ಕುಡಿಯುತ್ತೀರಾ?" ಒಬ್ಬಾಕೆ ಹೇಳಿದಳು.

ಅವರ ನಿಷ್ಕಾಪಟದಿಂದ ಕ್ಯಾಪ್ಟನ್ ತೃಪ್ತನಾದ, ತಣ್ಣಗಾದ 'ಬೀರ್ ಕುಡಿ, ಓಲ್ಡ್‌ಬಾಯ್' ಎಂದು ಆಹ್ವಾನಿಸಿದ. "ಥ್ಯಾಂಕ್ಸ್" ಎಂದು ನಾನುತ್ತರಿಸಿದೆ

ನರ್ತನ ಆರಂಭವಾಯಿತು. ಕೆಂಚು ಕೂದಲಿನ ಕ್ಯಾಪ್ಟನ್ ಸೂಸಿಯನ್ನು ಡಾನ್ಸ್ ಮಾಡಲು ಒಂದೆಡೆ ಕರೆದುಕೊಂಡು ಹೋದ ನ್ಯಾನ್ಸಿ ಮತ್ತು ನಾನು ಹರಟುತ್ತಾ ಕುಳಿತೆವು. ನಾನು ಕುಣಿಯುವುದಿಲ್ಲ. ಕ್ಯಾಪ್ಟನ್ ಬಗ್ಗೆ ಎಚ್ಚರದಿಂದಿರುವಂತೆ ನಾನು ಆಕೆಯನ್ನು ಎಚ್ಚರಿಸಿದೆ. ಒಂದು ಪ್ರಕರಣ 'ದೊಡ್ಡದಾದ್ದರಿಂದ' ಸಂಘಟನೆಯಿಂದ ನಾನು ದೂರವಿರಬೇಕಾದ ಪ್ರಸಂಗವನ್ನು ಆಕೆಗೆ ತಿಳಿಸಿದೆ.

"ಎಲ್ಲ ಈ ಮನುಷ್ಯನ ವರದಿಯನ್ನು ಅವಲಂಬಿಸಿದೆ. ಬಹುಶಃ ನನ್ನನ್ನು ವಜಾ ಮಾಡಲಾಗುತ್ತದೆಂದು ಅನಿಸುತ್ತದೆ" ನ್ಯಾನ್ಸಿಗೆ ನಾನು ಹೇಳಿದೆ.

"ಒಂದು ವೇಳೆ ಹಾಗೇನಾದರೂ ಆದಲ್ಲಿ ಈ ಕೆಂಚುಕೂದಲಿನ ಮೂರ್ಖನನ್ನು ನಾವು ನೋಡಿಕೊಳ್ಳುತ್ತೇವೆ"-ನ್ಯಾನ್ಸಿ ನನಗೆ ಭರವಸೆ ಕೊಟ್ಟಳು. "ಹೊರಗಡೆ ಕ್ರಾಂತಿಕಾರಿ ಪಕ್ಷಗಳಿಂದ ಯಾರಾದರೂ ಸಿಗುವರೋ ಎಂದು ನಾನು ಹುಡುಕುತ್ತಿದ್ದೇನೆ" ನನ್ನ ಸಮಸ್ಯೆಯನ್ನು ಆಕೆಯ ಮುಂದೆ ತೋಡಿಕೊಂಡೆ.

ಗೆರಿಲ್ಲಾ ತರಬೇತಿ ಮಾಹಿತಿ

"ನನಗೆ ಯಾರೂ ಗೊತ್ತಿಲ್ಲ. ಆದರೆ ಮಾಲ್‌ನಲ್ಲಿ ಚಿನ್ನಪ್ಪ ಲಂಚ್ ಹೋಮ್‌ನಲ್ಲಿ ಅವರಿಗಾಗಿ ಹುಡುಕು. ಅನೇಕ ಕಮ್ಯುನಿಸ್ಟರು ಆ ಜಾಗದ ಬಳಿ ಸುಳಿದಾಡುತ್ತಿರುತ್ತಾರೆ. ಓಹ್ ಹೌದೌದು. ಇಲ್ಲಿನ ಎಫ್.ಸಿ. ಕಾಲೇಜ್‌ನಲ್ಲಿರುವ ಕಮ್ಯುನಿಸ್ಟರ ಪೈಕಿ ಕೆಲವರಿಗೆ ಮೇಜರ್ ಲೀ ಗೆರಿಲ್ಲಾ ತರಬೇತಿ ನೀಡುತ್ತಿದ್ದಾರೆ. ಅಂದ-ಹಾಗೆ, ನಾನು ನಿನ್ನೆ ಲೆಫ್ಟಿನೆಂಟ್ ಝುಢ್‌ರನ್ನು ಭೇಟಿಯಾಗಿದ್ದೆ. ದೆಹಲಿಯಲ್ಲಿ ಅರುಣಾ ಅಸಫ್ ಅಲಿಯವರನ್ನು ಭೇಟಿಯಾಗಿರುವುದಾಗಿಯೂ ಸಮಾಜವಾದಿಗಳು ನಮ್ಮ ರೀತಿಯಲ್ಲೇ ಯೋಜನೆ ರೂಪಿಸಿ ಕೆಲಸ ಮಾಡುತ್ತಿರುವುದಾಗಿಯೂ ಲೇ. ಝುಡ್ ಹೇಳಿದರು" ಎಂದು ನ್ಯಾನ್ಸಿ ನನಗೆ ವಿವರಿಸಿದಳು.

ಕುಣಿಯಲು ಹೋಗಿದ್ದ ಲೂಸಿ ಹಾಗೂ ಕ್ಯಾಪ್ಟನ್ ಜೋಡಿ ಟೇಬಲ್‌ಗೆ ಮರಳುವುದಕ್ಕೂ ಮುನ್ನ ಮರುದಿನ ಅವರ ಭೇಟಿಗೆ ವ್ಯವಸ್ಥೆ ಮಾಡಿದೆ.

ಕೆಂಚು ಕೂದಲಿನ ತೋಳ!

ನಾಗರಿಕ ಬಟ್ಟೆ ಧರಿಸಿದ್ದ ಸೂಸಿ ಒಬ್ಬಳೇ ನನ್ನ ಭೇಟಿಗೆ ಬಂದಳು.

"ಹೇ ಜೈ, ನೀವು ಜಾಗೃತಿಯಿಂದಿರಬೇಕು. ಈ ಕೆಂಗೂದಲಿನ ತೋಳ ನಿನ್ನ ಹಿಂದೆ ಬಿದ್ದಿದ್ದಾನೆ. ನೀವೊಬ್ಬರು ರಾಜಕೀಯ ಅನುಮಾನಾಸ್ಪದ ವ್ಯಕ್ತಿ ಎಂದು ಆತ ಹೇಳಿದ. ಮೇಜರ್‌ಗೆ ನಿಮ್ಮ ಬಗ್ಗೆ ವರದಿ ಸಲ್ಲಿಸಬೇಕಾಗಿದೆ ಎಂದೂ ಹೇಳಿದ" ಎಂಬುದಾಗಿ ನುಡಿದ ಸೂಸಿ, "ಆತನನ್ನು ನಾವು ನೋಡಿಕೊಳ್ಳುತ್ತೇವೆ. ಆದರೆ ನೀವು ಕೂಡ ಅಷ್ಟೇ ಜಾಗೃತಿಯಿಂದಿರಬೇಕು" ಎಂದಳು.

(ಮುಂದುವರಿಯುವುದು)

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

ಫೆಬ್ರವರಿ 3 ಮತ್ತು 4 2003
- ಶೈಕ್ಷಣಿಕ ಸಮಾವೇಶ - ಶಿಕ್ಷಣದ ಕೋಮುವಾದೀಕರಣದ ಕುರಿತು. ಸೆನೆಟ್ ಹಾಲ್, ಬೆಂಗಳೂರು. ಉದ್ಘಾಟನೆ - ಎನ್.ರಾಮ್, ಸಂಪಾದಕರು, ಫ್ರಂಟ್‌ಲೈನ್ ಸಂಘಟಕರು - ಎಸ್‌ಎಫ್‌ಐ, ಕರ್ನಾಟಕ ರಾಜ್ಯ ಸಮಿತಿ

ಫೆಬ್ರವರಿ 6, 2003 (ಗುರುವಾರ)
- ಬೆಂಗಾಲಿ ಅಸೋಸಿಯೇಷನ್ 'ಆಕಾಶ ನೋಡೋಣ' ಸ್ಲೈಡ್ ಶೋ ರಾತ್ರಿ 8 ಗಂಟೆಗೆ

ಫೆಬ್ರವರಿ 6, 7 ಮತ್ತು 8, 2003
- ಅಖಿಲ ಭಾರತ ಶಾಲಾ ಶಿಕ್ಷಕರ ಒಕ್ಕೂಟ - (STFI) ಅಖಿಲ ಭಾರತ ಸಮ್ಮೇಳನ, ಪಾಲಕ್ಕಾಡ್, ಕೇರಳ

ಫೆಬ್ರವರಿ 3, 2003, ಸೋಮವಾರ
- ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ರಾಜ್ಯ ಸಮಿತಿ ಕರೆ ಬರಗಾಲ ಕಾಮಗಾರಿಗಾಗಿ ಮತ್ತು ಕೂಲಿಗಾಗಿ ಕಾಳು ಯೋಜನೆ ಜಾರಿಗಾಗಿ ಒತ್ತಾಯಿಸಿ ಶಾಸಕರ ಮನೆ ಮತ್ತು ತಹಶೀಲ್ದಾರರ ಕಛೇರಿ ಮುಂದೆ ಧರಣಿ

ಫೆಬ್ರವರಿ 10, 2003,
- ಡಿವೈಎಫ್‌ಐ ನಿಂದ ಭ್ರಷ್ಟಾಚಾರ ವಿರೋಧಿ ಪ್ರತಿಭಟನೆ ಜಿಲ್ಲಾ - ತಾಲ್ಲೂಕು ಕೇಂದ್ರಗಳಲ್ಲಿ

(ನಿಮ್ಮ ಪ್ರದೇಶಗಳಲ್ಲಿ ನಡೆಯಲಿರುವ ಪ್ರಮುಖ ಕಾರ್ಯಕ್ರಮ/ ಚಳುವಳಿಗಳ ಬಗ್ಗೆ ಮುಂಚಿತವಾಗಿ ತಿಳಿಸಿರಿ)

ವಿದ್ಯುತ್ ದರ ಏರಿಕೆಯ ವಿರುದ್ಧ ಕೆ.ಇ.ಆರ್.ಸಿ.ಗೆ ಸಿಪಿಐ(ಎಂ) ಆಕ್ಷೇಪಣಾ ಪತ್ರ

ಕೆ.ಪಿ.ಟಿ.ಸಿ.ಎಲ್ ಮತ್ತು 4 ವಿದ್ಯುತ್ ಸರಬರಾಜು ಕಂಪನಿಗಳು ವಿದ್ಯುತ್ ದರ ಏರಿಸಲು ಮನವಿ ಸಲ್ಲಿಸಿರುವುದರ ವಿರುದ್ಧ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯು ಜನವರಿ 28 ರಂದು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಕೆ.ಇ.ಆರ್.ಸಿ) ಗೆ ತನ್ನ ಆಕ್ಷೇಪಣಾ ಪತ್ರ ಸಲ್ಲಿಸಿದ್ದು ಈ ಕೆಳಗಿನ ಪ್ರಮುಖ ಅಂಶಗಳು ಒಳಗೊಂಡಿವೆ.


ಕಳೆದ ವರ್ಷವಷ್ಟೇ ವಿದ್ಯುತ್ ದರ ಹೆಚ್ಚಿಸಲಾಗಿದ್ದು ಈಗಾಗಲೇ, ಮದ್ಯಮ ವರ್ಗ, ದಲಿತರು ಹಾಗೂ ರೈತರು ತೀವ್ರ ತೊಂದರೆಗೆ ಒಳಗಾಗಿದ್ದಾರೆ. ಈಗ ತೀವ್ರ ಬರಗಾಲದ ಹಿನ್ನೆಲೆಯಲ್ಲಿ, ಪುನಃ 10.2 ಶೇ ವಿದ್ಯುತ್ ದರ ಹೆಚ್ಚಳಕ್ಕೆ ಕೋರಿದ್ದು ಇದರಿಂದ ಈಗಾಗಲೇ ಜರ್ಜರಿತಗೊಂಡಿರುವ ಜನಸಾಮಾನ್ಯರು ತೀವ್ರ ಬಾಧೆಗೆ ಒಳಗಾಗುತ್ತಾರೆ. ಆದ್ದರಿಂದ ವಿದ್ಯುತ್ ದರ ಹಚ್ಚಿಸಬಾರದೆಂದು ಸಿಪಿಐ(ಎಂ) ಆಗ್ರಹಿಸಿದೆ.

ಕೆ.ಪಿ.ಟಿ.ಸಿ.ಎಲ್ ವಿಭಜನೆ ಮತ್ತು ಖಾಸಗೀಕರಣ:

ಕಳೆದ ವರ್ಷ, 23-2-2002 ರಂದು ಕೆ.ಇ.ಆರ್.ಸಿ ಗೆ ನೀಡಿದ ಆಕ್ಷೇಪಣಾ ಪತ್ರದಲ್ಲೇ ಕೆ.ಪಿ.ಟಿ.ಸಿ.ಎಲ್ ವಿಭಜನೆ ಸರಿಯೇ ಎಂದು ಸಿಪಿಐ(ಎಂ) ವಾದಿಸಿತ್ತು. ಇದೀಗ ಕೆ.ಪಿ.ಟಿ.ಸಿ.ಎಲ್ ವಿಭಜನೆ ಮಾಡಿ 5 ವಿವಿಧ ಕಂಪನಿಗಳನ್ನಾಗಿ ಮಾಡಿದ್ದುದರಿಂದ ಅದಕ್ಕೆ ತಗಲುವ ಹೆಚ್ಚುವರಿ ಆಡಳಿತ ವೆಚ್ಚ ಜನಸಾಮಾನ್ಯರ ಮೇಲೆ ಬೀಳುತ್ತದೆ. ಅದರಲ್ಲೂ ಕೆ.ಪಿ.ಟಿ.ಸಿ.ಎಲ್., ಕೆ.ಇ.ಆರ್.ಸಿ. ಗೆ ಸಲ್ಲಿಸಿದ ನಿರೀಕ್ಷಿತ ಆದಾಯ ಅರ್ಜಿ (ಇ.ಆರ್.ಸಿ) ಯಲ್ಲಿ ವಿತರಣಾ ವ್ಯವಹಾರದಲ್ಲಿ ಲಾಭದ ಅಂಶ ಕಡಿಮೆಯಾಗಿದ್ದುದರಿಂದ 6000 ಕೋಟಿ ರೂ ವ್ಯವಹಾರ ನಿರ್ವಹಿಸಬೇಕಾದುದರಿಂದ ಹಣದ ಹರಿವಿನ (cash flor) ಕೊರತೆ ತಪ್ಪಿಸಲು ಹೆಚ್ಚಿನ ಹಣ ಬೇಕಾಗುತ್ತದೆ ಎಂದು ಹೇಳಿದ್ದು ದರ ಹೆಚ್ಚಿಸುವುದು ಅನಿವಾರ್ಯ ಎಂದು ಹೇಳಿದೆ.

ವಿಭಜನೆಯನ್ನು ಮೊದಲಾಗಿ ಜಾರಿ ಮಾಡಿ ಖಾಸಗೀಕರಣಕ್ಕೆ ಎಡೆ ಮಾಡಿದ ಓರಿಸ್ಸಾ, ಅಮೇರಿಕಾದ ಕ್ಯಾಲಿಫೋರ್ನಿಯಾ, ಬ್ರಿಟನ್ ಮೊದಲಾದೆಡೆ ವಿದ್ಯುತ್ ವಿತರಣಾ ವ್ಯವಸ್ಥೆಯಲ್ಲಿ ಅರಾಜಕತೆ ಉಂಟಾಗಿರುವದನ್ನು ಸಿಪಿಐ(ಎಂ) ಕೆ.ಇ.ಆರ್.ಸಿಯ ಗಮನಕ್ಕೆ ತಂದಿದೆ.

ಉತ್ಪಾದನೆ, ಪ್ರಸರಣಾ ಮತ್ತು ವಿತರಣೆಯನ್ನು ಖಾಸಗೀಕರಣಗೊಳಿಸುವುದನ್ನು ಸಿಪಿಐ(ಎಂ) ವಿರೋಧಿಸಿದೆ. ವಿಶ್ವಬ್ಯಾಂಕಿನ ಶರತ್ತಿನ ಪ್ರಕಾರ ಪ್ರತಿ ಹಂತದಲ್ಲೂ ಶೇ.16 ಲಾಭಾಂಶ ನೀಡಬೇಕಾಗುತ್ತದೆ. ಅಂದರೆ ಪೂರ್ಣವಾಗಿ ಖಾಸಗೀಕರಣಗೊಂಡಾಗ ಜನರ ಮೇಲೆ ಹೊರೆ ಎಷ್ಟು ಹೆಚ್ಚಾಗುತ್ತದೆ ಎಂಬುದು ಊಹಿಸುವುದು ಕಷ್ಟ.



ಈಗಾಗಲೇ 87 ದಶಲಕ್ಷ ಯೂನಿಟ್ ವಿದ್ಯುತ್ ಪ್ರತಿದಿನ ಖರ್ಚಾಗುತ್ತಿದೆ. ಅದನ್ನು 85 ದಶಲಕ್ಷಕ್ಕೆ ಇಳಿಸಬೇಕು ಎಂದು ವಿಶ್ವಬ್ಯಾಂಕ್ ಆದೇಶಿಸಿದ್ದು ಅದರ ಜಾರಿಯ ಬಗ್ಗೆ ಸರಕಾರ ಹೇಳಿಕೆ ನೀಡಿದೆ. ಹೀಗೆ ಮುಂದಿನ ದಿನಗಳಲ್ಲಿ ಪ್ರತಿಹಂತದಲ್ಲೂ ವಿಶ್ವಬ್ಯಾಂಕ್‌ನ ಶರತ್ತುಗಳು ಮದ್ಯ ಪ್ರವೇಶ ಮಾಡಲಿದೆ. ಆದ್ದರಿಂದ ಖಾಸಗೀಕರಣವನ್ನು ತಡೆಯಬೇಕು ಎಂದು ಸಿಪಿಐ(ಎಂ) ವಾದಿಸಿದೆ.

ಇಲ್ಲಿಯವರೆಗೆ ಎಲ್ಲಾ ವಿದ್ಯುತ್ ತೊಂದರೆಗಳಿಗೆ ಕೆ.ಇ.ಬಿ / ಕೆ.ಪಿ.ಟಿ.ಸಿ.ಎಲ್‌ನ್ನು ಹೊಣೆಗಾರರನ್ನಾಗಿ ಮಾಡಬಹುದಾಗಿತ್ತು. ಈ ವಿಭಜನೆಯಿಂದಾಗಿ ಹಾಗೂ ಉದ್ದೇಶಿತ ಖಾಸಗೀಕರಣದಿಂದ ಪ್ರತಿಯೊಂದು ಕಂಪನಿ ಹೊಣೆಗಾರಿಕೆಯಿಂದ ಜಾರಿಗೊಳ್ಳುವ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ವಿದ್ಯುತ್ ಕೊಳ್ಳುವ ಯೋಜನೆ (Procesemant plan) ಬದಲಾವಣೆಗೆ ಒತ್ತಾಯ:

ವಿದ್ಯುತ್‌ನ್ನು ಕೊಳ್ಳುವ ಯೋಜನೆಯಲ್ಲಿ ತೀವ್ರ ಬದಲಾವಣೆ ತರಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ. ಬರಗಾಲದ ಹೆಸರಿನಲ್ಲಿ ಜಲವಿದ್ಯುತ್‌ನ್ನು ಖರೀದಿಸುವುದನ್ನು ತೀವ್ರವಾಗಿ ಕಡಿತಗೊಳಿಸಲು ಸೂಚನೆ ನೀಡಿದ ಕೆ.ಪಿ.ಟಿ.ಸಿ.ಎಲ್ ಅದಕ್ಕೆ ಬದಲಾಗಿ ಹೆಚ್ಚು ದರದಲ್ಲಿ ವಿದ್ಯುತ್ ಒದಗಿಸುವ ಖಾಸಗಿ ಕಂಪನಿಗಳಿಂದ, ಕೇಂದ್ರ ಸ್ವಾಮ್ಯದ ವಿದ್ಯುತ್ ಕಂಪನಿಗಳಿಂದ ವಿದ್ಯುತ್ ಖರೀದಿಸಲು ಅವಕಾಶ ಕೋರಿದೆ. ಜಲವಿದ್ಯುತ್ ಯೂನಿಟ್‌ಗೆ ಸರಾಸರಿ 48.5 ಪೈಸೆಗೆ ದೊರೆತರೆ, ಐಪಿಪಿಗಳಿಂದ ಖರೀದಿಸುವ ವಿದ್ಯುತ್ ದರ ಸರಾಸರಿ ರೂ.4ರಷ್ಟಾಗುತ್ತದೆ. 2001ರಲ್ಲಿ 10,396 ದಶಲಕ್ಷ ಯೂನಿಟ್ ಜಲವಿದ್ಯುತ್‌ನ್ನು ಖರೀದಿಸಲಾಗಿತ್ತು. ಈಗ ಸಲ್ಲಿಸಿದ ಪ್ರಸ್ತಾವನೆ ಪ್ರಕಾರ ಕೇವಲ 6431 ದಶಲಕ್ಷ ಯೂನಿಟ್‌ಗಳನ್ನು ಖರೀದಿಸುವ ಗುರಿ ಹೊಂದಿದೆ. ಪ್ರತಿವರ್ಷವೂ ಬರಗಾಲ ಬರುವ ಸಂಭವ ಇಲ್ಲ. ಆದುದರಿಂದ ಜಲವಿದ್ಯುತ್‌ನ ಖರೀದಿಯನ್ನು ಹೆಚ್ಚಿಸಿ, ತಣ್ಣೀರು ಬಾವಿ, ರಾಯಲ ಸೀಮಾ, ಹಾಗೂ ಟಾಟಾ ಕಂಪನಿಗಳಿಂದ ಪಡೆಯುವ ಹೆಚ್ಚು ದರದ ವಿದ್ಯುತ್‌ನ್ನು ಕಡಿತಗೊಳಿಸಬೇಕೆಂದು ಸಿಪಿಐ(ಎಂ) ಮನವಿ ಮಾಡಿದೆ.

ಅಲ್ಲದೆ ಕೇಂದ್ರ —ಯೋಜನೆಯ ನೈವೇಲಿ ಹಾಗೂ ಕೈಗಾದಿಂದ ದೊರಕುವ ವಿದ್ಯುತ್‌ನ ಖರೀದಿ ಕಡಿತಗೊಳಿಸಬೇಕೆಂದು ಸಿಪಿಐ(ಎಂ) ಹೇಳಿದೆ.

ಪ್ರಸರಣ ಮತ್ತು ವಿತರಣಾ ನಷ್ಟ: ಪ್ರಸರಣ ಮತ್ತು ವಿತರಣಾ ನಷ್ಟವನ್ನು ಕಡಿತಗೊಳಿಸಬೇಕೆಂಬ ಕೆ.ಇ.ಆರ್.ಸಿ.ಯು ಆದೇಶವನ್ನು ಕೆ.ಪಿ.ಟಿ.ಸಿ.ಎಲ್ ಪಾಲಿಸಿಲ್ಲ. ಇದರಿಂದ ಸಾವಿರಾರು ಕೋಟಿ ರೂ. ಉಳಿತಾಯ ಆಗಬಹುದಾಗಿತ್ತು. ವಿದ್ಯುತ್ ಕಂಪನಿಗಳು ಕೆ.ಇ.ಆರ್.ಸಿಯ ಆದೇಶವನ್ನು ಪಾಲಿಸದೆ, ಅದರ ಹೊರೆಯನ್ನು ಜನರು ಭರಿಸಬೇಕಾದ ಪ್ರಶ್ನೆ ಎದುರಾಗಿದೆ.

ಪ್ರಾದೇಶಿಕ ಅಸಮಾನತೆ: ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಪ್ರಾದೇಶಿಕ ಅಸಮಾನತೆ ತೀವ್ರಗೊಂಡಿದ್ದು ಸರಕಾರವೇ ನೇಮಿಸಿದ ನಂಜುಂಡಪ್ಪ ಸಮಿತಿ ವರದಿಯಲ್ಲಿ ಇದು ವ್ಯಕ್ತವಾಗಿದೆ. ವಿದ್ಯುತ್ ಕ್ಷೇತ್ರದಲ್ಲೂ ತೀವ್ರ ಅಸಮಾನತೆ ಇರುವುದು ಕಾಣುತ್ತದೆ. ಬೆಸ್ಕಾಂ ವಲಯದಲ್ಲಿ 12330 ದಶಲಕ್ಷ ಯೂನಿಟ್ (ಶೇ. 45.57) ವಿದ್ಯುತ್ ಬಳಕೆಯಾಗುತ್ತಿದ್ದರೆ, ಗೆಸ್ಕಾಂ ವಲಯದಲ್ಲಿ ಕೇವಲ 3709 ದಶಲಕ್ಷ ಯೂನಿಟ್ (ಶೇ.13.70) ವಿದ್ಯುತ್ ವ್ಯಯವಾಗುತ್ತದೆ.

ಇಂತಹ ಸಂದರ್ಭದಲ್ಲಿ ಕ್ರಾಸ್ ಸಬ್ಸಿಡಿ ಮೂಲಕ ಹಿಂದುಳಿದ ಪ್ರದೇಶಗಳಿಗೆ ಉತ್ತಮ ಗುಣಮಟ್ಟದ ವಿದ್ಯುತ್ತನ್ನು ಕಡಿಮೆ ದರದಲ್ಲಿ ನೀಡುವ ವ್ಯವಸ್ಥೆಯಾಗಬೇಕು. ಅಲ್ಲದೆ ಹೋದರೆ ಈಗಾಗಲೇ ಹೆಚ್ಚುತ್ತಿರುವ ಪ್ರತ್ಯೇಕತಾ ಧ್ವನಿಗೆ ಇನ್ನಷ್ಟು ಪುಷ್ಟಿ ಸಿಗುತ್ತದೆ.

ದಲಿತ ವಿರೋಧಿ, ರೈತ ವಿರೋಧಿ ಕ್ರಮಗಳನ್ನು ಹಿಂತೆಗೆದುಕೊಳ್ಳಲು ಆಗ್ರಹ:

ಬರಗಾಲದ ಪರಿಸ್ಥಿತಿಯಲ್ಲಿ ಕೂಲಿಕಾರರು, ಬಡಜನರು ಕೆಲಸ ಇಲ್ಲದೆ ಅಲೆದಾಡುತ್ತಿರುವಾಗ ಭಾಗ್ಯ ಜ್ಯೋತಿ / ಕುಟೀರ ಜ್ಯೋತಿ ವಿಭಾಗಗಳಿಗೆ ವಿದ್ಯುತ್ ದರ ಹೆಚ್ಚಿಸುವುದು ದಲಿತ ವಿರೋಧಿ ಕ್ರಮವಾಗಿದೆ.

ನೀರಾವರಿ ಪಂಪ್‌ಸೆಟ್ ಬಳಕೆದಾರರಿಗೆ ದರ ಹೆಚ್ಚಿಸುವ ಪ್ರಸ್ತಾವನೆ ಇಲ್ಲದಿದ್ದರೂ, ಬರಗಾಲದಿಂದಾಗಿ ಈಗಾಗಲೇ ಹೆಚ್ಚಳಗೊಂಡ ದರವನ್ನು ಕಟ್ಟಲಾಗದ ಪರಿಸ್ಥಿತಿಯಲ್ಲಿದ್ದಾರೆ. ಆದ್ದರಿಂದ, 2000 ಇಸವಿಯಲ್ಲಿ ಇದ್ದ ರೀತಿಯಲ್ಲೇ, ನೀರಾವರಿ ಪಂಪ್‌ಸೆಟ್‌ಗಳಿಗೆ ದರವನ್ನು ಹೆಚ್.ಪಿ.ಗೆ ರೂ 300ಕ್ಕೆ ಇಳಿಸಬೇಕು. ಹಾಗೂ ಭಾಗ್ಯಜ್ಯೋತಿ/ ಕುಟೀರ ಜ್ಯೋತಿ ದೀಪಗಳಿಗೆ ದರವನ್ನು ರೂ.10/- ಕ್ಕೆ ಇಳಿಸಬೇಕೆಂದು ಸಿಪಿಐ(ಎಂ) ವಾದಿಸಿದೆ.

ಗೃಹ ಬಳಕೆ: ಗೃಹಬಳಕೆ ವಿದ್ಯುತ್‌ನಲ್ಲಿ ಮೊದಲ 30 ಯೂನಿಟ್‌ಗಳಿಗೆ ರೂ.1-50ರ ಬದಲಿಗೆ, ಮೊದಲ 100 ಯೂನಿಟ್‌ಗಳಿಗೆ ಪೂರ್ತಿಯಾಗಿ ರೂ.2-50ಕ್ಕೆ ಹೆಚ್ಚಿಸಬೇಕೆಂದು 4 ಕಂಪನಿಗಳು ಕೋರಿವೆ. ಸರ್ವ ವಿದ್ಯುತ್ ಗೃಹಬಳಕೆ (AEH) ಗೂ ತೀವ್ರವಾಗಿ ದರ ಹೆಚ್ಚಳ ಮಾಡಲಾಗಿದೆ. ಇದು ನಗರವಾಸಿಗಳ ಮೇಲ ತೀವ್ರ ಪರಿಣಾಮ ಬೀರಲಿದೆ.

ಆದ್ದರಿಂದ ಉದ್ದೇಶಿತ ವಿದ್ಯುತ್‌ದರ ಹೆಚ್ಚಳದ ಕೋರಿಕೆಯನ್ನು ತಿರಸ್ಕರಿಸಬೇಕೆಂದು ಸಿಪಿಐ(ಎಂ) ಹೇಳಿದೆ. ಬದಲಿಗೆ ಜಲವಿದ್ಯುತ್ ಉತ್ಪಾದನೆ ಮತ್ತು ಖರೀದಿಗೆ ಹೆಚ್ಚು ಪ್ರೋತ್ಸಾಹ ನೀಡಿ ವಿದ್ಯುತ್ ಸೋರಿಕೆಯನ್ನು ತಡೆದು, ಸಾರ್ವಜನಿಕ ಕ್ಷೇತ್ರದಲ್ಲೇ ಈ ಕಂಪನಿಗಳನ್ನು ಆಡಳಿತ ದಕ್ಷತೆಯನ್ನು ಹೆಚ್ಚಿಸಿ, ಈ ಕಂಪನಿಗಳನ್ನು ಬಲಗೊಳಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ. ○

ದಾವೂಸ್‌ನಲ್ಲಿ ಮಂಡಿಯೂರಿದ ಕೃಷ್ಣ ದುರಾಡಳಿತದ ವಿರುದ್ಧ ಜನ

ದಾವೂಸನಿಂದ ಕೃಷ್ಣ ಧರೆಗಿಳಿದಿದ್ದಾರೆ. ಭಿನ್ನಮತೀಯರ ಬಾಯಿಗೆ ಹೈಕಮಾಂಡಿನ ಬೀಗ ಜಡಿಸಿದ ನಂತರವೇ ಅವರು ವಿಮಾನವೇರಿದ್ದು. ಎರಡನೇ ಬಾರಿಗೆ ಮೂರು ವರ್ಷಗಳ ನಂತರ ವಿಶ್ವದ ಬಂಡವಾಳದಾರರ ಮುಂದೆ ವಿಧೇಯನಾಗಿ ಮಂಡಿಯೂರಿದ್ದು. ಅಭಿವೃದ್ಧಿಯೆಂದರೆ ತಮ್ಮ ಅಭಿವೃದ್ಧಿಯಾಗದೇ ದೇಶ-ರಾಜ್ಯದಲ್ಲಿ ಹೇಗೆ ಆದಾವು? ಎಂಬ ಅದ್ಭುತ ಪಾಠ ಕೇಳಿ ಅವರಿಂದ ಹೇಳಿಸಿಕೊಂಡು ಉಪದೇಶ-ಆದೇಶಗಳ ಪಾಲನೆಗೆ ಟೊಂಕಕಟ್ಟಿ ರೀಕುತಾಕಿನ ಬೂಟಿನಲ್ಲಿ ಮುಂಚಿದ್ದು - ಚಂದ್ರಬಾಬು ನಾಯ್ಡುವನ್ನು ಮೀರಿಸಿಯೇ ತೀರಬೇಕೆಂದು ಸಂಕಲ್ಪಿಸಿದ್ದು, ಜಗತ್ತಿನ ಸುಲಿಗೆಗಾರರು ಕೃಷ್ಣರವರ ಕಾರ್ಯವೈಖರಿ, ರಾಜ್ಯವನ್ನು ದುಗ್ಗಾಣಿಗೆ ಮಾರುತ್ತಿರುವ ಪರಿಯನ್ನು ಕೇಳಿ, ನೋಡಿ ಭಲೇ ಕೃಷ್ಣ, ಭೇಷ್ ಕೃಷ್ಣ ಎನ್ನುತ್ತಿದ್ದಾರೆ. ಇತ್ತ ಐಎಂಎಫ್, ವಿಶ್ವಬ್ಯಾಂಕ್ ಆದೇಶಗಳ ಆಜ್ಞಾಧಾರಕ ಕೃಷ್ಣರ ಕಾಂಗ್ರೆಸ್ ಸರ್ಕಾರ ದುರಾಡಳಿತಕ್ಕೆ ರಾಜ್ಯದಲ್ಲಿ ಜನರು ತಿರುಗಿ ಬೀಳುತ್ತಿದ್ದಾರೆ, ಪ್ರತಿಭಟಿಸಲು ಮುಂದಾಗಿದ್ದಾರೆ.

ಸಿಪಿಐ(ಎಂ) ಪ್ರಚಾರಾಂದೋಲಕ್ಕೆ ಅಪೂರ್ವ ಸ್ಪಂದನ

ಬಿಜೆಪಿ ಕೇಂದ್ರ ಸರ್ಕಾರದ ದೇಶದ್ರೋಹಿ, ಜನದ್ರೋಹಿ ನೀತಿಯ ವಿರುದ್ಧದ ಜನತೆಯ ಮನೋಭಾವ, ಜನತಾದಳದಂತಹ ಸೆಕ್ಯೂಲರ್ ರಾಜಕೀಯ ಪಕ್ಷಗಳಲ್ಲಿನ ಇನ್ನೂ ಮೂಡಿರದ ಐಕ್ಯತೆ, ಮುಂದುವರಿದ ಅನೈಕ್ಯತೆ ತನಗೆ ವರದಾನವಾಗಿದೆಯೆಂದೇ ಕೃಷ್ಣ ಭಾವಿಸಿದ್ದಾರೆ. ತನ್ನ ಸ್ವಂತ ಪಕ್ಷದೊಳಗಿನಿಂದಲೇ ಭುಗಿಲೆದ್ದ ಭಿನ್ನಮತೀಯ ಟೀಕೆಗಳು ಮತ್ತು ಅವರು ಎತ್ತಿರುವ ಪ್ರಶ್ನೆಗಳಿಗೆ ಉತ್ತರಿಸದೇ ಹೈಕಮಾಂಡಿನ 'ಆಶೀರ್ವಾದ' (ಹಣದ ಡೀಲು ಎನ್ನುತ್ತಾರೆ) ಉಸ್ತುವಾರಿ ನಾಯಕರ ಮ್ಯಾನೇಜ್ ಮಾಡುವ ಮೂಲಕ ವಿರೋಧದ ದನಿ ಅಡಗಿಸಿ ಕುರ್ಚಿ ಉಳಿಸಿಕೊಂಡು ಬೀಗು ತ್ತಿದ್ದಾರೆ. ಐಎಂಎಫ್, ವಿಶ್ವಬ್ಯಾಂಕ್ ಆದೇಶ ಗಳನ್ನು ಶಿರಸಾವಹಿಸಿ ಜಾರಿಗೊಳಿಸುತ್ತಾ ಅಮೂಲ್ಯ ಸಾರ್ವ ಜನಿಕ ಆಸ್ತಿಗಳನ್ನು ದುಗ್ಗಾಣಿಗೆ ಮಾರುತ್ತಾ ಹೊರಟಿದ್ದಾರೆ.


ಹಿಂದಿನಂತೆ ಈಗಲೂ ಕೃಷ್ಣರಿಗೆ ನಂಬರ್ 1

ಪುಟ 10 ಕ್ಕೆ



ಸಾಲದ ಹೊರೆ - ಗುಬ್ಬಿ ರೈತ ರಾಜಣ್ಣ ಆತ್ಮಹತ್ಯೆ

ಮತ್ತೆ ರಾಜ್ಯದಲ್ಲಿ ರೈತರ ಆತ್ಮಹತ್ಯೆ ಸರಣಿ ಆರಂಭಗೊಂಡಿದೆ. ಪರಿಹಾರಕ್ಕಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಎಂಬ ಡಾ. ವೀರೇಶ್‌ರವರ ಅಮಾನವೀಯ ವರದಿಯ ಅಂಶವನ್ನು ಅಂಗೀಕರಿಸಿ, ಬಾಯಿ ಮುಚ್ಚಿ ಕುಳಿತು ಬಿಟ್ಟಿದೆ ಕೃಷ್ಣರ ಸರ್ಕಾರ. ದಾವೂಸ್ ಪ್ರವಾಸದಲ್ಲಿ ವಿಶ್ವ ಬಂಡವಾಳಗಾರರ ಮುಂದೆ ಬಡಾಯಿ ಕೊಚ್ಚಿಕೊಂಡು ವಾಪಸಾದ ಕೃಷ್ಣರ ರಾಜ್ಯದಲ್ಲಿ ನಡೆಯುತ್ತಿರುವ ತಲ್ಲಣಕಾರಿ ರೈತನ ಆತ್ಮಹತ್ಯೆ ವರದಿಯಿಲ್ಲಿದೆ.



ಮೃತ ರಾಜಣ್ಣ

ಚಂದ್ರಪ್ಪ.ಟಿ

ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು ಸಿ.ಎಸ್.ಪುರ ಹೋಬಳಿಯ ಉಂಗ್ರ ಸಮೀಪದಲ್ಲಿ ಮಲ್ಲಪ್ಪನಹಳ್ಳಿಪಾಳ್ಯದ 45 ವಯಸ್ಸಿನ ರಾಜಣ್ಣನಿಗೆ, ಪಿತ್ರಾರ್ಜಿತವಾಗಿ ಬಂದ, 20 ಗುಂಟೆಯ 2 ತುಂಡು ಭೂಮಿಗಳು ವಾಸಿಸಲು ಇರುವ ಕುಂಬಾರ ಹೆಂಚಿನ ಮನೆ ಬಿಟ್ಟರೆ ಬೇರೇನೂ ಆಸ್ತಿಯೇ ಇಲ್ಲ. ರಾಜಣ್ಣನದು ದೊಡ್ಡ ಸಂಸಾರ ಏಳು (7)ಜನ ಮಕ್ಕಳು. 6 ಜನ ಹೆಣ್ಣು ಮಕ್ಕಳು, ನಂತರ ಏಳನೆಯವ ಆಂಜನಪ್ಪ ಎಂಬ ಮಗ ಈಗ 4ನೇ ತರಗತಿಯಲ್ಲಿ ಓದುತ್ತಿದ್ದಾನೆ. ಇಬ್ಬರು ಹೆಣ್ಣು ಮಕ್ಕಳಿಗೆ ಮದುವೆಯಾಗಿದೆ. ರಾಜಣ್ಣ ಸಂಕೋಚ ಸ್ವಬಾವದ ವ್ಯಕ್ತಿ. ಆದರೆ ಶ್ರಮಪಟ್ಟು ದುಡಿಯಬೇಕೆಂಬ ಛಲವೊಂದಿದ್ದ ವನು. 2ನೇ ಹೆಣ್ಣು ಮಗಳ ಮದುವೆ ಮಾಡಿ ಕೊಟ್ಟ ನಂತರ ಇದ್ದ ಜಮೀನನ್ನು ಉತ್ತಮ ಪಡಿಸಲು ಕಲ್ಪತರು ಗ್ರಾಮೀಣ ಬ್ಯಾಂಕ್ ಮಾವಿನ ಹಳ್ಳಿಗೆ ಮೊರೆಹೊಕ್ಕು ಚಪ್ಪಲಿ ಸವೆಸಿ 26 ಸಾವಿರ ರೂಗಳ ಕೃಷಿ ಸಾಲ ಪಡೆದ. ರಾಜಣ್ಣ ತನ್ನ 20 ಗುಂಟೆ ಜಮೀನಿನಲ್ಲಿ ಅಡಿಕೆ ಮತ್ತು ಒಂದಷ್ಟು ತೆಂಗಿನ ಸಸಿಗಳನ್ನು ಇಟ್ಟು ತೆರೆದ ಬಾವಿ ತೆರೆದ ಆದರೆ, ಹಣವು ಅಷ್ಟಕ್ಕೆ ಮುಗಿಯಿತು. ಬಾವಿಗೆ ಕಲ್ಲು ಕಟ್ಟಿಸಲಾಗಲಿಲ್ಲ. ಹೀಗೆ ಕಳೆದಿತ್ತು ಕಾಲ. ಕಳೆದ ವರ್ಷ ಬಾವಿಗೆ ಮಣ್ಣು ತುಂಬಿಕೊಂಡಿದ್ದ ರಿಂದ. ಮತ್ತೆ ಮೂರು ಸಾವಿರ ರೂಪಾಯಿ ಹೊಂದಿಸಿ ಬಾವಿಯಿಂದ ಮಣ್ಣು ತೆಗೆಸುವಷ್ಟರಲ್ಲಿ ಸುಸ್ತಾಗಿದ್ದ ರಾಜಣ್ಣ. ಆದರೆ ಪಟ್ಟ ಶ್ರಮ ಸಾರ್ಥಕವಾಗಲಿಲ್ಲ. ಮಳೆಯೂ ಬರಲಿಲ್ಲ. ಬಾವಿ ಒಣಗಿ ತೊಟ್ಟು ನೀರೂ ಇಲ್ಲದಂತಾಯಿತು. ಹೇಗಾದರೂ ಮಾಡಿ ತೆಂಗು, ಅಡಿಕೆ ಉಳಿಸಲೆಂದು ಅಕ್ಕ ಪಕ್ಕದ ರೈತರನ್ನು ಕಾಡಿಬೇಡಿದ. ಯಾವಾಗೆಂದರಾವಾಗ ಕೈಕೊಡುವ ಕರೆಂಟು, ಹೆಚ್ಚಿರುವ ಬಿಲ್ಲಿನಿಂದಾಗಿ ಅಕ್ಕಪಕ್ಕದವರು ನೆರವಾದದ್ದು ಅಷ್ಟಕ್ಕಷ್ಟೆ.

ರಾಜಣ್ಣನಿಗೆ ದಿಕ್ಕು ತೋಚದಾಯಿತು. ಇದ್ದ ಬಾವಿಯನ್ನು ಮತ್ತಷ್ಟು ಆಳಕ್ಕಿಳಿಸಿ ನೀರು ಪಡೆದು ಫಸಲು ಉಳಿಸದೆ ಬೇರೆ ದಾರಿಯಿಲ್ಲ. ಆದಕ್ಕಾಗಿ ಬೇಕಾಗುವ ಹಣಕ್ಕೆ ಮತ್ತೆ ಊರಲ್ಲಿ ಕೈಸಾಲಕ್ಕಾಗಿ ಪರದಾಡಿದ. ಎಲ್ಲೂ ಬಿಡಿಗಾಸೂ ಹುಟ್ಟಲಿಲ್ಲ. ರಾಜಣ್ಣನಿಗೆ ಮದುವೆಯಾಗಬೇಕಾದ 4 ಹೆಣ್ಣು ಮಕ್ಕಳು, ಬ್ಯಾಂಕಿನಲ್ಲಿ ಬೆಳೆಯುತ್ತಿರುವ ಸಾಲ, ಬಡ್ಡಿ, ಅದನ್ನು ತೀರಿಸಲು, ಇರುವ ಅಡಿಕೆ ತೆಂಗು ಒಣಗಿ ಸೊರಗುತ್ತಿದೆ. ಎಲ್ಲವನ್ನೂ ಅರಗಿಸಿ ಕೊಳ್ಳದಷ್ಟು ಸಂಕೀರ್ಣತೆಯಲ್ಲಿ ಸಿಲುಕಿದ ರಾಜಣ್ಣ. ತನ್ನ ಪತ್ನಿ ರೇಣುಕಮ್ಮನಿಗೆ "ಗುಬ್ಬಿಗ್ಹೋಗಿ ಡೈನಾಮೆಟ್ ತತ್ತೀನಿ ಬಾವಿನ ಇನ್ನಷ್ಟು ಆಳಕ್ಕೆ ಇಳಸಾನ ನೀರು ಬತ್ತದೆ". ಎಂದು ಜನವರಿ 4ರಂದು ಶನಿವಾರ ಬೆಳಿಗ್ಗೆ ಮನೆಬಿಟ್ಟು ಹೋದ ರಾಜಣ್ಣ ಮರಳಿ ಮನೆಗೆ ಬಂದಿದ್ದು ಶವವಾಗಿ.

ಸ್ವಾಮಿ ನಮ್ಮೆಜಮಾನ ಯಾರ ತಂಟೆಗೂ ಹೋದೋನಲ್ಲ. ಯಾವ ಕೆಟ್ಟ ಚಟಾನೂ ಇಲ್ಲ. ನನಗ್ಗೊತ್ತಿಲ್ಲದಂಗೆ ಬಾವಿ ತೋಡ್ಸೋವಾಗ ವಸಿ ಸಾಲ ಮಾಡಿದ್ರಂತೆ ಸ್ವಾಮಿ. ಅಡಿಕೆ ತೋಟತ್ತಾವ ಇದ್ದಾಗ ಮ್ಯಾನೇಜರ್ರು ಬಂದು ಸಾಲ ಕಟ್ಟು ಅಂತ ದಬಾಯಿಸಿದ್ರು ಸ್ವಾಮಿ. ನಮ್ಮೆಜಮಾನ ಪರಿಪರಿಯಾಗಿ ಮಳೆ ಬಂದಿಲ್ಲ ಬಾವಿ ಬತ್ತೋಗೈತೆ. ಫಸಲು ಹೋಗೈತೆ ನಿಧಾನ ಆದ್ರು, ನಿಮ್ಮ ಸಾಲ ತೀರಿಸ್ತೀನಿ. ಅಂತ ಹೇಳಿದ್ರೂ ಕೇಳದೆ ಬಾಯಿಗೆ ಬಂದ್ಹಂಗೆ ಬೈದು ನೋಟೀಸ್ ಕೊಟ್ಟು ಹೋದ್ರು ಆವತ್ನಿಂದ ಮಂಕಾದ ನನ್ನೊಡೆಯ ಹೇಳದೇ ಕೇಳದೇ ಅದೆಂತದೋ ವಿಷ ಕುಡಿದು ಸತ್ತೋದ ಸ್ವಾಮಿ.... ಎಂದು ಒಂದೇ ಉಸಿರಲ್ಲಿ ಗೋಳಾಡುವ ರೇಣುಕಮ್ಮನ ಮಾತುಗಳು ಕೇಳಿದ ಯಾರಿಗಾದರೂ ಕರಳು ಕಿತ್ತು ಬರದೆ ಇರಲಾರದು. ರಾಜಣ್ಣ ಸತ್ತು ಹದಿನೈದು ದಿನಗಳಾದರೂ ಮಾಧ್ಯಮಗಳಲ್ಲಿ ಅದರ ಸುದ್ದಿಯೇ ಇಲ್ಲ. ಇತ್ತೀಚೆಗೆ ತಾನೇ ಜಿಲ್ಲೆಗೆ ಬಂದು ಹೋದ ಸಚಿವರು ರೈತರ ಬಗ್ಗೆ ಸುರಿಸಿದ ಮೊಸಳೆ ಕಣ್ಣೀರಿನ ಸುದ್ದಿ ಪುಟಗಟ್ಟಲೇ ಪತ್ರಿಕೆಗಳಲ್ಲಿ ಪ್ರಕಟವಾಯಿತಾದರೂ ಆತ್ಮಹತ್ಯೆಗೊಳಗಾದ ರಾಜಣ್ಣನ ಸುದ್ದಿಯು ಒಂದು ಸಾಲೂ ಪತ್ರಿಕೆಯಲ್ಲಿಲ್ಲ. ಜಿಲ್ಲಾಡಳಿತ ಭಾಗವಾದ ತಹಶೀಲ್ದಾರ್ ರಾಗಲಿ ಜಿಲ್ಲಾಧಿಕಾರಿಗಳಾಗಲಿ, ಗುಬ್ಬಿ ತಾಲೂಕಿನ ಶಾಸಕರಾಗಲಿ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಾಗಲಿ ಇತ್ತ ಕಡೆ ಗಮನ ಹರಿಸಲಿಲ್ಲ.



ಪತ್ನಿ ಮತ್ತು ಮಕ್ಕಳು

ಬೇಡಿಕೆಗಳು

- ಆತ್ಮಹತ್ಯೆ ಮಾಡಿಕೊಂಡಿರುವ ರೈತ ರಾಜಣ್ಣನ ಹೆಸರಿನಲ್ಲಿರುವ ಮಾವಿನಳ್ಳಿ ಶಾಖೆಯ ಕಲ್ಪತರು ಗ್ರಾಮೀಣ ಬ್ಯಾಂಕಿನ ಸಾಲ ಸೇರಿದಂತೆ ಎಲ್ಲಾ ಸಾಲಗಳ ಮನ್ನಾ ಮಾಡಬೇಕು.
- ರಾಜಣ್ಣನ ಕುಟುಂಬಕ್ಕೆ ಕನಿಷ್ಠ 5 ಲಕ್ಷರೂಗಳು ಪರಿಹಾರ ನೀಡಬೇಕು. ಮತ್ತು ಜಿಲ್ಲೆಯಲ್ಲಿ ಸಾಲದ ಬವಣೆಯಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತರಿಗೆ ಸರ್ಕಾರ ಮಧ್ಯ ಪ್ರವೇಶಿಸಿ ನೆರವು ನೀಡಬೇಕು.
- ಸರ್ಕಾರ ರೈತರ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡಿರುವ ವಿವರದ ಮಾರ್ಗದರ್ಶಿಯನ್ನು ಬ್ಯಾಂಕುಗಳ ಸೂಚನಾ ಫಲಕ ಹಾಗೂ ಪತ್ರಿಕೆಗಳ ಮೂಲಕ ಪ್ರಚಾರ ನೀಡಬೇಕು.
- ಸಾಲ ವಸೂಲಾತಿಯನ್ನು ಮುಂದೂಡಿ ಇರುವ ಸಾಲಗಳನ್ನು ದೀರ್ಘಾವದಿ ಸಾಲಗಳನ್ನಾಗಿ ಮಾರ್ಪಡಿಸಿ ಕಡಿಮೆ ದರದ ಬಡ್ಡಿ ವಿಧಿಸಬೇಕು.

ಕೆ.ಪಿ.ಆರ್.ಎಸ್ ಮತ್ತು ಸಿಪಿಐ(ಎಂ) ಪ್ರತಿನಿಧಿಗಳ ಭೇಟಿ

ರೈತ ರಾಜಣ್ಣನ ಆತ್ಮಹತ್ಯೆಯಾಗಿ 15 ದಿನಗಳು ಕಳೆದರೂ ಗುಬ್ಬಿ ತಾಲೂಕಿನ ಸರ್ಕಾರಿ ಕಡತಗಳಲ್ಲಿ ಪೋಲೀಸ್ ಠಾಣೆಯಲ್ಲಿ ಯುಡಿಆರ್-1/03 ಎಂದು ದಾಖಲಾಗಿರುವುದು ಬಿಟ್ಟರೆ ಯಾರೂ ಅತ್ತ ಕಡೆ ಮುಖ ಹಾಕಲೇ ಇಲ್ಲ. ದಿನಾಂಕ ಜನವರಿ 14 ರಂದು ಕರ್ನಾಟಕ ಪ್ರಾಂತ ರೈತ ಸಂಘ ಕೆಪಿಆರ್ ಎಸ್ ಜಿಲ್ಲಾ ಸಂಚಾಲಕ ಬಿ.ಉಮೇಶ್ ಸಿಪಿಐ(ಎಂ)ನ ಜಿಲ್ಲಾ ಕಾರ್ಯದರ್ಶಿ ಸೈಯದ್ ಮುಜೀಬ್ ಸಿಐಟಿಯು ನ ರಾಜ್ಯ ಸಮಿತಿ ಸದಸ್ಯೆ ಬಿ.ಎನ್.ಪ್ರೇಮ ಸ್ಥಳೀಯ ಕೆಪಿಆರ್ ಎಸ್ ಹಾಗೂ ಪಂಪ್‌ಸೆಟ್ ಬಳಕೆದಾರರ ಸಮಿತಿ ಅಧ್ಯಕ್ಷರಾದ ಮಾಸ್ಟರ್ ಇವರನ್ನೊಳಗೊಂಡ ತಂಡವು ಮಲ್ಲಪ್ಪನಪಾಳ್ಯಕ್ಕೆ ಭೇಟಿ ನೀಡಿ ಮೃತ ರಾಜಣ್ಣನ ಪತ್ನಿ ರೇಣುಕಮ್ಮ ಹಾಗೂ ಕುಟುಂಬಕ್ಕೆ ಸಾಂತ್ವನ ಹೇಳಿ ಈ ಸಾವಿಗೆ ಕಾರಣವಾದ ಸರ್ಕಾರದ ನೀತಿಗಳ ವಿರುದ್ಧ ಹೋರಾಟ ಬಲಿಷ್ಟಗೊಳಿಸಲು, ಆ ಪ್ರದೇಶದಲ್ಲಿ ರೈತ ಸಂಘ ಗಟ್ಟಿಗೊಳಿಸಲು ಪಣ ತೊಟ್ಟಿದ್ದಾರೆ.

ಎಲ್ಲಾ ವೇದಿಕೆಗಳಲ್ಲಿ ರಾಜ್ಯ ಸಚಿವರುಗಳು ದೊಡ್ಡ ಸಾಧನೆ ಮಾಡಿದಂತೆ ರೈತರ ಸಾಲದ ಬಡ್ಡಿ ಮನ್ನಾ ಮಾಡಿದ್ದೇವೆಂದು ಪತ್ರಿಕೆಗಳಲ್ಲಿ ಪ್ರಚಾರ ಪಡೆಯುತ್ತಿದ್ದಾರೆ. ಬರಗಾಲದಿಂದ ತತ್ತರಿಸಿರುವ ಫಲಾನುಭವಿ ರೈತರು ಸಹಕಾರ ಸಂಘಗಳಲ್ಲಿ ಹಾಗೂ ಬ್ಯಾಂಕುಗಳಲ್ಲಿ ಇದರ ಸಂಬಂಧ ವಿಚಾರಿಸಿದರೆ ಸರ್ಕಾರದಿಂದ ಸ್ಪಷ್ಟ ಮಾರ್ಗದರ್ಶನವೇ ಬಂದಿಲ್ಲವೆಂದು ಅಧಿಕಾರಿಗಳು ತಿಳಿಸುತ್ತಿದ್ದಾರೆ.

ರಾಜ್ಯದಲ್ಲಿ ಭೀಕರ ಬರಗಾಲವಿದ್ದರೂ ಸಾಲದ ವಸೂಲಾತಿ ಕಾರ್ಯ ಮುಂದುವರಿಯುತ್ತಿದೆ. ಸರ್ಕಾರಕ್ಕೆ ರೈತರ ಬಗ್ಗೆ ನೈಜ ಕಾಳಜಿ ಇದ್ದರೆ ಈ ಕೂಡಲೇ ಬಡ್ಡಿ ಮನ್ನಾ ಮಾಡಿದ ವಿವರದ ಮಾರ್ಗದರ್ಶಿಗಳನ್ನು ಪತ್ರಿಕೆಗಳಲ್ಲಿ ಹಾಗೂ ಸಂಬಂಧಪಟ್ಟ ಬ್ಯಾಂಕುಗಳು ಸೂಚನಾ ಫಲಕದಲ್ಲಿ ಪ್ರಚಾರ ನೀಡಿ ರೈತರಿಗೆ ಗೊಂದಲ ತಪ್ಪಿಸಲು ಮುಂದಾಗಬೇಕೆಂದು ಮತ್ತು ಹಾಲಿ ಸಾಲದ ವಸೂಲಾತಿಗಳನ್ನು ಮುಂದೂಡಿ ಇರುವ ಸಾಲಗಳನ್ನು ದೀರ್ಘಾವದಿ ಸಾಲಗಳಾಗಿ ಪರಿವರ್ತಿಸಿ ಕಡಿಮೆ ಬಡ್ಡಿ ದರಕ್ಕೆ ಮಾರ್ಪಡಿಸಬೇಕೆಂದು ಈ ಮೂಲಕ ಸಂಘಟನೆಗಳು ಒತ್ತಾಯಿಸಿವೆ.

ಸಾಲದ ಹೊರೆಯಿಂದ ಆತ್ಮಹತ್ಯೆ ಮಾಡಿಕೊಂಡಿರುವ ರಾಜಣ್ಣನ ಕುಟುಂಬಕ್ಕೆ ಈ ಕೂಡಲೇ ಸರ್ಕಾರವು ನೆರವು ನೀಡಬೇಕೆಂದು ಕರ್ನಾಟಕ ಪ್ರಾಂ ರೈತ ಸಂಘ (ಕೆಪಿಆರ್‌ಎಸ್) ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿಐಟಿಯು), ಸಿಪಿಐ(ಎಂ) ಸಂಘಟನೆಗಳು ರಾಜ್ಯ ಸರ್ಕಾರವನ್ನು ಆಗ್ರಹಿಸಿವೆ.

ಟ್ರಾನ್ಸ್‌ಪೋರ್ಟ್ ಕಾರ್ಮಿಕರ ಧರಣಿ

ಕರ್ನಾಟಕ ಸ್ಟೇಟ್ ಟ್ರಾನ್ಸ್‌ಪೋರ್ಟ್ ರಾಜ್ಯ ಸಮಿತಿಯ ಕರೆಯ ಮೇರೆಗೆ ಬಳ್ಳಾರಿ ಜಿಲ್ಲಾ ಮಟ್ಟದ ಸಾರಿಗೆ ಕಾರ್ಮಿಕರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಜಿಲ್ಲಾಧಿಕಾರಿ ಕಛೇರಿಯ ಮುಂದೆ ಧರಣಿ ನಡೆಸಿದರು.

ಪ್ರತಿಭಟನಾ ಧರಣಿಯನ್ನುದ್ದೇಶಿಸಿ ಸಾರಿಗೆ ಕಾರ್ಮಿಕರ ರಾಜ್ಯ ಮುಖಂಡರಾದ ಆರ್.ಎಸ್.ಬಸವರಾಜ ಮಾತನಾಡಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾರ್ಮಿಕ ವಿರೋಧಿ ನೀತಿಗಳನ್ನು ಅನುಸರಿಸುತ್ತಿವೆ, ಈಗಲಾದರೂ ಈ ನೀತಿಗಳನ್ನು ಕೈಬಿಟ್ಟು ತಕ್ಷಣ ಕಾರ್ಮಿಕಪರ ಕಾನೂನುಗಳನ್ನು ಜಾರಿಗೆ ತರಬೇಕೆಂದು ಆಗ್ರಹಿಸಿದರು. ವೈ.ರಾಮಚಂದ್ರ ಬಾಬು ಮಾತನಾಡುತ್ತಾ 55 ವರ್ಷ ಮೀರಿದ ಸಾರಿಗೆ ಕಾರ್ಮಿಕರಿಗೆ ಪಿಂಚಣಿ ಸೌಲಭ್ಯ ಮತ್ತು ಟ್ರಾನ್ಸ್‌ಪೋರ್ಟ್ ವರ್ಕರ್ಸ್ ಮೂವ್‌ಮೆಂಟ್ ರಿಜಿಸ್ಟಾರನ್ನು ಕಡ್ಡಾಯ ಮಾಡಬೇಕೆಂದು ಹಾಗೂ ಗುರತಿನ ಚೀಟಿ, ಅಪಘಾತದಲ್ಲಿ ಮೃತಪಟ್ಟ ಕಾರ್ಮಿಕರಿಗೆ 1 ಲಕ್ಷ ರೂ. ಪರಿಹಾರ ಧನ ಕೊಡಬೇಕೆಂದು ಮತ್ತು ಇ.ಎಸ್.ಐ. ಸೌಲಭ್ಯವನ್ನು ಕೊಡಲು ಒತ್ತಾಯಿಸಿದರು. ಅಲ್ಲದೇ ಇನ್ಶೂರೆನ್ಸ್ ಪ್ರೀಮಿಯಂ ದರ ಹೆಚ್ಚಿಸಿರುವುದನ್ನು ಕಡಿಮೆ ಮಾಡಬೇಕೆಂದು ಹಾಗೂ ಆರ್.ಟಿ.ಓ. ನೊಂದಾವಣಿ ದರ ಕಡಿಮೆ ಮಾಡಬೇಕೆಂದು ರಾಜ್ಯದ ಎಲ್ಲಾ ರಸ್ತೆಗಳನ್ನು ದುರಸ್ಥಿಗೊಳಿಸಬೇಕು, 15 ವರ್ಷ ಮೀರಿದ ವಾಹನಗಳ ಪರವಾನಗಿಯನ್ನು ರದ್ದುಗೊಳಿಸಬಾರದೆಂದು ಹಾಗೂ ಬಳ್ಳಾರಿ ಜಿಲ್ಲೆಯಲ್ಲಿ ಸಾರಿಗೆ ರಂಗದಲ್ಲಿ ಕೆಲಸ ಮಾಡುವ ಎಲ್ಲಾ ಕಾರ್ಮಿಕರಿಗೆ ವಸತಿ ನಿವೇಶನಗಳನ್ನು ಕೊಡಬೇಕೆಂದು ರಾಜ್ಯ ಸರ್ಕಾರಕ್ಕೆ ಜಿಲ್ಲಾಧಿಕಾರಿಗಳ ಮುಖಾಂತರ ಮನವಿ ಪತ್ರ ಅರ್ಪಿಸಲಾಯಿತು.

ಡಿಸೆಂಬರ್ 23, 2002 ರಂದು ನಡೆದ ಈ ಧರಣಿ ಸತ್ಯಾಗ್ರಹದ ನೇತೃತ್ವವನ್ನು ಹಂಪೇರು ಹಾಲೇಶ್ವರ ಗೌಡ, ಡಿ,ವೆಂಕಟರಮಣ, ಸಿ.ರಘುನಾಥ, ಡಿವೈಎಫ್‌ಐನ ಹೆಚ್ ವೆಂಕಟೇಶ್, ಎಸ್‌ಎಫ್‌ಐನ ಕೆ.ಎಂ.ಮಂಜುನಾಥ ನೇತೃತ್ವ ವಹಿಸಿದ್ದರು. ಆರಂಭದಲ್ಲಿ ವೆಂಕಟೇಶ್ ಸ್ವಾಗತಿಸಿ, ಆರ್.ಎಸ್.ಬಸವರಾಜ ವಂದಿಸಿದರು.

ಗಣತಂತ್ರದ ಆಂತರಿಕ ಶಕ್ತಿಯನ್ನು ಉಳಿಸಿ ಬೆಳೆಸಲು ಆಂದೋಲನ



ಸೀತಾರಾಂ ಯೆಚೂರಿ

ಭಾರತೀಯ ಗಣತಂತ್ರದ 53ನೇ ವಾರ್ಷಿಕೋತ್ಸವವನ್ನು ಎಂದಿನಂತೆ ಸಡಗರ, ಸಂಭ್ರಮದಿಂದ ಆಚರಿಸಲಾಗಿದೆ. ಎಂದಿನಂತೆಯೇ ಭಾಷಣಗಳು, ಘೋಷಣೆಗಳು ಮೊಳಗಿವೆ. ರಾಷ್ಟ್ರಪತಿಗಳಿಂದ ಹೊಸ ಆಶಯಗಳು ವ್ಯಕ್ತವಾಗಿವೆ. ರಾಷ್ಟ್ರಪತಿಗಳ 'ಕಣ್ಣೋಟ-2020' ರ ನನಸಾಗುವುದೇ ಎಂಬ ಬಗ್ಗೆ ಖ್ಯಾತ ಮಾರ್ಕ್ಸ್‌ವಾದಿ ಚಿಂತಕ ಸೀತಾರಾಂ ಯೆಚೂರಿಯವರ ವಿಶ್ಲೇಷಣೆ ಇಲ್ಲಿದೆ.

ಭಾರತೀಯ ಗಣತಂತ್ರದ 53 ನೇ ವಾರ್ಷಿಕೋತ್ಸವವನ್ನು ಎಂದಿನ ಸಡಗರದಿಂದ ಆಚರಿಸಲಾಗಿದೆ. ಎಂದಿನಂತೆ ಭಾಷಣಗಳು, ಘೋಷಣೆಗಳು, ಆಶಯಗಳು ಇದ್ದವು. ರಾಷ್ಟ್ರಪತಿಗಳು ಇಂತಹ ಸಂದರ್ಭದ ತನ್ನ ಮೊತ್ತ ಮೊದಲ ಭಾಷಣದಲ್ಲಿ ತನ್ನ "ಕಣ್ಣೋಟ 2020" (ವಿಷನ್ 2020) ದಿಂದ ಉದ್ಧರಗೊಳನ್ನು ನೀಡುತ್ತಾ ನಗರದ ಸೌಲಭ್ಯಗಳನ್ನು ಹಳ್ಳಿಗಳಿಗೆ ನೀಡುವತ್ತ 'ಮಹಾ ಮಿಶನ್' ಗೆ ಕರೆನೀಡಿದರು. ಇದು ಗ್ರಾಮೀಣ ಬಡಜನರ ಸ್ಥಿತಿಯ ಬಗ್ಗೆ ಅವರು ವ್ಯಕ್ತಪಡಿಸಿದ ಸಂಕಟಕ್ಕೆ ಅನುಗುಣವಾಗಿತ್ತು.


ಈ ಹಿಂದೆ ಹತ್ತನೇ ಪಂಚವಾರ್ಷಿಕ ಯೋಜನೆಯ ದಸ್ತಾವೇಜನ್ನು ಬಿಡುಗಡೆ ಮಾಡುತ್ತಾ ಪ್ರಧಾನಮಂತ್ರಿಗಳು ಭಾರತ ಬೆಳವಣಿಗೆಯು ವರ್ಷಾಂತ್ಯಕ್ಕೆ ದರ 8 ಶೇ. ಕ್ಕಿಂತ ಹೆಚ್ಚಾಗುತ್ತದೆ, ಇದು ಅತಿ ವೇಗವಾಗಿ ಮುನ್ನಡೆಯುವ ರಾಷ್ಟ್ರಗಳ ಸಾಲಿನಲ್ಲಿ ನಮ್ಮ ಹೆಸರೂ ಬರುತ್ತದೆ ಎಂದು ಗುಡುಗಿದ್ದರು. ಭಾರತದಲ್ಲಿ ಇನ್ನೊಂದು ಹಾಲು ಜೇನು ಹರಿಯುತ್ತಿದೆ ಎಂದರು. ಇಂತಹ ಟೊಳ್ಳು ಮಾತುಗಳಿಗೆ ಲೆಕ್ಕವಿಲ್ಲ.

ಆರ್ಥಿಕತೆ ಏನು ಹೇಳುತ್ತಿದೆ?

ಇಂತಹ ಆಶಯಗಳಿಗೆ ಏನಾದರೂ ಆಧಾರವಿದೆಯೇ? ಪ್ರಸಕ್ತ ಆರ್ಥಿಕ ಮೂಲಾಂಶಗಳು ಹೇಳುವ ಕಥೆಯೇ ಬೇರೆ ಸಾಲದ ಪರಿಸ್ಥಿತಿ ಹದಗೆಡುತ್ತಿದೆ. ಹಳೆಯ ಸಾಲ, ಬಡ್ಡಿ ಕಟ್ಟಲು ಹೊಸ ಸಾಲ ಮಾಡಬೇಕಾದ ಘಟ್ಟ ತಲುಪಿದೆ. ದೇಶದ ಒಳಗೆ ಬರುವುದಕ್ಕಿಂತ ಹೊರಗೆ ಹರಿದುಹೋಗುವಂತದ್ದೇ ಹೆಚ್ಚು. ಕೃಷಿ ವಲಯ ಹೆಚ್ಚಿಂದರೆ ಜಡಗೊಂಡಿದೆ. ಆಹಾರಧಾನ್ಯ ಉತ್ಪಾದನೆ ಸ್ವಾತಂತ್ರ್ಯಾನಂತರ ಮೊಟ್ಟಮೊದಲ ಬಾರಿಗೆ ಜನಸಂಖ್ಯಾ ಹೆಚ್ಚಳ ದರಕ್ಕಿಂತ ಕಮ್ಮಿಯಾಗಿದೆ. ಒಂದೆಡೆ 6 ಕೋಟಿ ಟನ್ ಆಹಾರಧಾನ್ಯಗಳು ಗೋದಾಮುಗಳಲ್ಲಿ ಕೊಳೆಯುತ್ತಿರುವಾಗಲೇ ಹಸಿವಿನಿಂದ ಸಾವು, ಸಂಕಟದಿಂದ ಆತ್ಮಹತ್ಯೆ ಗ್ರಾಮೀಣ ಭಾರತದಲ್ಲಿ ಮುಂದುವರೆದಿದೆ.

ಕೈಗಾರಿಕಾ ಚೇತರಿಕೆಯೂ ನಿಧಾನವಾಗಿ, ತಡೆತಡೆದು ಆಗುತ್ತಿದೆ. ಏಕೆಂದರೆ ಜಾಗತೀಕ ಆರ್ಥಿಕ ಹಿಂಜರಿಕೆ ಹಾಗೆಯೇ ಮುಂದುವರೆದಿದೆ. ಇದರಿಂದಾಗಿ ರಫ್ತ ಆಧಾರಿತ ಬೆಳವಣಿಗೆಯ ಸಾಧ್ಯತೆ ದಿನೇ ದಿನೇ ಕುಂದುತ್ತಿದೆ. ಸೇವಾ ವಲಯದಲ್ಲಿ ಭಾರೀ ಮುನ್ನಡೆಯಾಗಿದೆ ಎಂದು ಬಹಳ ಪ್ರಚಾರ ಮಾಡಲಾಗುತ್ತಿತ್ತು. ಆದರೆ ಹಿಗಂತು ಇದನ್ನೂ ತಟ್ಟಿದೆ. ಅಲ್ಲದೆ ಕೃಷಿ, ಕೈಗಾರಿಕೆಗಳಲ್ಲಿ ಸ್ಥಗಿತತೆ ಇರುವಾಗ ಕ್ರಮೇಣ ಅದು ಸೇವಾ ವಲಯಕ್ಕೂ ಬರಲೇಬೇಕು. ಆ ಸಮಯವೀಗ ಬಂದಂತಿದೆ.

ಇವೆಲ್ಲಾ ಬಹುಪಾಲು ಜನಗಳ ಮೇಲೆ ಹೆಚ್ಚಿನ ಹೊರೆಗಳನ್ನು ಹಾಕಿವೆ. ಗ್ರಾಮೀಣ ಬಡವರ ಪರಿಸ್ಥಿತಿಗಳನ್ನು ರಾಷ್ಟ್ರಪತಿಗಳೇ ಹೇಳಿದ್ದಾರೆ. ಏರುತ್ತಿರುವ ನಿರುದ್ಯೋಗ ಇನ್ನೊಂದು ಆತಂಕಕಾರಿ ಅಂಶ. ಎರಡನೇ ರಾಷ್ಟ್ರೀಯ ಕಾರ್ಮಿಕ ಆಯೋಗದ ವರದಿಯ ಪ್ರಕಾರವೇ ಎಂಭತ್ತರ ದಶಕದಲ್ಲಿ ಶೇ. 1.55 ವಾರ್ಷಿಕ ದರದಲ್ಲಿ ಉದ್ಯೋಗಾವಕಾಶಗಳು ಬೆಳೆದಿದ್ದರೆ ಸುಧಾರಣೆಗಳ ತೊಂಭತ್ತರ ದಶಕದಲ್ಲಿ ಅದು ಶೇ. 1.01 ಕ್ಕೆ ಇಳಿದಿದೆ. ಖಾಸಗೀ ಮತ್ತು ಸಾರ್ವಜನಿಕ ವಲಯಗಳೆರಡರಲ್ಲೂ ದೊಡ್ಡ ಪ್ರಮಾಣದ ಮುಚ್ಚಿಕೆಗಳಿಂದಾಗಿ ಬೃಹತ್ ಪ್ರಮಾಣದಲ್ಲಿ ರಿಟ್ರೆಂಚ್‌ಮೆಂಟ್‌ಗಳು, ಲೇ ಆಫ್‌ಗಳು ನಡೆಯುತ್ತಿವೆ. ಸ್ವಯಂ ನಿವೃತ್ತಿ ಯೋಜನೆ ಸಾವಿರಾರು ಕಾರ್ಮಿಕರಿಗೆ ಕಡ್ಡಾಯ ನಿವೃತ್ತಿ ಯೋಜನೆಯಾಗಿಬಿಟ್ಟಿದೆ.



ಲೂಟಿ ಸಾಗಿದೆ

ಸಾರ್ವಜನಿಕ ವಲಯದ ಆಸ್ತಿಗಳ ಲೂಟಿ ಸಾಗಿಯೇ ಸಾಗಿದೆ. ಅತ್ಯಂತ ಲಾಭದಲ್ಲಿರುವ ಹಿಂದೂಸ್ತಾನ್ ಪೆಟ್ರೋಲಿಯಂ ಮತ್ತು ಭಾರತ್ ಪೆಟ್ರೋಲಿಯಂ ಕಂಪನಿಗಳನ್ನು ಸ್ವಲ್ಪ ನಾಟಕದ ನಂತರ ಈಗ ವಿದೇಶೀ, ದೇಶೀ ಬಂಡವಾಳಿಗರಿಗೆ ಅಗ್ಗದರದಲ್ಲಿ ಮಾರಲಾಗುತ್ತಿದೆ. ಒ.ಎನ್.ಟಿ.ಸಿ. ಯಂತಹ ಸಾರ್ವಜನಿಕ ವಲಯದ ಕಂಪನಿಗಳು ಇವನ್ನು ವಹಿಸಿಕೊಳ್ಳಲು ಪ್ರಯತ್ನಿಸದಂತೆ ನಿರ್ದಿಷ್ಟವಾಗಿ ನಿಷೇಧಿಸಲಾಗಿದೆಯೆಂಬುದು ಈ ರಾಷ್ಟ್ರೀಯ ಆಸ್ತಿಗಳ ಬಗ್ಗೆ ಬಂದಂತಹ ತುಚ್ಛೀಕಾರ ತೋರಲಾಗುತ್ತಿದೆ ಎಂಬುದನ್ನು ತೋರಿಸುತ್ತದೆ. ಟೆಲಿಕಾಂ ಖಾಸಗೀಕರಣ ಎಂತಹ ಘಟ್ಟ ತಲುಪಿದೆಯೆಂದರೆ ಶ್ರೀಮಂತರಿಗೆ ಎಲ್ಲಾ ತರದ ರಿಯಾಯ್ತಿಗಳನ್ನು ಕೊಡುತ್ತ, ಸಾಮಾನ್ಯ ಟೆಲಿಫೋನ್ ಬಳಕೆದಾರ ತಾನು ಮಾಡುವ ಪ್ರತಿ ಕರೆಗೂ ಹೆಚ್ಚು ತೆರುವಂತೆ ಮಾಡಲಾಗುತ್ತಿದೆ.

ಶಿಕ್ಷಣ, ಆರೋಗ್ಯ, ಆಹಾರ ಎಲ್ಲಾ ಕ್ಷೇತ್ರಗಳಿಂದಲೂ ಸರಕಾರ ಹಿಂದೆ ಸರಿದಿರುವುದರಿಂದ ಜನಸಾಮಾನ್ಯರು ಈಗ ಇವೆಲ್ಲದಕ್ಕೂ ಹೆಚ್ಚು ಹಣ ತೆರಬೇಕಾಗಿದೆ ಇಲ್ಲವೇ ಅವುಗಳಿಂದ ವಂಚಿತವಾಗಬೇಕಾಗಿ ಬಂದಿದೆ. ದೇಶದ ಹಲವೆಡೆ ವಿದ್ಯುತ್ ಖಾಸಗೀಕರಣದಿಂದಾಗಿ ಜನ ಭಾರೀ ಬೆಲೆತೆರಬೇಕಾಗಿ ಬಂದಿದೆ.

ಶ್ರೀಮಂತರಿಗೆ ಹೊಸ ಹೊಸ ರಿಯಾಯ್ತಿಗಳು ಬರುತ್ತಲೇ ಇವೆ. ಕೇಳ್ಕರ್ ಸಮಿತಿಯ ಹೊಸ ತೆರಿಗೆ ಸುಧಾರಣೆ ಪ್ರಸ್ತಾವಗಳು ಬಂದಿವೆ. ಆರ್ಥಿಕ ಸುಧಾರಣೆಗಳ ಈ ದಶಕದಲ್ಲಿ ಭಾರತದ ಒಟ್ಟು ಆಂತರಿಕ ಉತ್ಪನ್ನಗಳಲ್ಲಿ ತೆರಿಗೆ ಆದಾಯದ ಪಾಲು ಇಳಿಯುತ್ತಲೇ ಇದೆ. ಇದೇ ಸರಕಾರದ ಹಣಕಾಸು ಇಳಿಮುಖವಾಗಲು ಮುಖ್ಯಕಾರಣ. ಆದರೆ ಇದನ್ನೇ ಮುಂದೆ ಮಾಡಿ ಸರಕಾರ ಜನಗಳ ಮೇಲೆ ಹೇರಿ ತನ್ನ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದೆ.

ಭಾರತದ ಆರ್ಥಿಕ ವ್ಯವಸ್ಥೆ ಈಗ ಹೇಗಿದೆ

ಸಂವಿಧಾನದ ಪ್ರಕಾರ ಕೇಂದ್ರ ಸರಕಾರ ಜನತೆಯ ಸಾಮಾಜಿಕ ಆರ್ಥಿಕ ಅಗತ್ಯಗಳಿಗೆ ಬೆಂಬಲ ಒದಗಿಸಬೇಕಾದ್ದು ಸರಕಾರದ ಕರ್ತವ್ಯ. ಆದರೆ ಸರಕಾರ ಇದರಿಂದ ಹಿಂದೆ ಸರಿಯುತ್ತಿದೆ. ಆದರೆ ಅತ್ತ ದೇಶೀ ವಿದೇಶೀ ಕಂಪನಿಗಳಿಗೆ ಸೂಪರ್ ಲಾಭಗಳಿಸಿಕೊಡಲು ಇದೇ ಸರಕಾರ ಮಧ್ಯಪ್ರವೇಶ ಮಾಡುತ್ತಿದೆ!

ಕೇವಲ ಕನಸಾಗದಿರಬೇಕಾದರೆ.

ಇಂತಹ ವ್ಯವಸ್ಥೆಯಿರುವಾಗ ರಾಷ್ಟ್ರಪತಿಗಳ 'ಕಣ್ಣೋಟ' 'ಮಹಾಮಿಶನ್' ಎಲ್ಲಾ ಕೇವಲ ಕನಸಾಗಿಯೇ ಉಳಿಯಬಹುದಷ್ಟೆ. ಈಗಿರುವ ಸುಧಾರಣೆಗಳ ದಾರಿ ಬದಲಿಸಿ ಕೋಟ್ಯಾಂತರ ಜನಗಳಿಗೆ ಆರ್ಥಿಕ ಶಕ್ತಿ ನೀಡುವಂತಹ ಸುಧಾರಣೆಗಳನ್ನು ತರದಿದ್ದರೆ ಆರ್ಥಿಕ ಪುನರುಜ್ಜೀವನವೂ ಸಾಧ್ಯವಿಲ್ಲ. ಹೀಗೆ ಮಾಡಬೇಕಾದರೆ ಅಗತ್ಯ ಪ್ರಮಾಣದಲ್ಲಿ ಸಾಮಾಜಿಕ. ಆರ್ಥಿಕ ಮೂಲಸೌಕರ್ಯಗಳನ್ನು ಒದಗಿಸಲು ಬೃಹತ್ ಪ್ರಮಾಣದ ಸಾರ್ವಜನಿಕ ಹೂಡಿಕೆ ಆಗಬೇಕು. ಅದಕ್ಕೆ ಬೃಹತ್ ಪ್ರಮಾಣದಲ್ಲಿ ಸಂಪನ್ಮೂಲಗಳನ್ನು ಕ್ರೋಢೀಕರಿಸಬೇಕು, ಶ್ರೀಮಂತರಿಗೆ ಸೂಕ್ತ ತೆರಿಗೆಗಳ ಮೂಲಕ ಸಂಗ್ರಹಿಸಬೇಕು, ಸರಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ಆದಾಯ ಬರದಂತೆ ತಡೆಯಲು ಬೇಕೆಂದೇ ನಿರ್ಮಿಸಿರುವ ಸೋರು ಮಾರ್ಗಗಳನ್ನು ಅಡ್ಡಗಟ್ಟಬೇಕು.

ಎಲ್ಲಕ್ಕೂ ಮಿಗಿಲಾಗಿ ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರದ ಮೂಲಕ ಆಗುತ್ತಿರುವ ಸಾರ್ವಜನಿಕ ಸಂಪನ್ಮೂಲಗಳ ಲೂಟಿಯನ್ನು ನಿಲ್ಲಿಸಬೇಕು. ಆದರೆ ವಾಜಪೇಯಿ ಸರಕಾರದ ಸಂಸ್ಕೃತಿ ಇದೇ ತಾನೇ. ರಾಜಕೀಯ ನೈತಿಕತೆ ಪಾತಾಳಕ್ಕೆ ಇಳಿಯಲು ಉದ್ದೇಶ ಪೂರಕವಾಗಿಯೇ ಬಿಡಲಾಗಿದೆ.

ಇದೀಗ ಭಾರತೀಯ ಗಣತಂತ್ರದ ಆರ್ಥಿಕ ಅಡಿಗಟ್ಟಿನ ಪರಿಸ್ಥಿತಿ. ಇದರೊಂದಿಗೆ ನಮ್ಮ ಗಣತಂತ್ರದ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ತಳಪಾಯದ ಮೇಲೆ ಹೆಚ್ಚುತ್ತಿರುವ ದಾಳಿಗಳನ್ನು ಸೇರಿಕೊಂಡು ಗಣತಂತ್ರವನ್ನೇ ತ್ವರಿತವಾಗಿ ಬುಡಮೇಲು ಮಾಡುವ ಪ್ರಹಾರಗಳು ನಡೆಯುತ್ತಿವೆ.

ಗಣತಂತ್ರದ ವಾರ್ಷಿಕೋತ್ಸವದ ಆಚರಣೆಯ ಅರ್ಥ ಅದನ್ನು ರಕ್ಷಿಸುವ ಉಳಿಸುವ ಇನ್ನಷ್ಟು ಬಲಪಡಿಸುವ ನಿರ್ಧಾರವನ್ನು ದ್ವಿಗುಣಗೊಳಿಸುವುದೆಂದೇ ಆಗಬೇಕು. ಅಂದರೆ ನಮ್ಮ ಗಣತಂತ್ರದ ಆಂತರಿಕ ಶಕ್ತಿಯನ್ನು ಬುಡಮೇಲು ಮಾಡುವ ನೀತಿಗಳ ವಿರುದ್ಧ ಬಲಿಷ್ಟವಾದ ಜನತಾ ಆಂದೋಲನಗಳನ್ನು ಬೆಳೆಸಬೇಕು. ಇದಕ್ಕೆ ಭಾರತವನ್ನು ಮತ್ತು ಭಾರತದ ಜನತೆಯನ್ನು ಈಗಿರುವ ಸರಕಾರದ ಕಪಿಮುಷ್ಟಿಯಿಂದ ವಿಮುಕ್ತಗೊಳಿಸಬೇಕು.

ಜನತೆಯ ಹೋರಾಟಗಳನ್ನು, ಆಂದೋಲನಗಳನ್ನು ಬಲಿಷ್ಟಗೊಳಿಸಲು ನಿರ್ಧರಿಸೋಣ.



ಸುಧಾರಿಸಿತೆ ಕಣ್ಣೋಟ 2020

ಭಜರಂಗದಳ-ಕಾಂಗ್ರೆಸ್ ಮೈತ್ರಿ

ಕೋಮುವಾದದ ವೈರಸ್‌ಗೆ ಕೊಣ್ಣೂರು ಬಲಿ

ವ್ಂತೀಯ್ಂ ಸೌಹಾರ್ದತೆಯಿಂದ್ದ ಕೊಣ್ಣೂರಿನಲ್ಲಿ ಕೋಮುವಾದಿ ಹಾವಿಪಡೆ ಹಚ್ಚಿದ ಬೆಂಕಿಯನ್ನು ನರಗುಂದ-ನವಲಗುಂದದ ರೈತರ ಬಂಡಾಯದಲ್ಲಿ ಭಾಗವಹಿಸಿದ್ದ ಈ ಗ್ರಾಮದ ಜನರ ನಡುವೆ ಮೆಲ್ಲ ಮೆಲ್ಲನೇ ನುಸುಳಿದ ಭಜರಂಗದಳದ ವೈರಸ್ ರೋಗಾಣು ಗಲಭೆಯನ್ನೆಬ್ಬಿಸಿ ಜನರಲ್ಲಿ ವಿಭಜನೆ ತರಲು, ಆ ದಿನಕ್ಕಾಗಿ ಹೊಂಚು ಹಾಕಿ ಕಾಯಿತು. ಯಾವುದು ಆದಿನ? ಏನಾಯಿತು ಅನಾಹುತ? ಭಜರಂಗದಳ ಮತ್ತು ಕಾಂಗ್ರೆಸ್ ನಡುವೆ ಏರ್ಪಟ್ಟ ಮೈತ್ರಿ ಎಂತಹದು? ಇದರ ಆರ್ಥಿಕ ರಾಜಕೀಯ ಆಯಾಮಗಳನ್ನು ಬಹಳ ಸೂಕ್ಷ್ಮವಾಗಿ ಪರಿಶೀಲಿಸಿರುವ ವಿಶಿಷ್ಟ ವರದಿಯಿದು. ಕೋಮುವಾದಿ ಶಕ್ತಿಗಳ ವಿರುದ್ಧ ನಿರ್ಣಾಯಕವಾಗಿ ಸಮರ ಸಾರಲು ತಿರಸ್ಕರಿಸುತ್ತಿರುವ ಕಾಂಗ್ರೆಸ್ ತಂದೊಡ್ಡಬಹುದಾದ ದುರಂತವನ್ನು ಗುಜರಾತ್‌ಇತರೆಡೆ ನೋಡಿದ್ದೇವೆ. ಇಂತಹ ಎಚ್ಚರ ಮೂಡಿಸದಿರುವ ಸ್ಥಿತಿಯು ಕೆಳಹಂತದಲ್ಲಿ ಕಾಂಗ್ರೆಸ್‌ನ ಕಾರ್ಯಕರ್ತರನ್ನು ಕೋಮುವಾದಿಗಳ ಬಗ್ಗೆ ಮೃದುವಾಗಿ, ಗೆಳೆಯರಂತೆ ನೋಡುವ ಸ್ಥಿತಿಯನ್ನು ನಿರ್ಮಿಸಿದೆ ಎಂಬುದಕ್ಕೆ ಕೊಣ್ಣೂರು ಒಂದು ಸಾಕ್ಷಿ.

ನರಗುಂದ ತಾಲೂಕಿನ ಪಕ್ಕಾ ಕೃಷಿ ಅವಲಂಬಿತ ದೊಡ್ಡ ಗ್ರಾಮ ಕೊಣ್ಣೂರು, 15 ಸಾವಿರಕ್ಕೂ ಮಿಕ್ಕ ವಿವಿಧ ಜಾತಿ, ಧರ್ಮಕ್ಕೆ ಸೇರಿದ ಜನ ಸೌಹಾರ್ಧತೆಯಿಂದ ಬಾಳುತ್ತಿರುವ ಗ್ರಾಮ. ಊರಿನ ಸುತ್ತ ಸದಾ ಹಸಿರು ಕಂಗೊಳಿಸುತ್ತಿರುತ್ತದೆ. ಮಲಪ್ರಭಾ ನದಿಯ ಬಲದಂಡೆ ಮೇಲಿರುವ ಗ್ರಾಮದ ಸಂಪೂರ್ಣ ಭೂಮಿ ಮಲಪ್ರಭಾ ನೀರಾವರಿ ಯೋಜನೆಗೆ ಒಳಪಟ್ಟಿದೆ. ಹಳೇ ಧಾರವಾಡ ಜಿಲ್ಲೆಯ ಈಗಿನ ಗದಗ ಜಿಲ್ಲೆಯ ಕೊನೆಯ ಗ್ರಾಮ. ಹುಬ್ಬಳ್ಳಿ- ಬಿಜಾಪುರ ರಾಜ್ಯ ಹೆದ್ದಾರಿ ಮಾರ್ಗವಾಗಿ ನರಗುಂದದಿಂದ 20 ಕಿ.ಮಿ ಕ್ರಮಿಸಿದರೆ ಅಲ್ಲಿ ಸಿಗುವುದೇ ಕೊಣ್ಣೂರು.

ಬಂದೇಬಿಟ್ಟಿತು ಭಜರಂಗದಳ

1981ರಲ್ಲಿ ಕರ್ನಾಟಕ ಸರಕಾರ ನೀರಾವರಿ ಬೆಟರ್‌ಮೆಂಟ್ ಚಾರ್ಜನ್ನು ರೈತರ ಮೇಲೆ ಹೇರಿದಾಗ ಈ ಭಾಗದ ರೈತರು ಇದನ್ನು ವಿರೋಧಿಸಿ ಐತಿಹಾಸಿಕ ನರಗುಂದ ರೈತ ಬಂಡಾಯದಲ್ಲಿ ಭಾಗವಹಿಸಿದ ರೈತ ವೀರರು, ಶ್ರಮಜೀವಿಗಳು ಇರುವಂತಹ ಊರು. ಇಲ್ಲಿ ಹಿಂದೂ, ಮುಸ್ಲಿಂ ಎಂಬ ಬೇಧ ಭಾವನೆಯಿಲ್ಲದೆ ತಲತಲಾಂತರದಿಂದ ಅನೋನ್ಯತೆಯಿಂದ ಸೌಹಾರ್ದತೆಯಿಂದ ಬಾಳುತ್ತಿದ್ದಾರೆ. ಈ ಐಕ್ಯತೆ ಕಂಡು ದಂಗಾದ ಭಜರಂಗದ ಸಾಂಕ್ರಾಮಿಕ ಪಡೆಗಳು ಗದಗ - ಹುಬ್ಬಳ್ಳಿಯಿಂದ ರೋಗಾಣು ಇಲ್ಲಿಗೆ ಬಂದೇಬಿಟ್ಟರು. ಪುಂಡ ಪೋಕರಿಗಳ ಸಭೆ ನಡೆಸಿ ಭಜರಂಗದಳವನ್ನು ಸ್ಥಾಪಿಸಿ, ಸ್ಥಳೀಯ ಮುಸ್ಲಿಂರ ವಿರುದ್ಧ ಇಲ್ಲಸಲ್ಲದ ಆಪಾದನೆ ಮಾಡಿ ಇವರ ವಿರುದ್ಧ ಸದಾ ಕತ್ತಿ ಮಸಿಯಲು ಈ ಪೋಕರಿಗಳನ್ನು ಮಾನಸಿಕವಾಗಿ ಸಿದ್ಧಗೊಳಿಸಿದರು. ಈ ಭಜರಂಗಿಗಳಿಗೆ ಒಂದು ಸಣ್ಣ ನೆಪ ಸಿಕ್ಕರೂ ಸಾಕು ಈ ಸಾಬರ ಮೇಲೆ ಧಾಳಿ ಮಾಡಬಹುದೆಂದು ಕಾಯುತ್ತಿರುವಾಗ ಒಂದು ಸಣ್ಣ ಕ್ಷುಲ್ಲಕ ಘಟನೆಯನ್ನೆ ಮುಂದೊಡ್ಡಿ ಧಾಳಿ ಪ್ರಾರಂಭಿಸಿಯೇಬಿಟ್ಟರು.

ಅದೊಂದು ದಿನ ಬಸ್ ನಿಲ್ದಾಣದಲ್ಲಿ ಪೇರಲು ಹಣ್ಣು ಮಾರುವ ಮುಸ್ಲಿಂ ಸಮುದಾಯಕ್ಕೆ ಸೇರಿದ ಬೆಂಗಳೂರು ಪೀಕ, ಮುಸ್ತಫಾ, ಖಾಜಾಮಿರ್ ಎಂಬ ಪೋಲಿ ಹುಡುಗರು ಬಸ್ಸಿನಲ್ಲಿ ಪ್ರಯಾಣಿಸುವ ಮಹಿಳೆಯರ ಜೊತೆ ಅಸಭ್ಯವಾಗಿ ವರ್ತಿಸಿದರೆಂದು ವ್ಯಾಪಾರ ಮಾಡುವಾಗ ಕೈಮುಟ್ಟಿದರೆಂದು ನೆಪವೊಡ್ಡಿ ಭಜರಂಗಿಗಳು ಗಲಾಟೆ ಪ್ರಾರಂಭಿಸಿಯೇಬಿಟ್ಟರು. ಅಲ್ಪ ಸಂಖ್ಯಾತ ಸಮುದಾಯಕ್ಕೆ ಸೇರಿದ ಹಣ್ಣಿನಂಗಡಿ, ಪಾನಬೀಡಾಂಗಡಿ, ಹೊಟೇಲ್ ಗ್ಯಾರೇಜ್‌ಗಳಿಗೆ ಬೆಂಕಿ ಹಚ್ಚಲು ಪ್ರಯತ್ನಿಸಿದ್ದಾರೆ. ಊರಿನ ಹಿರಿಯರ ಮಧ್ಯ ಪ್ರವೇಶದಿಂದ ಈ ಘಟನೆ ಅಲ್ಲಿಗೆ ಶಾಂತವಾಗುವಂತೆ ಮಾಡಿದ್ದಾರೆ. ಇದರಿಂದ ಅಸಮಾಧಾನಗೊಂಡ ಭಜರಂಗದಳದ ಜಿಲ್ಲಾಧ್ಯಕ್ಷ ರವಿ, ಸಿದ್ದಲಿಂಗ, ವಿಶ್ವಹಿಂದೂ ಪರಿಷತ್‌ನ ಜಿಲ್ಲಾಧ್ಯಕ್ಷ ಎಲ್.ಡಿ. ಪವಾರ, ಪ್ರಮೋದ ಮುಂತಾಲಿಕ್, ಸ್ಥಳೀಯ ಭಜರಂಗದಳದ ಮುಖಂಡರಾದ ಹನುಮಂತ ಗೌಡ, ಬುಸಣ್ಣನವರ, ಚನ್ನಯ್ಯ ಸ್ವಾಮಿ ಮುಖಾಂತರ ತಕ್ಷಣ ಭಜರಂಗಿಗಳ ಸಭೆ ನಡೆಸಿ ಮುಂದೊಂದು ದಿನ ಬರುತ್ತದೆ ಆದಿನ ಬಿಡಬೇಡಿರೆಂದು ಹುರಿದುಂಬಿಸಿದರು.

ಆ ದಿನ ಬಂದೆ ಬಿಟ್ಟಿತು. ಡಿಸೆಂಬರ್ 6 ಬಾಬ್ರಿಮಸೀದಿ ನೆಲಸಮವಾದ ದಿನ ಹಾಗೂ ರಮಜಾನ್ ಪ್ರಾರ್ಥನೆಯ ಹಬ್ಬ. ಭಜರಂಗಿಗಳಿಗೆ ಬಾಬ್ರಿಮಸೀದಿ ನೆಲಸಮ ಮಾಡಿದ 10 ವರ್ಷದ ವಿಜಯೋತ್ಸವ ಆಚರಣೆ.


ಹೀಗಿರುವಾಗ ಭಜರಂಗಿಗಳ ಉಪಟಳಕ್ಕೆ ಹೆದರಿದ ಸ್ಥಳೀಯ ಮುಸ್ಲಿಂ ಜಮಾತ್ ಸಭೆ ಸೇರಿ ಡಿಸೆಂಬರ್ 6 ರಂದು ಹಬ್ಬ ಆಚರಣೆ ಬೇಡ ಡಿಸೆಂಬರ್ 7 ರಂದು ಆಚರಿಸಲು ನಿರ್ಧರಿಸಿದ್ದಾರೆ. ಇಡೀ ದೇಶಾದ್ಯಂತ ರಮಜಾನ್ ಡಿಸೆಂಬರ್ 6 ರಂದು ಆಚರಿಸಿದರೆ ಕೊಣ್ಣೂರಿನ ಮುಸಲ್ಮಾನರು ಮಾತ್ರ ಡಿಸೆಂಬರ್ 7 ರಂದು ಆಚರಿಸಿದ್ದಾರೆ. ಆದರೂ ಈ ಕೋಮುವಾದಿ ಭಜರಂಗಿಗಳು ಸಮಾಧಾನಗೊಂಡಿಲ್ಲಾ. ಅಂದು ಬೆಳಿಗ್ಗೆ 10 ಗಂಟೆ ಸುಮಾರಿಗೆ ಮುಸ್ಲಿಂ ಸಮುದಾಯ ಪ್ರಾರ್ಥನೆ ಸಲ್ಲಿಸಲು ಈದ್ಗಾಕ್ಕೆ ಶಾಂತ ರೀತಿಯಿಂದ ಹೊರಟಾಗ, ಭಜರಂಗಿಗಳು ಡೊಳ್ಳು, ಬಾಜಾಗಳಿಂದ ಅಂದು ವಿಜಯೋತ್ಸವ ಮುಂದುವರೆಸಿದ್ದಾರೆ. ಮುಸ್ಲಿಂ ಸಮುದಾಯ ಸ್ವಲ್ಪ ಹೊತ್ತು ಶಬ್ಧ ಮಾಡುವುದನ್ನು ನಿಲ್ಲಿಸಿರಿ ನಾವು ಮುಂದಕ್ಕೆ ಹೋದ ನಂತರ ಡೊಳ್ಳು ಬಾರಿಸಿರೆಂದು ಮನವಿ ಮಾಡಿದ್ದಾರೆ. ಪ್ರತಿಯಾಗಿ ನೀವು ಹೇಗೆ ಹಬ್ಬ ಆಚರಿಸುತ್ತೀರೋ ನಾವು ಹಾಗೆ ನಮ್ಮ ವಿಜಯೋತ್ಸವ ಆಚರಿಸುತ್ತೇವೆಂದು ವಾದವಿವಾದ ನಡೆದಿದೆ. ಅಷ್ಟರ ಮಧ್ಯೆ ಎರಡು ಸಮುದಾಯಕ್ಕೆ ಸೇರಿದ ಯುವಕರು ಕಲ್ಲು ತೂರಾಟ ಪ್ರಾರಂಭಿಸಿದ್ದಾರೆ. ಆತಂಕಗೊಂಡ ಮುಸ್ಲಿಂ ಹಿರಿಯರು ಶಾಂತವಾಗಲು ಮನವಿ ಮಾಡಿಕೊಂಡಿದ್ದಾರೆ. ಇದಕ್ಕೆ ಕಿವಿಗೊಡದ ಜನ ಕಲ್ಲು ತೂರಾಟ ಮುಂದುವರೆಸಿದ್ದಾರೆ. ಎಷ್ಟೋ ಹೊತ್ತಿನ ನಂತರ ಪೋಲೀಸರ ಆಗಮನವಾಗಿ

ಅಬ್ದುಲ್‌ರಜಾಕ್ ಮುಲ್ಲಾ
ಡಿ.ವೈ.ಎಫ್.ಐ ಗದಗ ಜಿಲ್ಲಾ ಸಂಚಾಲಕ

ಲಾಠಿ ಚಾರ್ಜ್ ನಡೆದು, ಯುವಕರು ಚದುರಿದ ನಂತರ ಪೋಲೀಸ್ ರಕ್ಷಣೆಯಲ್ಲಿ ಈದ್ಗಾದಲ್ಲಿ ಮುಸ್ಲಿಮರು ಪ್ರಾರ್ಥನೆ ಸಲ್ಲಿಸಿದ್ದಾರೆ. ಮುಂಜಾಗ್ರತ ಕ್ರಮವಾಗಿ 144 ಕಲಂ ಜಾರಿ ಮಾಡಿದ್ದಾರೆ. ಇಡೀ ಕೊಣ್ಣೂರು ಗ್ರಾಮದಲ್ಲಿ ಸ್ಮಶಾನಮೌನ ಆವರಿಸಿದೆ. ಹಬ್ಬದ ಅಂಗವಾಗಿ ತಮ್ಮ ಆಪ್ತರ ವಿವಿಧ ಜಾತಿ, ಧರ್ಮಕ್ಕೆ ಸೇರಿದವರನ್ನು ಕರೆದು ಆತಿಥ್ಯ ನೀಡಲು ಊಟ ಮಾಡಿಸಲು ಸಾಕಷ್ಟು ಸುರುಕೂರಮ (ಖೀರ್) ತಯಾರಿಸಿದ್ದಾರೆ. ರಾತ್ರಿವರೆಗೆ ಯಾರನ್ನು ಕರೆದು ಊಟ ಮಾಡಿಸದೆ ಹೋಗಿದ್ದರಿಂದ ಖೀರ್ ಕೆಟ್ಟುಹೋಯಿತು. ಇದನ್ನು ತಿಪ್ಪೆಗೆ ಎಸೆದೆವೆಂದು ನೊಂದು ಮಹಿಳೆ, ಗ್ರಾಮ ಪಂಚಾಯತ್ ಉಪಾಧ್ಯಕ್ಷೆ, ಹುಸೇನ .ಬಿ.ಇಬ್ರಾಹಿಂ ಸಾಬ ಸನ್ನಿ ಎಂಬವರು ತಿಳಿಸಿದರು. ನನ್ನ ಮದುವೆಯಾಗಿ 35 ವರ್ಷವಾಯಿತು. ಒಮ್ಮೆಯೂ ಹೀಗಾಗಿರಲಿಲ್ಲ ಎಂದು ನುಡಿದಳು. ಇಲ್ಲಿಗೆ ಒಂದು ಅಧ್ಯಾಯ ಮುಗಿದಿದೆ.

ಕಾಂಗ್ರೆಸ್ ನಾಯಕರು - ಭಜರಂಗದಳ

ಈಗ ಗ್ರಾಮ ಪಂಚಾಯತ್‌ಗೆ ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆ ಮಾಡುವ ಪ್ರಕ್ರಿಯೆ ಪ್ರಾರಂಭವಾಗಿದೆ. ಕಾಂಗ್ರೆಸ್ ಪಕ್ಷಕ್ಕೆ ಸೇರಿದ ಅಭ್ಯರ್ಥಿಗಳ ಮಧ್ಯೆ ತುರುಸಿನ ಸ್ಪರ್ಧೆ ನಡೆದಿದೆ. ಅಧ್ಯಕ್ಷ ಸ್ಥಾನಕ್ಕೆ ಬಾಪುಗೌಡ, ಫಕೀರ ಗೌಡ, ಪಾಟೀಲ ಆಯ್ಕೆಯಾಗಿ ವಿರುದ್ಧ ನಿಂತ ಕುರುಬ ಸಮುದಾಯಕ್ಕೆ ಸೇರಿದ ಉಮೇಶ, ಹಿರೇಹೊಳಿ ಸೋತಿದ್ದಾರೆ. ಉಪಾಧ್ಯಕ್ಷ ಸ್ಥಾನಕ್ಕೆ ಮುಸ್ಲಿಂ ಸಮುದಾಯಕ್ಕೆ ಸೇರಿದ ಹುಸೇನ ಬಿ.ಇಬ್ರಾಹಿಂ ಸಾಬ ಸುನ್ನಿ ಎಂಬ ಮಹಿಳೆ ಆಯ್ಕೆಯಾಗಿದ್ದಾಳೆ. ಈ ಹಿಂದೆ ಅಧ್ಯಕ್ಷೆಯಾಗಿದ್ದ ದಾಕ್ಷಾಯಿಣಿ, ಶಂಕ್ರಪ್ಪ ಕುರುಬರ್ ಎಂಬವರ ಮಗ ಭಜ ರಂಗ ದಳದ ಕಾರ್ಯಕರ್ತ ಈ ಚುನಾವಣೆಯ ಸೋಲಿನ ಸೇಡು ತೀರಿಸಿಕೊಳ್ಳಲು ಈ ಭಜರಂಗದಳ ವೇದಿಕೆಯನ್ನಾಗಿ ಮಾಡಿಕೊಂಡು ಇಡೀ ಮುಸ್ಲಿಂ ಸಮುದಾಯದ ಮೇಲೆ ಕತ್ತಿ ಮಸೆಯಲು ಪ್ರಾರಂಭಿಸಿದ್ದಾನೆ.


ರಫಿ ಮೇಸ್ತ್ರಿ

ರಂಜಾನ್ ಹಬ್ಬದಂದು ನಡೆದ ಗಲಭೆ ನಂತರ ಬರೋಬರ್ ಒಂದು ತಿಂಗಳ ನಂತರದಲ್ಲಿ ಒಂದೇ ಕೋಮಿಗೆ ಸೇರಿದ ಜನರು ತಮ್ಮ ತಮ್ಮ ವೈಯಕಿಕ ವೈಷಮ್ಯದ ಸೇಡು ತೀರಿಸಿಕೊಳ್ಳಲು ಇದು ಒಳ್ಳೆಯ ಸಂದರ್ಭವೆಂದು ಭಾವಿಸಿ ಮೇವಿನ ಬಣವಿಗಳಿಗೆ ಬೆಂಕಿ ಹಚ್ಚಿ ಮುಸ್ಲೀಂರದೇ ಈ ಕೆಲಸವೆಂದು ಪ್ರಚಾರ ಮಾಡಿದ್ದಾರೆ. ತಕ್ಷಣದಲ್ಲೇ ಭಜರಂಗಿಗಳು ಮುಸ್ಲಿಂ ಸಮುದಾಯಕ್ಕೆ ಸೇರಿದ ಹಣ್ಣಿನಂಗಡಿ, ಪಾನಬೀಡಾ ಅಂಗಡಿ, ಹೋಟೇಲ್, ಗ್ಯಾರೇಜ್‌ಗಳಿಗೆ ಬೆಂಕಿ ಹಚ್ಚಿದ್ದಾರೆ. ಇದಕ್ಕೂ ಸಮಾಧಾನಗೊಳ್ಳದ ಈ ಕೋಮುವಾದಿಗಳು ಮುಸ್ಲಿಂರ ಮನೆಗಳಿಗೆ ಬೆಂಕಿ ಹಚ್ಚುವ ಪ್ರಯತ್ನ ನಡೆದಿದೆ. ಅಷ್ಟರಲ್ಲಿ ಪೋಲೀಸ್ ಅಗ್ನಿಶಾಮಕ ದಳದವರು ಬಂದಿದ್ದಾರೆ. ಇವರು ಬರುವದರೊಳಗಾಗಿ ಎಲ್ಲಾ ವಾಣಿಜ್ಯ ಮಳಿಗೆಗಳು ಸಂಪೂರ್ಣ ಸುಟ್ಟು ಭಸ್ಮವಾಗಿವೆ. ರಫೀಕ್ ಮೇಸ್ತ್ರಿ ಎಂಬುವವರಿಗೆ ಸೇರಿದ ಗ್ಯಾರೇಜ್ ಕನಿಷ್ಠ ಎರಡು ಲಕ್ಷ ರೂಪಾಯಿಗಳಷ್ಟು ನಾಶವಾಗಿ ಕೆಲಸವಿಲ್ಲದೆ ಬೀದಿ ಪಾಲಾಗಿದ್ದಾರೆ. ಮುಸ್ಲಿಂರಿಗೆ ಸೇರಿದ 10 ಅಂಗಡಿಗಳು ಸಂಪೂರ್ಣವಾಗಿ ನಾಶವಾಗಿವೆ. ಈ ಗಲಭೆಯಲ್ಲೇ ನೇತಾಜಿ ಗೌಡ, ಚನ್ನಪ್ಪಗೌಡ್ರ ಎಂಬುವರಿಗೆ ಸೇರಿದ ಒಂದುನೂರು ಚೀಲದಷ್ಟು ಗೋವಿನ ಜೋಳದ ತೆನೆಗೆ ಬೆಂಕಿ ತಗುಲಿ ಸುಟ್ಟು ಹೋಗಿದೆ. ಇದನ್ನು ಯಾರು ಹಚ್ಚಿದರು ಎಂಬುದು ತಿಳಿದು ಬಂದಿಲ್ಲ.

ಮುಸ್ಲಿಂ ಅಂಗಡಿಗಳಲ್ಲಿ ವ್ಯಾಪಾರಕ್ಕೆ ನಿರ್ಬಂಧ

ಇಷ್ಟಕ್ಕೂ ಸಮಾಧಾನಗೊಳ್ಳದ ಕೋಮುವಾದಿಗಳು ಮುಸ್ಲಿಂ ಸಮುದಾಯಕ್ಕೆ ಸೇರಿದ ಸಣ್ಣ ವ್ಯಾಪಾರಸ್ಥರನ್ನು ಹೊಡೆದು ಓಡಿಸಿದ್ದಾರೆ. ಗುಜರಾತ್ ಮಾದರಿಯಲ್ಲಿ ಮುಸ್ಲಿಂರಿಗೆ ಸೇರಿದ ಅಂಗಡಿಗಳಲ್ಲಿ ವ್ಯಾಪಾರ ಮಾಡಲು ಬಿಡುತ್ತಿಲ್ಲ. ಜನಸಾಮಾನ್ಯರು ಇವರ ಅಂಗಡಿಗಳಲ್ಲಿ ವಸ್ತುಗಳನ್ನು ಖರೀದಿಸಿದರೆ,


ಮನೆಯ ಕದ ಮುರಿದಿರುವುದು

ಲೇ ವಸ್ತುಗಳನ್ನು ಮರಳಿಸಲು ಜನಕ್ಕೆ ಯಿಸುತ್ತಿದ್ದಾರೆ. ತಾವು ತೋರಿಸಿದ ವ್ಯಕ್ತಿಗಳಲ್ಲಿ ರ ಮಾಡಲು ಜನಕ್ಕೆ ಇಷ್ಟವಿಲ್ಲದಿದ್ದರೂ ಪಡೆಗಳು ಒತ್ತಾಯಿಸುತ್ತಿವೆ. ಈ ೀಶದ ದುರ್ಲಾಭ ಪಡೆಯಲು ಬಡ್ಡಿ ರಸ್ಥರು ನೂರಕ್ಕೆ ಶೇ.10ರಿಂದ 20 ರವರೆಗೆ ೂಟ್ಟು ವ್ಯಾಪಾರ ಮಾಡಲು ಬಹುಸಂಖ್ಯಾತ ದಾಯಕ್ಕೆ ಸೇರಿದ ಯುವಕರನ್ನು ಾಯಿಸುತ್ತಿದ್ದಾರೆ. ಇದರ ಭಾಗವಾಗಿಯೇ ೀಟೇಲ್ ಹಿಂದೂ ಸಾಗರ' ಎಂಬ ಸಹಾರಿ ಹೋಟೆಲ್ ತಲೆಯೆತ್ತಿದೆ. ಸಣ್ಣ ಸಣ್ಣ ರಸ್ಥರು ಊರು ಬಿಟ್ಟು ಹೋಗಿದ್ದಾರೆ. ಸಮುದಾಯಕ್ಕೆ ಸೇರಿದ ಯುವಕರು, ಯಸ್ಸಿನ ಗಂಡಸರು ಊರು ಬಿಟ್ಟಿದ್ದಾರೆ.

ದ ನೆರಳಿನಲ್ಲಿ...

ಯಾವ ಸಮಯದಲ್ಲಿ ಮತ್ತೆ ಗಲಭೆ ಪ್ರಾರಂಭ



ವಾಗುತ್ತದೆ. ಯಾವ ಅನಾಹುತ ಸಂಭವಿಸುತ್ತದೆ ಎಂಬ ಭಯದ ಲ್ಲಿ ಜನರು ಬದುಕುತ್ತಿದ್ದಾರೆ. ಊರಿನ ಪೋಲೀಸರದೇ ದರ್ಬಾರ್, ಗಲ್ಲಿ ಲ್ಲಿನ ಗುಡಿ, ಮಸೀದಿ, ದರ್ಗಾಗಳಲ್ಲಿ ೀಸರೇ ತುಂಬಿಕೊಂಡಿದ್ದಾರೆ. ಊರಿನ ಲ್ಲಿಗಳಲ್ಲಿನ ಲೈಟ್ ಕಂಬ, ಟೆಲಿಫೋನ್ ಗಿಡಮರಗಳಲ್ಲಿ ಕೇಸರಿ ಧ್ವಜಗಳ ಹಾರಾಟ, ಹೊರಗಡೆ ತಿರುಗಾಡುವುದೇ ವಾಗಿದೆ. ಇಡೀ ಊರಿಗೆ ಸ್ಮಶಾನಮೌನ ದೆ. ಸುತ್ತಮುತ್ತ ಸಣ್ಣ ಸಣ್ಣ ಹಳ್ಳಿಯ ಜನರು ಈ ಊರನ್ನೇ ಅವಲಂಬಿಸಿದ್ದಾರೆ. ಜನ ಯಿಂದ ಭಯಗೊಂಡು ಸಂತೆಗೆ ಬರುತ್ತಿಲ್ಲ. ರ್ಣವಾಗಿ ವ್ಯಾಪಾರ ವಹಿವಾಟು ನಿಂತಿದೆ. ರಸ್ಥರು ಈ ಗಲಭೆಯನ್ನು, ಭಜರಂಗದಳದ ಟಿಕೆಗಳನ್ನು ಒಳಒಳಗೆ ಶಪಿಸುತ್ತಿದ್ದಾರೆ. ಈ ಗಿಗಳ ಚಟುವಟಿಕೆಯಿಂದ ಜನ ಹೋಗಿದ್ದಾರೆ. ಇವರ ಅಟ್ಟಹಾಸವನ್ನು ಹಾಕಲು ಮತ್ತು ಶಾಂತಿ ಕಾಪಾಡುವಂತೆ ಯಾಕೆ ಪ್ರಯತ್ನಿಸಬಾರದೆಂದು ಉಮೇಶ, ಲ ಮತ್ತು ಅವನ ಸ್ನೇಹಿತರನ್ನು ಪ್ರಶ್ನಿಸಿದರೆ, ಭಜರಂಗದಳದ ಚಟುವಟಿಕೆಗಳನ್ನು ತಕ್ಷಣ ತಡೆಯಲು ಹೋದರೆ, ಇದು ಮುಸ್ಲಿಂರ ಕುಮ್ಮಕ್ಕು ಎಂದು ಅವರ ಮೇಲೆ ಇದರ ಕೆಟ್ಟ ಪರಿಣಾಮವಾಗುತ್ತದೆ ಎಂದು ಕಾಳಜಿಯಿಂದ ಸುಮ್ಮನಿದ್ದೇವೆನ್ನುತ್ತಾರೆ. ಈ ಗಲಭೆ ಶಾಂತವಾದ ನಂತರ ಭಜರಂಗದಳದ ಸ್ಥಳೀಯ ಮುಖಂಡರಾದ ಹನುಮಂತ ಗೌಡ ಬುಸಣ್ಣನವರ, ಚೆನ್ನಯ್ಯಸ್ವಾಮಿ ಹಾಗೂ ಇವರಿಗೆ ಕುಮ್ಮಕ್ಕು ನೀಡುತ್ತಿರುವ ಗ್ರಾಮ ಪಂಚಾಯತ ಅಧ್ಯಕ್ಷ ಸ್ಥಾನದಲ್ಲಿ ಸೋತ ಉಮೇಶ, ಹೀರೆ ಹೋಳಿ ಈತನ ಸಮುದಾಯಕ್ಕೆ ಸೇರಿದ ಕಾಂಗ್ರೆಸ್ ಮುಖಂಡ ಬಸಪ್ಪ ನರಗುಂದ ಮುಸ್ಲಿಂರಿಗೆ ಸರಿಯಾದ ಬುದ್ಧಿ ಕಲಿಸುತ್ತೇವೆಂದು ಹೇಳುತ್ತಿದ್ದಾರೆ. ಕಾಂಗ್ರೆಸ್ಸಿನ ಬಹಳ ಜನ ಕಾರ್ಯಕರ್ತರು, ಮುಖಂಡರು ಈ ಭಜರಂಗಿಗಳ ಜೊತೆ ಸೇರಿ ಗಲಭೆಯಲ್ಲಿ ಭಾಗವಹಿಸಿದ್ದಾರೆ.

ಕೋಮು ಗಲಭೆಗೆ ಒಳಪಟ್ಟ ಕೊಣ್ಣೂರು ಗ್ರಾಮಕ್ಕೆ ಶಾಂತಿ ಮಂತ್ರ ಜಪಿಸಲು ಬಿ.ಜೆ.ಪಿ ಶಾಸಕ, ವಿರೋಧ ಪಕ್ಷದ ನಾಯಕ ಜಗದೀಶ ಶೆಟ್ಟರ್, ಸಂಸದ ವಿಜಯ ಸಂಕೇಶ್ವರ ಅವರ ಪಕ್ಷದ ಹಿರಿಯ ಕಿರಿಯ ಪುಡಾರಿಗಳು ಗ್ರಾಮದಲ್ಲಿ ಸಭೆ ನಡೆಸಿ ಹಿಂದೂಗಳೆಲ್ಲಾ ಒಂದಾಗಿ ಈ ಗಲಭೆಯನ್ನು ತಡೆಯಬೇಕೆಂದು ಕರೆ ನೀಡಿದ್ದಾರೆ. ಹುಬ್ಬಳ್ಳಿಯಿಂದ ಮುಸ್ಲಿಂ ವ್ಯಕ್ತಿ ಬಂದು ಮುಸ್ಲಿಂರ ಸಭೆ ನಡೆಸಿ ಅವರನ್ನು ಪ್ರಚೋಧಿಸಿ ಗಲಭೆಗೆ ಕಾರಣನಾಗಿದ್ದಾನೆಂದು ಪ್ರಚಾರ ಮಾಡಿದ್ದಾರೆ. ಸಾಕ್ಷಿ ಎಂಬಂತೆ ಗಲಭೆಯಲ್ಲಿ ಪೋಲೀಸರು ಬಂಧಿಸಿರುವ ವ್ಯಕ್ತಿಯನ್ನು ಮುಂದಿಡುತ್ತಿದ್ದಾರೆ. ರಾಮದುರ್ಗ - ರೋಣ - ಬದಾಮಿ-ಬಾಗಲಕೋಟೆ - ಬಿಜಾಪುರ, ನರಗುಂದ, ಹುಬ್ಬಳ್ಳಿಗೆ ಹೋಗಬೇಕಾದರೆ ಈ ಕೋಣ್ಣೂರ ಮಾರ್ಗ ಬಳಸಿಕೊಂಡೆ ಹೋಗಬೇಕು. ಹೀಗಿರುವಾಗ ಈ ವ್ಯಕ್ತಿ ಪ್ರಯಾಣಿಕನಿರಬಹುದು. ಪೋಲೀಸರು ಬಂಧಿಸಿರುವ ಜನರಲ್ಲಿ ಎರಡು ಸಮುದಾಯಕ್ಕೆ ಸೇರಿರುವ ಅಮಾಯಕ ಜನರಿದ್ದಾರೆ. ಗಲಭೆ ಮಾಡಿದ ಪುಂಡ ಪೋಕರಿಗಳ ಪರಾರಿಯಾಗಿದ್ದಾರೆ. ಈ ಹಿಂದೆ ಹೊಳೆ ಆಲೂರಿನಲ್ಲಿಯೂ ಹೀಗೆ ನಡೆದಿತ್ತು.

ನರಗಂದ ಪೋಲೀಸ್ ಇನ್‌ಸ್ಪೆಕ್ಟರ್ ಬಡಶೆಟ್ಟಿಯವರನ್ನು ಗದಗ ಪೋಲೀಸ್ ವರಿಷ್ಠಾಧಿಕಾರಿ ಸಂಜಯ ವೀರಸಿಂಗ್ ಅಮಾನತ್ತುಗೊಳಿಸಿದ್ದಾರೆ. ಇವರು ಮುಂಜಾಗ್ರತಕ್ರಮವಾಗಿ ಸೂಕ್ತ ಬಂದೋಬಸ್ತ್ ಏರ್ಪಡಿಸದೆ, ಇಷ್ಟೊಂದು ಗಲಭೆಗೆ ಕಾರಣವೆಂದು, ಕರ್ತವ್ಯ ಚ್ಯುತಿಯ ಕಾರಣ ನೀಡಿ ಅಮಾನತುಗೊಳಿಸಿದ್ದಾರೆ. ಈ ಬಿ.ಜೆ.ಪಿ. ಪಟಾಲಂ, ನರಗುಂದ ಸರ್ಕಲ್ ಪೋಲಿಸ್ ಇನ್‌ಸ್ಪೆಕ್ಟರ್ ಎ.ಜೆ.ತಡಕೋಡ ಮತ್ತು ಗದಗ ಡಿ.ವೈ.ಎಸ್.ಪಿ ಟೀನ್‌ಮೇಕರ್‌ರವರನ್ನು ವರ್ಗಾಯಿಸಬೇಕು, ಇಲ್ಲವೇ ಬಡಶೇಟಿಯವರ ಅಮಾನತ್ ರದ್ದುಪಡಿಸಬೇಕೆಂದು, ಶುಕ್ರವಾರ ಕೊಣ್ಣೂರ ಬಂದ್ ಮತ್ತು ರಸ್ತಾರೋಖೋ ಮಾಡಿದ್ದಾರೆ. ಸರ್ಕಲ್ ಇನ್‌ಸ್ಪೆಕ್ಟರ್ ತಡಕೋಡ ಮತ್ತು ಡಿ.ವೈ.ಎಸ್.ಪಿ ಟೀನ್‌ಮೇಕರ್ ಇಬ್ಬರು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರು.



ಗಲಭೆಗೀಡಾದ ಕಿರಾಣಿ ಅಂಗಡಿ ಎಸ್‌ಟಿಡಿ ಬೂತ್

ಕಾಂಗ್ರೆಸ್ಸಿನ ಜಿಲ್ಲಾ ಉಸ್ತುವಾರಿ ಮಂತ್ರಿ ಎಚ್.ಕೆ.ಪಾಟೀಲ್ ಈ ಭಾಗದ ಶಾಸಕ ಬಿ.ಆರ್.ಯಾವಗಲ್ ಸಂಯುಕ್ತ ಜನತಾದಳದ ಮುಂಡರಗಿ ಶಾಸಕ ಎಸ್.ಎಸ್.ಪಾಟೀಲ ಭೇಟಿ ನೀಡಿ ತಮ್ಮ ತಮ್ಮ ರಾಜಕೀಯ ಬೇಳೆಯನ್ನೇ ಬೇಯಿಸಿಕೊಂಡು ಹೋಗಿದ್ದಾರೆ. ವಿನಹ ನೊಂದ ಜನಕ್ಕೆ ಯಾವದೇ ಪರಿಹಾರ ನೀಡಿಲ್ಲಾ.

2001 ನೇ ಸಾಲಿನಲ್ಲಿ ಧಾರವಾಡ ದಕ್ಷಿಣ ಲೋಕಸಭಾ ಕ್ಷೇತ್ರಗಳಲ್ಲಿ ಬರುವ ಹಾನಗಲ್, ಅಕ್ಕಿ ಆಲೂರ, ಹಾವೇರಿ, ರಾಣೇಬೆನ್ನೂರುಗಳಲ್ಲಿ ಕೋಮುಗಲಭೆಗಳು ಹೆಚ್ಚಿದ್ದರೆ, 2002 ರಲ್ಲಿ ಧಾರವಾಡ ಉತ್ತರ ಕ್ಷೇತ್ರಗಳಲ್ಲಿ ಬರುವ ಹೊಳೆ ಆಲೂರ, ಮೆಣಸಿಗಿ, ಶಿರೋಳ, ಕೊಣ್ಣೂರು ನರಗುಂದ- ಗದಗ, ಕೋಟಮುಚಗಿ, ಅಡವಿ ಸೋಮಾಪೂರ ಮುಂತಾದ ಕಡೆ ಈ ಭಜರಂಗಿ ದಳ ಗಲಭೆಯನ್ನು ಹುಟ್ಟು ಹಾಕುತ್ತಿದ್ದಾರೆ. ಹಾಲಿ ಧಾರವಾಡ ಉತ್ತರ ಲೋಕಸಭಾ ಕ್ಷೇತ್ರದ ಸಂಸದ ವಿಜಯಸಂಕೇಶ್ವರ ಆಗಿದ್ದಾರೆ. ಆದರೆ ಈ ಎಲ್ಲಾ ಪ್ರದೇಶಗಳಲ್ಲಿ ಬಿಜೆಪಿ ಸಂಕೇಶ್ವರರ ವಿರುದ್ಧ ಅಸಹನೆ ಬೆಳೆಯುತ್ತಿದ್ದು ಕಾಂಗ್ರೆಸ್ಸಿನ ಪ್ರಭಾವ ಜಾಸ್ತಿಯಿದೆ. ಕೊಣ್ಣೂರು ಗ್ರಾಮದಲ್ಲಿ ಬಹು ಸಂಖ್ಯಾತರು ಕುರುಬ ಜನಾಂಗಕ್ಕೆ ಸೇರಿದವರು, ಎರಡನೆಯ ದೊಡ್ಡ ಗುಂಪು ಲಿಂಗಾಯತರು, ರೆಡ್ಡಿಗಳು. ನರಗುಂದ ತಾಲೂಕಿನ ಬಿಜೆಪಿ ಅಧ್ಯಕ್ಷ ಡಾ.ಹುರಳಿ ಕುರುಬ ಜನಾಂಗಕ್ಕೆ ಸೇರಿದವರು. ಈ ಗಲಭೆಯಲ್ಲಿ ಭಾಗವಹಿಸಿದವರಲ್ಲೂ ಹೆಚ್ಚಿನವರು ಕುರುಬ ಜನಾಂಗಕ್ಕೆ ಸೇರಿದವರು. ಅವರನ್ನೂ ತೊಡಗಿಸಿ ಜಾತಿ ನೆಲೆಯಲ್ಲಿ ಕೋಮುವಾದಿ ರಾಜಕಾರಣ ಮಾಡುತ್ತಿದ್ದಾರೆ. ○



ಟೆಲ್ ಮತ್ತು ಟೈರ್ ಅಂಗಡಿಗಳ ಭಸ್ಮ

ಭಜರಂಗದಳದ ವೈರಸ್ ಊರೊಳಗೆ ನುಸುಳಿದ್ದು ಹೀಗೆ

6 ತಿಂಗಳ ಹಿಂದೆ ನಮ್ಮೂರಿನಲ್ಲಿ ಯಾವುದೇ ಕೋಮು ಗಲಭೆ ಇರಲಿಲ್ಲ, ಯಾವಾಗ ಭಜರಂಗದಳ ಸ್ಥಾಪನೆ ಮಾಡಿದರೋ ಆವಾಗಿನಿಂದ ಸುರು ಆಯತ್ರಿ ನೋಡ್ರಿ ಗಲಾಟೆ" ಎಂದು ಸಾಮಾನ್ಯ ಗ್ರಾಮಸ್ಥರು ಹೇಳುತ್ತಿದ್ದಾರೆ. ನಾವು ಅಲ್ಲಿ ಇಲ್ಲಿ ಹಿಂದೂ ಮುಸ್ಲಿಂ ದಾಂಧಲೆ ನಡೆಯೋದು ಕೇಳುತ್ತಿದ್ದಿವ್ರಿ. ಆದ್ರ ಈಗ ನಮ್ಮೂರಲ್ಲೇ ನೋಡೋ ಕರ್ಮ ಆಗ್ಯೆತಿರಿ ಎಂದು ಇನ್ನೊಬ್ಬ ಗ್ರಾಮಸ್ಥ ಮನನೊಂದು ಹೇಳುತ್ತಾನೆ.

ಈ ಗ್ರಾಮದಲ್ಲಿ 200ಕ್ಕೂ ಮಿಕ್ಕ ಮುಸ್ಲಿಂ ಕುಟುಂಬಗಳಿದ್ದು ಸಾವಿರಕ್ಕೂ ಮಿಕ್ಕ ಜನಸಂಖ್ಯೆ ಹೊಂದಿದ್ದಾರೆ. ಇಲ್ಲಿ ವಿ.ಎಚ್.ಪಿ, ಭಜರಂಗದಳ ಸ್ಥಾಪಿಸಬಹುದೆಂದು ಎರಡು ವರ್ಷಗಳಿಂದ ಸತತ ಪ್ರಯತ್ನವನ್ನು ಮುತಾಲಿಕ್ ಮತ್ತು ಅವನ ಗ್ಯಾಂಗ್ ಹೊಂಚುಹಾಕುತ್ತಾ ಇತ್ತು. ಇಲ್ಲಿ ತಕ್ಷಣ ಅವಕಾಶವಾಗದೆ ಪಕ್ಕದಲ್ಲಿ ಒಂದು ಕಿಲೋ ಮೀಟರ್ ದೂರದಲ್ಲಿರುವ ಪುಟ್ಟ ಗ್ರಾಮ ವಾಸನದಲ್ಲಿ ತಮ್ಮ ಚಟುವಟಿಕೆ ಪ್ರಾರಂಭಿಸಿದ್ದಾರೆ. ಅಲ್ಲಿಂದ ಕ್ರಮೇಣ ಅಲ್ಲಿಯ ಕಾರ್ಯಕರ್ತರ ನೆರವಿನಿಂದ ಈ ಕೊಣ್ಣೂರು ಗ್ರಾಮಕ್ಕೆ ಪ್ರವೇಶಿಸಿದ್ದಾರೆ.

ಇಲ್ಲಿ ಚಟುವಟಿಕೆಗಳು ತೀವ್ರಗೊಳ್ಳಲು ಮಾದರಿ ಎಂಬಂತೆ ಕಳೆದ 6 ತಿಂಗಳ ಹಿಂದೆ ಇದೇ ಮಲಪ್ರಭಾ ನದಿಯ ಬಲದಂಡೆ ಮೇಲೆ ಇರುವ ರೋಣ ತಾಲೂಕಿನ ದೊಡ್ಡ ಗ್ರಾಮ ಹೊಳೆ ಆಲೂರಿನಲ್ಲಿ ಇದೆ ಭಜರಂಗದಳ ಸ್ಥಾಪಿಸಿ ಗಲಭೆ ಹುಟ್ಟುಹಾಕಿದ್ದರು. ಅಲ್ಲಿಂದ ಕ್ರಮೇಣ ಸಾಗಿ ನದಿಯ ದಂಡೆ ಮೇಲೆ ಬರುವ ಮೆಣಸಿಗಿಯಲ್ಲಿ ಮೊಹರಂನಲ್ಲಿ ಪಂಜೆ ಇಡುವ ಡೋಲಿಯನ್ನು ಬೆಂಕಿಗೆ ಹಾಕಿ ಮಸೀದಿಯಲ್ಲಿ ಮೂರ್ತಿ ಇಡುವ ಪ್ರಯತ್ನ ನಡೆದಿತ್ತು. ಅಲ್ಲಿಂದ ಶಿರೋಳ ಗ್ರಾಮದಲ್ಲಿ ಭಜರಂಗದಳ ಸ್ಥಾಪಿಸಿ ಗಲಭೆ ಮಾಡಿದ್ದಾರೆ.

ಶಿರೋಳ ಮತ್ತು ಕೊಣ್ಣೂರು ಗ್ರಾಮಗಳ ಮಧ್ಯ ಸಿಗುವ ಪುಟ್ಟಗ್ರಾಮ ಕಲ್ಲಾಪುರ, ಈ ಗ್ರಾಮದಲ್ಲಿ ಒಂದೇ ಒಂದು ಮುಸ್ಲಿಂ ಕುಟುಂಬದ ನಾಲ್ಕು ಮನೆಗಳು, ಇಲ್ಲಿಯೂ ಭಜರಂಗದಳ ಸ್ಥಾಪಿಸಿ ಊರಿನ ಸಂಪರ್ಕ ರಸ್ತೆಯಲ್ಲಿ ದೊಡ್ಡ ತಗಡಿನ ಬೋರ್ಡ್ ಬರೆದು ನಿಲ್ಲಿಸಿದ್ದಾರೆ. ಈ ಗ್ರಾಮದಲ್ಲಿ ಮುಸ್ಲಿಂ ಕುಟುಂಬದ ದನದ ಗುಡಿಸಲಿಗೆ ಬೆಂಕಿ ಹಚ್ಚಿದ್ದಾರೆ. ಈ ಅನಾಹುತದಲ್ಲಿ ಆಕಳ ಕರು ಬೆಂಕಿಗೆ ಆಹುತಿಯಾಗಿದೆ. ಇದನ್ನು ರಕ್ಷಿಸಲು ಹೋದ ಅಬ್ದುಲ್ ಸಾಬ ಮುಲ್ಲಾ ಎಂಬುವವರು ಬೆಂಕಿ ತಗುಲಿ ಸುಟ್ಟಗಾಯಗಳಿಂದ ಆಸ್ಪತ್ರೆ ಸೇರಿದ್ದಾರೆ. ಮೊಹರಂನಲ್ಲಿ 'ಪಂಜೆ' ಇಡುವ ಮಸೀದಿಯಲ್ಲಿ ಹನುಮನ ಮೂರ್ತಿ ಇಡುವ ಪ್ರಯತ್ನ ನಡೆದಿದೆ. ಈ ಊರಿನ ವಿಶೇಷವೆಂದರೆ ಇಲ್ಲಿ ಬಸವಣ್ಣ ದೇವರ ಗುಡಿಯಿದ್ದು ಸುತ್ತ 50 ಕಿ.ಮೀ ದಿಂದ ರೈತರು ಎತ್ತುಗಳನ್ನು ತಂದು ದೇವಸ್ಥಾನದ ಸುತ್ತ ಪ್ರದಕ್ಷಿಣೆ ಹಾಕುತ್ತಾರೆ. ಇದರಿಂದ ಅವರ ಎತ್ತುಗಳಿಗೆ ಯಾವದೇ ರೋಗ ರುಜಿನ ಬರುವುದಿಲ್ಲವೆಂದು ಜನರ ನಂಬಿಕೆ. ಶ್ರಾವಣ ಮಾಸದಲ್ಲಿ ಬರುವ ನಾಲ್ಕು ಸೋಮವಾರ ಎತ್ತುಗಳ ಜಾತ್ರೆ ನಡೆಯುತ್ತದೆ. ಇದೇ ಸಂದರ್ಭದಲ್ಲಿ ಪ್ರತಿನಿತ್ಯ ಬೆಳಿಗ್ಗೆ ಭಜನೆ ಮಾಡುತ್ತಾ ಊರಿನ ಜನ ಸುತ್ತಾಡುತ್ತಾರೆ. ಒಂದು ವಿಶೇಷವೆಂದರೆ ಬೆಂಕಿ ತಗುಲಿ ಸುಟ್ಟು ಗಾಯದಿಂದ ಆಸ್ಪತ್ರೆ ಸೇರಿರುವ ಅಬ್ದುಲ್‌ಸಾಬ ಮುಲ್ಲಾ ಈತನು ಈ ಭಜನೆ ಮಾಡುವ ತಂಡದ ಕಾಯಂ ಹಾರ್ಮೋನಿಯಂ ನುಡಿಸುವ ವ್ಯಕ್ತಿ. ಇವನಿಲ್ಲವೆಂದರೆ ಅಂದಿನ ಭಜನೆ ನಡೆಯುವುದಿಲ್ಲ ಅಷ್ಟೊಂದು ಅನೋನ್ಯತೆಯಿಂದ ಇರುವ ಜನ.



ಅಂಬೆಗಾಲಿಟ್ಟ ಏಷಿಯಾ ಯುವಜನ ಕ್ಯಾಂಪ್


ಸಾಮ್ರಾಜ್ಯಶಾಹಿ ಜಾಗತೀಕರಣದ ವಿರುದ್ಧ, ವಿಶ್ವ ಆರ್ಥಿಕ ವೇದಿಕೆಗೆ ಪರ್ಯಾಯವಾಗಿ 2003'ರ ಜನವರಿ ಕೊನೆವಾರದಲ್ಲಿ ಬ್ರೆಜಿಲ್‌ನ ಪೋರ್ಟೋ ಅಲೆಗ್ರೆಯಲ್ಲಿ ನಡೆಯುವ ವಿಶ್ವ ಸಾಮಾಜಿಕ ವೇದಿಕೆಯ ಘೋಷಣೆ "ಮತ್ತೊಂದು ವಿಶ್ವ ಸಾಧ್ಯವಿದೆ" ಎಂಬುದು. ಅದರ ಪೂರ್ವದಲ್ಲಿ ಇಟಲಿಯಲ್ಲಿ 'ಯುರೋಪ್ ಸಾಮಾಜಿಕ ವೇದಿಕೆ" ಹೈದರಾಬಾದ್‌ನಲ್ಲಿ 'ಏಷಿಯಾ ಸಾಮಾಜಿಕ ವೇದಿಕೆ' ಜರುಗಿವೆ. ಮತ್ತೊಂದು "ಏಷಿಯಾ ಸಾಧ್ಯವಿದೆ ಎಂಬ ಘೋಷಣೆಯೊಂದಿಗೆ ನಡೆದ 'ಏಷಿಯಾ ಸಾಮಾಜಿಕ ವೇದಿಕೆ' ಸಮಯದಲ್ಲಿ, ಮುಂದೆ ಸಾಧ್ಯವಾಗಬಹುದಾದ ಏಷಿಯಾದ ವಾರಸುದಾರರಾದ, **ಇಂದಿನ ಏಷಿಯಾದ ಯುವಜನತೆಗೊಂದು ಪ್ರತ್ಯೇಕ ಸ್ವಾಯತ್ತ ಮುಕ್ತ ವೇದಿಕೆಯಾಗಿ ಏಷಿಯಾ ಯುವಜನರ ಕ್ಯಾಂಪ್ ಹೈದರಾಬಾದ್‌ನ ಭಾರತ ಸ್ಕೌಟ್ಸ್-ಗೈಡ್ಸ್ ಆವರಣದಲ್ಲಿ ಜನವರಿ 3 ರಿಂದ 6ರವರೆಗೆ ನಡೆಯಿತು.**

ಹೆಚ್ಚಿದ ಬದ್ಧತೆ

ಭಾರತದ ವಿವಿಧ ರಾಜ್ಯಗಳು, ಭೂತಾನ್, ಟಿಬೆಟ್, ಶ್ರೀಲಂಕಾ, ನೇಪಾಳ, ಬಾಂಗ್ಲಾದೇಶ, ಮಲೇಷಿಯಾ, ಸ್ವೀಡನ್, ಫಿಲಿಫೈನ್ಸ್, ಥೈಲ್ಯಾಂಡ್, ಅಮೇರಿಕಾ ಹಾಗೂ ಜರ್ಮನಿ ರಾಷ್ಟ್ರಗಳೂ ಸೇರಿದಂತೆ ಒಟ್ಟು 600 ಪ್ರತಿನಿಧಿಗಳು ಈ ಕ್ಯಾಂಪ್‌ಗಳಲ್ಲಿ ಭಾಗವಹಿಸಿದ್ದರು. ವಿಶಾಲ ಸಭಾಂಗಣ, ಹಸಿರು ನೆಲೆಹಾಸು, ಪಕ್ಕದಲ್ಲಿಯೇ ಒಂದು ಕಾಮನ್ ವಸತಿ, ಇನ್ನೊಂದೆಡೆ ಯುವತಿಯರಿಗೆ ಪ್ರತ್ಯೇಕ ವಸತಿ, ಎಲ್ಲೆಡೆ ಯುವಕ-ಯುವತಿಯರ ಓಡಾಟ, ಹಾಡು ಕುಣಿತ, ಚರ್ಚೆ, ಘೋಷಣೆ, ಗೇಟ್‌ನಿಂದ-ಸಭಾಂಗಣಕ್ಕೆ ಹೋಗುವ ಎರಡೂ ಕಡೆ ಬಿಳಿ ಬ್ಯಾನರ್ ಬಟ್ಟೆ ಅವುಗಳ ಮೇಲೆ ನೂರಾರು ಸಂಘಟನೆಗಳು- ಗುಂಪುಗಳು ತಮ್ಮ ಕಾರ್ಯಕ್ರಮ ಬರೆದಿದ್ದವು. ವಿವಿಧ ವಿಚಾರಗಳ ಪೋಸ್ಟರ್ಸ್, ಬ್ಯಾನರ್ಸ್, ವಿಚಾರ ಸಂಕಿರಣ, ಚರ್ಚಾಗೋಷ್ಠಿ ಮುಂತಾದ ವಿವರಗಳ ಕರಪತ್ರ ಪುಸ್ತಕ ಮಾರಾಟ, ಟಿ ಶರ್ಟ್, ಕ್ಯಾಸೆಟ್ಸ್ ಮುಂತಾದವುಗಳ ವಿನಿಮಯ ಚರ್ಚೆ ಯುವಜನ ಕ್ಯಾಂಪ್‌ನ ಅವಿಭಾಜ್ಯ ಅಂಗವಾಗಿದ್ದವು.

ಕೆ.ಎನ್.ಉಮೇಶ್

ಒಂದೆಡೆ ದೊಡ್ಡದೊಂದು ಅಮೇರಿಕಾ ಸಾಮ್ರಾಜ್ಯಶಾಹಿಯ ಭೂತದಂತಹ ಬೊಂಬೆ! ಇನ್ನೊಂದೆಡೆ ಬೆಳೆದು ನಿಂತಮರಕ್ಕೆ ಜೋತು ಬಿದ್ದಿದ್ದ ನಾಲ್ಕಾರು ಬಣ್ಣದ ಬಟ್ಟೆ, ಕೆಳಗೆ ದಕ್ಷಿಣ ಆಫ್ರಿಕಾದ ಕರಿಯ ಜನರ ಹೋರಾಟದ ನೇತಾರ ನೆಲ್ಸನ್ ಮಂಡೇಲಾರ ಚಿತ್ರ. **"ನಮ್ಮ ಚಳುವಳಿಯಲ್ಲಿ ನಮ್ಮನ್ನಗಲಿದ ಹುತಾತ್ಮರನ್ನು ನೆನೆಯುವಾಗ, ನಾವು ಕುಸಿದು ಬೀಳುವುದಿಲ್ಲ. ಬದಲಿಗೆ, ಅವರ ಹೋರಾಟವನ್ನು ಮುಂದುವರಿಸುವ ಪಣ ಬದ್ಧತೆ ನಮ್ಮಲ್ಲಿ ಹೆಚ್ಚುತ್ತದೆ"** ಎಂಬ ಮಾತುಗಳುಳ್ಳ ಪೋಸ್ಟರ್ ಮೂಲಕ ಬೆಳೆದು ನಿಂತ ಜೀವಂತ ಮರವೇ ಹುತಾತ್ಮ ಸ್ಥಂಭವಾಗಿ ಜಗತ್ತಿನ ಶೋಷಕ ಸಾಮ್ರಾಜ್ಯಶಾಹಿ ಅಮೇರಿಕಾಗೆ ಸವಾಲಾಗಿ ನಿಂತಿತ್ತು.



ಬ್ರೆಜಿಲ್‌ನಲ್ಲಿ ಅಮೆರಿಕದ ಯುದ್ಧದಾಹಿ ನೀತಿ ವಿರೋಧಿಸಿ ನಡೆದ ವರ್ಲ್ಡ್ ಸೋಶಿಯಲ್ ಫೋರಂನ ರ್‍ಯಾಲಿ

ಯುವಜನರ ಕನಸು ಕಸಿಯಲು ಬಿಡುವುದಿಲ್ಲ

ಪ್ಯಾಲಿಸ್ಟೇನ್‌ನ ಅಬ್ದುಲ್ ಸಾಲೆಯುವರ ಅನುಭವದ ಬುತ್ತಿಯೊಂದಿಗೆ ಬಿಚ್ಚಿಕೊಂಡು ಪ್ಯಾಲಿಸ್ಟೇನಿಯರ ಶೋಷಣೆ, 70 ರಲ್ಲಿ ಕಣ್ಮರೆಯಾದ ತನ್ನ ಮಗನಂತೆ, ವಿಶ್ವದೆಲ್ಲೆಡೆ ಶೋಷಕ ಪ್ರಭುತ್ವದ; ಸಾಮ್ರಾಜ್ಯಶಾಹಿ ಪಿತೂರಿಯಿಂದ ಕಣ್ಮರೆಯಾದ ಮಕ್ಕಳೆಲ್ಲರ ತಾಯಂದಿರ ಪರವಾಗಿ ಅರ್ಜೆಂಟಿನಾದ ವೃದ್ದೆ ನರೋನಾ ಶೋಟ್ನಿಸ್‌ರ ಬಡಲಾಳದ ನೋವು, ಜಗತ್ತಿನ ಯುವಜನತೆಯ ಕನಸು ಕಸಿಯಲು ಹಪಹಪಿಸುತ್ತಿರುವ ಸಾಮ್ರಾಜ್ಯಶಾಹಿ ಜಾಗತೀಕರಣದ ಅಂತರಾಳವಾದ ಅದರ ವರ್ಗ ಹಿನ್ನೆಲೆಯನ್ನು ಬಿಡಿಸಿಟ್ಟ ಪ್ರೊ. ಪ್ರಭಾತ್ ಪಟ್ನಾಯಕ್‌ರವರ ವೈಚಾರಿಕ ಮಾತುಗಳೊಂದಿಗೆ ಉದ್ಘಾಟನೆ ಗೊಂಡಿತು ಯುವಜನರ ಕ್ಯಾಂಪ್.

ಯುವಜನತೆಯು ಧ್ವನಿಗಳು, ಜಾಗತೀಕರಣವನ್ನು ಅರ್ಥೈಸಿಕೊಳ್ಳುವಿಕೆ, ಮತ್ತು ಯುವಜನ ಚಳುವಳಿಯ ಪ್ರವೃತ್ತಿಗಳು ಮತ್ತು ಸವಾಲುಗಳು ಎಂಬ ಪ್ರಮುಖ ಮೂರು ವಿಷಯಗಳ ಕುರಿತ ಗೋಷ್ಠಿಗಳ ಮೂಲಕ ಪ್ರಸ್ತುತ ಯುವಜನರ ಪರಿಸ್ಥಿತಿ ಹಾಗೂ ಮುಂದಿನ ದಾರಿ ಗುರುತಿಸುವ ಚೊಚ್ಚಲು ಯತ್ನವನ್ನು ಯುವಜನ ಕ್ಯಾಂಪ್ ನಡೆಸಿತು.

ಪ್ರಸ್ತುತವನ್ನು ಉಜ್ವಲ ಭವಿಷ್ಯತ್ತಾಗಿ ಕ್ರಾಂತಿಕಾರಿ ದಾರಿಯೊಂದಿಗೆ ಬದಲಿಸುವ ಹಂಬಲವುಳ್ಳ ಸಂಘಟನೆಗಳೊಂದಿಗೆ, ಕ್ರಾಂತಿಕಾರಿ ಸೋಗಿನ ಯುವಜನ ಸಂಘಟನೆಗಳು, ಎಡ ಸಾಹಸವಾದಿ ಸಂಘಟನೆಗಳು, ವರ್ಗಕ್ಕಿಂತ ದಲಿತ, ಹಿಂದುಳಿದ ಪ್ರಶ್ನೆಗಳ ಪ್ರಮುಖ, ಸುಧಾರಣೆಯೆ ದಾರಿ, ಪ್ರತ್ಯೇಕತೆಯೇ ಪ್ರಸ್ತುತಕ್ಕಿರುವ ಪರಿಹಾರ ಎನ್ನುವ ಸಂಘಟನೆ, ಸ್ವಯಂ ಸೇವಾ ಸಂಘಟನೆಗಳು (ಎನ್.ಜಿ.ಒ) ಹೀಗೆ ಸಾವಿರಾರು ದೃಷ್ಠಿಕೋನದ ನೂರಾರು ಸಂಘಟನೆಗಳ ಸಮ್ಮಿಲನ ವಿಷ್ಯ ಯುವಜನ ಕ್ಯಾಂಪ್ ಆಗಿತ್ತು. ಪರಿಣಾಮ ಒಬ್ಬೊಬ್ಬರು ಒಂದೊಂದು ರೀತಿ ಜಾಗತೀಕರಣವನ್ನು ಅರ್ಥೈಸಿಕೊಂಡರೆ, ಯುವಜನರ ಧ್ವನಿಗಳೆಂದರೆ ಒಬ್ಬೊಬ್ಬರಿಗೆ ಒಂದೊಂದು ಧ್ವನಿ ಮಾತ್ರ ಕೇಳುವಂತಿತ್ತು. ಅಂತೆಯೇ ಯುವಜನ ಚಳುವಳಿ ಎಂದರೂ ಸಹಾ ಒಬ್ಬೊಬ್ಬರಿಗೆ ಒಂದೊಂದು ವಿಷಯಾಧಾರಿತ ಚಳುವಳಿ ಪ್ರಮುಖವಾಗಿ, ಒಟ್ಟಾರೆ ಅದೊಂದು ರೀತಿ ಹೊಸ ರುಚಿಯ ಕಿಚ್ಚಡಿಯಾಗಿತ್ತು.

ಈ ವಿಭಿನ್ನತೆ ಒಂದೊಂದು ಹಂತದಲ್ಲಿಯೂ ಪ್ರಕಟಗೊಳ್ಳುತ್ತ, ಭಿನ್ನಾಭಿಪ್ರಾಯಗಳು ಪ್ರಧಾನವಾಗುವ ವೇಳೆಗೆ "ಮತ್ತೊಂದು ವಿಷ್ಯಾ ಸಾಧ್ಯವಿದೆ" ಎಂಬುದು ಭಿನ್ನಾಭಿಪ್ರಾಯಗಳನ್ನು ಬದಿಗಿರಿಸಿ, ಮತ್ತೆ ಚರ್ಚೆ, ವಿಮರ್ಶೆ, ಅಭಿಪ್ರಾಯ ವಿನಿಮಯದ ಮೂಲಕ ಒಬ್ಬರನೊಬ್ಬರು ಅರಿಯುವ ಪ್ರಕ್ರಿಯೆ ಮುಂದುವರಿಯುತ್ತಿತ್ತು.


ಹೈದ್ರಾಬಾದಿನಲ್ಲಿ ನಡೆದ ಏಶಿಯಾ ಸೋಷಿಯಲ್ ಫೋರಂನಲ್ಲಿ ಭಾಗವಹಿಸಿದ್ದ ಯುವಜನ

ಚೀನಾದಿಂದ ಟಿಬೆಟ್‌ನ ಪ್ರತ್ಯೇಕತೆ, ಭಾರತದಿಂದ ಕಾಶ್ಮೀರ, ಉತ್ತರ ಪೂರ್ವ ರಾಜ್ಯಗಳ ವಿಮೋಚನೆ, ಸಲಿಂಗಕಾಮಿಗಳ - ಹಿಜಡಾಗಳ ಹಕ್ಕುಗಳು, ನಿರಾಶ್ರಿತರ ಬವಣೆ, ಅಲ್ಪಸಂಖ್ಯಾತರ, ಮಹಿಳೆಯರ, ದಲಿತರ, ಹಿಂದುಳಿದವರ, ಡ್ಯಾಂಗಳಿಂದ ನಿರ್ಗತಿಕರಾದವರ, ಬೀದಿ ಬದಿಯ ಚಿಂದಿ ಆಯುವವರ ಪ್ರಶ್ನೆಗಳು ಹೀಗೆ ನೂರಾರು ಪ್ರಶ್ನೆಗಳ- ಹಕ್ಕುಗಳ ಪ್ರತಿಪಾದನೆ ಹಿಂದೆಡೆಯಿಂದ ಬಂದರೆ ಮತ್ತೊಂದೆಡೆಯಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಯುವರೈತರ, ಕೂಲಿಕಾರ, ಕಾರ್ಮಿಕರ ಪ್ರಶ್ನೆ ನಿರುದ್ಯೋಗಗಳ, ಶಿಕ್ಷಣ ವಂಚಿತರ ಪ್ರಶ್ನೆಗಳು, ವಿದ್ಯಾರ್ಥಿಗಳ ಮುಂದಿನ ಶಿಕ್ಷಣದ ವ್ಯಾಪಾರೀಕರಣ, ಕೇಸರೀಕರಣದ ಪ್ರಶ್ನೆಗಳು ವಿಭಿನ್ನ ಸೈದ್ಧಾಂತಿಕ ನೆಲೆಯಲ್ಲಿ ಚರ್ಚೆಗಳು ವ್ಯಕ್ತವಾದವು.

ಸಂವಾದಿ ವೇದಿಕೆ

"ನೂರಾರು ಭಿನ್ನಾಭಿಪ್ರಾಯಗಳ ನಡುವೆಯೂ ಪ್ರಜಾಸತ್ತಾತ್ಮಕವಾಗಿ ವಿಭಿನ್ನ ನೆಲೆಗಳ... ಅರ್ಥೈಸಿಕೊಳ್ಳಲು, ಸಂವಾದಿಸಲು ಒಂ... ಸ್ವಾಯತ್ತ ವೇದಿಕೆಯಾಗಿದೆ ಕ್ಯಾಂಪ್" ಎಂ... ಸಂಘಟಕರಲ್ಲಿ ಒಬ್ಬರಾದ **ಮೀನಾ ಮೆನೆ...** ಮಾತುಗಳು, "ಪ್ರಸ್ತುತ ಜಾಗತೀಕರ... ಕೋಮುವಾದೀಕರಣದ ವಿರುದ್ಧ ಅಂಬೇಡ್ಕ... ಗಾಂಧಿ, ಮಾರ್ಕ್ಸ್, ಭಗತ್‌ಸಿಂಗ್ ಎಲ್ಲಾ ಒಂ... ಕಡೆ ನಿಂತು ಹೋರಾಟ ನಡೆಸು... ಅನಿವಾರ್ಯತೆಯ ಅವಶ್ಯಕತೆ" ವಿವರಿ... **ಮೇಧಾ ಪಾಟ್ಕರ್** ಹಾಗೂ "ಅಸಮಾನತೆಯ... ಮೈವೆತ್ತ ಪ್ರಸ್ತುತ ಜಗತ್ತನ್ನು ಬದಲಿಸದೆ ಅ... ಮಾರ್ಗವಿಲ್ಲ ಹಾಗಾಗಿ ಮತ್ತೊಂದು ವಿ... ಸಾಧ್ಯವಿದೆ ಎಂಬುದು ಮಾತ್ರವಲ್ಲದೆ 'ಮತ್ತೊಂ... ವಿಶ್ವ ಅನಿವಾರ್ಯ ಹಾಗೂ ಅದ... ಸಾಧ್ಯವಾಗಲೇಬೇಕು" ಎಂಬ **ಶುಭಾಷಿ... ಆಲಿಯವರ** ಮಾತುಗಳೊಂದಿಗೆ ಕ್ಯಾಂ... ಸಮಾರೋಪಗೊಂಡಿತು.

ಮಿತಿಗಳು ಮತ್ತು ಸಾಧ್ಯತೆಗಳು

ಪ್ರಜಾನಾಟ್ಯ ಮಂಡಳಿಯ ಡಪ್ಪು ಡ್ಯಾನ್... ಗೋವಿಂದ- ಗೋವಿಂದ ನಾಟಕ, ಮಹಾರಾಷ್ಟ್ರ... 'ಯುವ' ಸಂಘಟನೆಯ 'ಬಾಂಗ್ರಾ' ತಮಿಳುನಾ... ನಾಡಿನ ದಪ್ಪು ಡ್ಯಾನ್ಸ್, ದೆಹಲಿಯ ಮ್ರಿಗಲಾದ... ಸಂಗೀತ ಸಂಜೆ, ಬೆಂಗಳೂರಿನ 'ಸಂವಾದ' ... ಸಮಾಲೋಚನೆ ಮುಂತಾದ ಎನ್.ಜಿ.ಓ.ಗ... ಡಬ್ಲ್ಯು.ಡಬ್ಲ್ಯು.ಡಬ್ಲ್ಯು ಡಾಟ್ ಕಾ... ಕೋಕೋ-ಕೋಲಾ ಹಾಡು ಮುಂತಾ... ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಕಂಡ ಏಕ... ಯುವಜನರ ಪ್ರಣಾಳಿಕೆ ಬಿಡುಗಡೆ ಮಾಡು... ಕುರಿತ ವಿಚಾರದಲ್ಲಿ ಮೂಡಲಿಲ್ಲ! ಕ್ಯಾಂಪ್‌ನ... ಭಾಗವಹಿಸಿದ್ದ ವಿವಿಧ ಸಂಘಟನೆಗಳ ವಿಭಿ... ಹಂತದ ಹಾಗೂ ಸೈದ್ಧಾಂತಿಕ ನೆಲೆಯ... ತಿಳುವಳಿಕೆಯ ಕಾರಣ ಪ್ರಣಾಳಿಕೆ ವಿಚಾರದ... ಒಬ್ಬರಿಗೆ ಒಂದೊಂದು ವಿಚಾ... ಪ್ರಮುಖವಾದವು. ಯುವಜನರ ನಡುವೆ ಇರು... ಬಹುರೂಪಿ ಅಸ್ತಿತ್ವವನ್ನು ನೆಲೆಗಳನ್ನು ಒಂದೆ... ಸೆಳೆಯುವ ಶಕ್ತಿ- ಸಾಮರ್ಥ್ಯ ಹೊಂದಿ... ನಿರುದ್ಯೋಗ- ಶಿಕ್ಷಣದ ವ್ಯಾಪಾರೀಕರಣ... ಪ್ರಶ್ನೆಗಳು ಕ್ಯಾಂಪ್‌ನಲ್ಲಿ ಭಾಗವಹಿಸಿದ್ದ ಬಹುತೇ... ಮಂದಿಗೆ, ಅದರಲ್ಲೂ ಅದರ ಸಂಘಟಕರ... ಪ್ರಮುಖರಾದ National Youth Foundati... ಪ್ರಾಯೋಜಿತ ಎನ್.ಜಿ.ಓ.ಗಳ ಪ್ರಮು... ಪ್ರಶ್ನೆಯಾಗಿರದಿದ್ದ ಕಾರಣ 'ಯುವಜನ... ಪ್ರಣಾಳಿಕೆ' ಹೊರಬರಲಿಲ್ಲ ಎಂಬುದು ಏಷ... ಯುವಜನ ಕ್ಯಾಂಪ್‌ನ ಪ್ರಮು... ದೌರ್ಬಲ್ಯವಾಗಿದೆ. ಆದರೂ ಸಹಾ 'ಮತ್ತೊಂ... ಏಷ್ಯಾದ ಸಾಧ್ಯತೆಯೆಡೆಗೆ' ಇಟ್ಟ ಅಂಬೆಗಾಲಾಗಿ... ಹೈದರಾಬಾದ್‌ನಲ್ಲಿ ನಡೆದ ಪ್ರಥಮ ಏ... 'ಯುವಜನ ಕ್ಯಾಂಪ್'.

ಕೇಳ್ಕರ್ ಸಮಿತಿಯ ಶಿಫಾರಸುಗಳು ಮಧ್ಯಮವರ್ಗದವರಿಗೆ ತುಂಬಾ ಅನುಕೂಲಕರವೆಂಬಂತೆ ಬಿಂಬಿಸಲಾಗುತ್ತಿದೆ. ಆದರೆ ವಾಸ್ತವದಲ್ಲಿ ಮಧ್ಯವರ್ಗ ಮತ್ತು ಬಡಜನತೆಯನ್ನು ದೋಚಿ ಶ್ರೀಮಂತರಿಗೆ ಹಾಗೂ ಖಾಸಗಿ ಕಂಪನಿಗಳಿಗೆ, ಯಥೇಚ್ಛ ಲಾಭದ ಅವಕಾಶ ನೀಡಿದೆ ಕೇಳ್ಕರ್ ಸಮಿತಿ. ಜಾಗತಿಕ 'ತ್ರಿಮೂರ್ತಿ'ಗಳ ಷರತ್ತು ಮತ್ತು ಸ್ವದೇಶಿ ಸೋಗಿನ ತ್ರಿಶೂಲಧಾರಿಗಳ ನಡುವಿನ ವ್ಯವಹಾರಗಳೇ ಈ ಶಿಫಾರಸುಗಳಲ್ಲಿ ಸ್ಪಷ್ಟಗೋಚರ. ಇದನ್ನು ಗುರುತಿಸಿದ ಲೇಖನ.

ಸಿರಿವಂತರಿಗೆ ಸಿರಿ

ಕೇಳ್ಕರ್ ಸಮಿತಿ ಶಿಫಾರಸ್ಸು

ಬಾಲಕೃಷ್ಣ ಶೆಟ್ಟಿ

'ರಾಬರ್ಟ್‌ನನ್ನು ದರೋಡೆ ಮಾಡಿ ಪೀಟರ್‌ಗೆ ಕೊಡು' (Rob Robert and pay Peter) ಎಂಬ ಇಂಗ್ಲಿಷ್ ಗಾದೆಯಂತಾಗಿದೆ ಬಿಜೆಪಿ ಸರಕಾರ ನೇಮಿಸಿದ ಕೇಳ್ಕರ್ ಸಮಿತಿಯ ಶಿಫಾರಸ್ಸು. ಗಾದೆಯ ಪ್ರಕಾರ ಒಬ್ಬನನ್ನು ಮಾತ್ರ ದರೋಡೆ ಮಾಡಿ ಇನ್ನೊಬ್ಬನಿಗೆ ನೀಡುವುದು. ಆದರೆ ಕೇಳ್ಕರ್ ಸಮಿತಿ ಶಿಫಾರಸ್ಸುಗಳ ಪ್ರಕಾರ, ತೆರಿಗೆಗಳ ಮೂಲಕ ಮಧ್ಯಮವರ್ಗ ಮತ್ತು ಬಡಜನರನ್ನು ದರೋಡೆ ಮಾಡಿ ಶ್ರೀಮಂತರಿಗೆ ನೀಡುವುದಾಗಿದೆ.

ಆದಾಯ ತೆರಿಗೆ ಮಿತಿಯನ್ನು ರೂ.50,000 ದಿಂದ 1 ಲಕ್ಷಕ್ಕೆ ಏರಿಸಿರುವುದರಿಂದ, ಮೇಲುನೋಟಕ್ಕೆ, ಇದು ಮಧ್ಯಮ ವರ್ಗದ ನೌಕರರಿಗೆ ಅನುಕೂಲ ಎಂಬಂತೆ ಬಿಂಬಿಸಲಾಗಿದೆ. ಆದರೆ ಹಲವಾರು ವಿನಾಯಿತಿಗಳನ್ನು ತೆಗೆದುಹಾಕುವುದರಿಂದ ಅನುಕೂಲಕ್ಕಿಂತ ಅನನುಕೂಲವೇ ಜಾಸ್ತಿ. ಆದರೆ 4 ಲಕ್ಷಕ್ಕಿಂತ ಹೆಚ್ಚು ಆದಾಯ ಹೊಂದಿರುವವರಿಗೆ, ಅಂದರೆ ಹೆಚ್ಚಾಗಿ ದೊಡ್ಡ ದೊಡ್ಡ ಕಂಪನಿಗಳಿಗೆ, ಆದಾಯ ತೆರಿಗೆಯನ್ನು ಶೇ.36.75ರಿಂದ 30ಕ್ಕೆ ಇಳಿಸಿರುವುದರಿಂದ ಕೋಟ್ಯಾಂತರ ರೂಪಾಯಿ ಲಾಭವಾಗಲಿದೆ.

ರಿಯಾಯಿತಿಗಳು ವಾಪಸ್: ಆದಾಯ ತೆರಿಗೆಯ ಮಿತಿಯನ್ನು ಏರಿಸಬೇಕು ಎಂಬುದು ಎಡ ಚಳುವಳಿಯ ಪ್ರಮುಖ ಬೇಡಿಕೆಯಾಗಿತ್ತು. ಪ್ರತಿಬಾರಿ ಬಜೆಟ್ ಪೂರ್ವದ ಚರ್ಚೆಯ ಸಂದರ್ಭದಲ್ಲಿ ಕಾರ್ಮಿಕ ಸಂಘದ ಮುಖಂಡರು ಆದಾಯ ತೆರಿಗೆಯ ಮಿತಿಯನ್ನು ಹೆಚ್ಚಿಸಬೇಕೆಂಬ ಬೇಡಿಕೆಯನ್ನು ಮುಂದಿಡುತ್ತಿದ್ದರು. ಹಲವಾರು ವರ್ಷಗಳಿಂದ 50,000 ಮಿತಿಯನ್ನು ಹೊಂದಿದ್ದ ಪರಿಸ್ಥಿತಿಯಲ್ಲಿ, ಸೇವಾ ಕ್ಷೇತ್ರದಲ್ಲಿ ಸಾರ್ವಜನಿಕ ಉದ್ದಿಮೆಗಳಲ್ಲಿ ಕೆಲಸ ಮಾಡುತ್ತಿರುವ 4ನೇ ದರ್ಜೆ ನೌಕರರು ಸಹ ಆದಾಯ ತೆರಿಗೆ ನೀಡಬೇಕಾದ ಪರಿಸ್ಥಿತಿ ಇದೆ. ಆದ್ದರಿಂದ ಆದಾಯ ತೆರಿಗೆ ಮಿತಿಯನ್ನು ಏರಿಸಲು ಸಲಹೆ ಮಾಡಿರುವುದು ಸ್ವಾಗತಾರ್ಹ.

ಆದರೆ, ಹಲವಾರು ರಿಯಾಯತಿಗಳನ್ನು ಹಿಂತೆಗೆದುಕೊಂಡಿರುವುದರಿಂದ ಆದಾಯ ತೆರಿಗೆ ಮಿತಿಯನ್ನು ಹೆಚ್ಚಿಸಿರುವುದರಿಂದ ಯಾವುದೇ ಲಾಭವಾಗುವುದಿಲ್ಲ. ಬದಲಾಗಿ ಹಲವಾರು ಹಂತಗಳಲ್ಲಿ ನಷ್ಟವುಂಟಾಗುತ್ತದೆ.

ಉದಾಹರಣೆಗೆ ಕೇಳ್ಕರ್ ಸಮಿತಿಯ ಶಿಫಾರಸ್ಸುಗಳು ಜಾರಿಯಾದಲ್ಲಿ ಸೆಕ್ಷನ್ 88 'ಸಿ' ಪ್ರಕಾರ ರೂ.5000ದವರೆಗೆ ಮಹಿಳೆಯರು, ಪಡೆಯುತ್ತಿದ್ದ ತೆರಿಗೆ ರಿಬೇಟ್ ಸವಲತ್ತನ್ನು ಹಿಂತೆಗೆದುಕೊಳ್ಳಲಾಗುವುದು. ಸೆಕ್ಷನ್ 88 ಬಿ ಪ್ರಕಾರ ಹಿರಿಯ ನಾಗರೀಕರು (ಸೀನಿಯರ್ ಸಿಟಿಜನ್- 65 ವರ್ಷಕ್ಕಿಂತ ಹೆಚ್ಚು) 15,000 ದವರೆಗೂ ಪಡೆಯುತ್ತಿದ್ದ 'ರಿಬೇಟ್'ನ್ನು 4000 ರೂ.ಗೆ ಮಿತಿಗೊಳಿಸಲಾಗಿದೆ. ಹಾಗೆಯೇ ಮಕ್ಕಳ ವಿದ್ಯಾಭ್ಯಾಸ, ಮನೆಕಟ್ಟಲು ಪಡೆದ ಸಾಲದ ಮೇಲೆ ಸಿಗುತ್ತಿದ್ದ ರಿಯಾಯತಿಗಳಿಗೆ ಕತ್ತರಿ ಹಾಕಲಾಗಿದೆ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಾಲ ಪಡೆದರೆ, ರೂ.40,000 ವರೆಗೆ ಕಂತು ವಾಪಾಸು ಮಾಡುವ ಹಣಕ್ಕೆ ತೆರಿಗೆ ವಿನಾಯಿತಿ ಸಿಗುತ್ತಿತ್ತು. ಈ ತೆರಿಗೆ ಮಿತಿಯನ್ನು 4000ಕ್ಕೆ ಮಿತಿಗೊಳಿಸಲಾಗಿದೆ. ಹಾಗೆಯೇ ಮನೆಕಟ್ಟಲು ಪಡೆದ ಸಾಲದ ಮೇಲಿನ ರಿಯಾಯಿತಿಯನ್ನು ಕಡಿತಗೊಳಿಸಲಾಗಿದೆ.

ಉಳಿತಾಯಕ್ಕೆ ಕುತ್ತು:

ಸಾರ್ವಜನಿಕ ಬಂಡವಾಳ ವಿನಿಯೋಗಕ್ಕೆ ಹೊಡೆತ

ಆದಾಯ ತೆರಿಗೆಯ ಕಾನೂನಿನ ಪ್ರಕಾರ ಉಳಿತಾಯ ಮಾಡುವುದರ ಮೂಲಕ ತೆರಿಗೆಯ ಭಾರ ಕಡಿಮೆ ಮಾಡಿಕೊಳ್ಳಬಹುದಾಗಿತ್ತು. ಇದರಿಂದ ತೆರಿಗೆದಾರನ ಉಳಿತಾಯ ಜಾಸ್ತಿಯಾಗಿ ಭವಿಷ್ಯವನ್ನು ರೂಪಿಸುವುದರಲ್ಲಿ ಸಹಾಯವಾಗುತ್ತಿತ್ತು. ಸೆಕ್ಷನ್ 88 ಇದಕ್ಕೆ ಸಹಕಾರಿಯಾಗುತ್ತಿತ್ತು. ಇದರ ಪ್ರಕಾರ ತೆರಿಗೆದಾರನು ವಿಮೆ, ಭವಿಷ್ಯನಿಧಿ, ರಾಷ್ಟ್ರೀಯ ಉಳಿತಾಯ ನಿಧಿ (ಎನ್.ಎಸ್.ಸಿ) ಸರಕಾರಿ ಬಾಂಡುಗಳಲ್ಲಿ ಹಣ ತೊಡಗಿಸುವು ದರಿಂದ ಆದಾಯ ತೆರಿಗೆ ಕಡಿಮೆ ಮಾಡಿಕೊಂಡು ಭವಿಷ್ಯತ್ತಿನ ಯೋಜನೆ ರೂಪಿಸಲು ಸಹಕಾರಿಯಾಗುತ್ತಿತ್ತು.

ಮಾತ್ರವಲ್ಲ ಹೆಚ್ಚಾಗಿ ಸಾರ್ವಜನಿಕ ಸಂಸ್ಥೆಗಳಲ್ಲಿ ಈ ಹಣವನ್ನು ವಿನಿಯೋಗಿಸುವುದರಿಂದಾಗಿ ಹಲವಾರು ಬೃಹತ್ ಸಾರ್ವಜನಿಕ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಹಾಯವಾಗುತ್ತಿತ್ತು. ರಾಷ್ಟ್ರೀಯ ಉಳಿತಾಯ ನಿಧಿ (ಎನ್.ಎಸ್.ಸಿ) ಯಲ್ಲಿ ತೊಡಗಿಸಿದ ಹಣ ಹೆಚ್ಚಾಗಿ ರಾಜ್ಯ ಸರಕಾರಗಳಿಗೆ ಸೇರುವುದರಿಂದ ಕೇಂದ್ರೀಕೃತ ಅರ್ಥ ವ್ಯವಸ್ಥೆಯಿಂದಾಗಿ ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿರುವ ರಾಜ್ಯ ಸರಕಾರಗಳಿಗೆ ಸಹಾಯವಾಗುತ್ತಿತ್ತು. ಇದನ್ನು ಹಿಂತೆಗೆದುಕೊಂಡದ್ದೇ ಆದಲ್ಲಿ ರಾಜ್ಯ ಸರಕಾರಗಳು ತೀವ್ರ ಆರ್ಥಿಕ ಮುಗ್ಗಟ್ಟನ್ನು ಎದುರಿಸಬೇಕಾಗುತ್ತದೆ.

ಹಲವಾರು ಖಾಸಗಿ ಸಂಸ್ಥೆಗಳಿಗೆ ಜೀವ ವಿಮಾ ಕ್ಷೇತ್ರಕ್ಕೆ ಪ್ರವೇಶ ನೀಡಿದರೂ. ಜೀವವಿಮಾನಿಗಮ (ಎಲ್.ಐ.ಸಿ)ದ ಅಧಿಪತ್ಯವನ್ನು ಕೊನೆಗಾಣಿಸಲು ಸಾಧ್ಯವಾಗಿರಲಿಲ್ಲ. ಈಗ ಸೆಕ್ಷನ್ 88ನ್ನು ಹಿಂತೆಗೆದುಕೊಂಡು, ಸೆಕ್ಷನ್ 80 ಸಿಸಿಸಿಯ ಅಡಿಯಲ್ಲಿರುವ ಉಳಿತಾಯದ ಮಿತಿಯನ್ನು ರೂ.10,000 ದಿಂದ 20,000ಕ್ಕೆ ಏರಿಸುವುದರ ಮೂಲಕ ಖಾಸಗಿ ವಿಮಾ ಸಂಸ್ಥೆಗಳಿಗೆ ಉತ್ತೇಜನ ನೀಡಿದಂತಾಗಿದೆ.

ಖಾಸಗಿ ಸಂಸ್ಥೆಗಳಿಗೆ ಉತ್ತೇಜನ :

ಮೇಲೆ ಹೇಳಿದಂತೆ ಸೆಕ್ಷನ್ 88ರ ಅಡಿಯಲ್ಲಿ ಮಾಡುವ ಉಳಿತಾಯವು ಕಡ್ಡಾಯವಾಗಿ ಸಾರ್ವಜನಿಕ ಹಣಕಾಸು ಸಂಸ್ಥೆಗಳಲ್ಲಿ ವಿನಿಯೋಗ ಮಾಡಬೇಕಾಗುತ್ತದೆ. ಇದನ್ನು ಹಿಂತೆಗೆದುಕೊಂಡು, ಸೆಕ್ಷನ್ 80 ಸಿಸಿಸಿ ಪ್ರಕಾರ ಉಳಿತಾಯದ ಮಿತಿಯನ್ನು ಹೆಚ್ಚಿಸಿದುದರಿಂದ ಖಾಸಗಿ ವಿಮಾ ಸಂಸ್ಥೆಗಳಲ್ಲಿ ವಿನಿಯೋಗ ಹೆಚ್ಚಾಗುತ್ತದೆ. ಖಾಸಗಿ ವಿಮಾ ಕ್ಷೇತ್ರದಲ್ಲಿದೊಡ್ಡ ಸಂಖ್ಯೆಯಲ್ಲಿ ವಿದೇಶಿ ಕಂಪನಿಗಳು ಬರುತ್ತಿವೆ ಎಂದು ಬೇರೆ ಹೇಳಬೇಕಾಗಿಲ್ಲ.

ಮಾತ್ರವಲ್ಲ ಆದಾಯ ತೆರಿಗೆಯ ಅಡಿಯಲ್ಲಿ ಬರುವ ವ್ಯಕ್ತಿಯು ಉಳಿತಾಯ ಮಾಡಿ ಲಾಭವಿಲ್ಲವೆಂದು ಗಮನಿಸಿದಾಗ, ಗ್ರಾಹಕ ವಸ್ತುಗಳಲ್ಲಿ, ಸಟ್ಟಾ ವ್ಯವಹಾರ, (ಶೇರು, ಮ್ಯುಚುವಲ್ ಫಂಡ್)ಗಳಲ್ಲಿ ಹಣ ತೊಡಗಿಸಲು ಆರಂಭಿಸುತ್ತಾನೆ. ಈಗಾಗಲೇ ಬ್ಯಾಂಕುಗಳಲ್ಲಿ ಬಡ್ಡಿದರ ಕಡಿಮೆ ಆಗಿರುವುದರಿಂದ ಮಧ್ಯಮ ವರ್ಗ, ನಿವೃತ್ತಿದಾರರು ಕಂಗಾಲಾಗಿ ದ್ದಾರೆ. ಇದರಿಂದ ಮಾರುಕಟ್ಟೆ ವಿಶಾಲವಾಗುತ್ತದೆ ಎಂಬ ಹೇಳಿಕೆ ನೀಡಬಹು ದಾದರೂ ನಿಜವಾದ ಲಾಭ ಆಗುವುದು, ತನ್ನ ಜಾಹೀರಾತಿನ ಪ್ರಭಾವ ದಿಂದ ಜನರನ್ನು ವಂಚಿಸುವ ಖಾಸಗೀ ಕಂಪನಿಗಳಿಗೆ.

ಅಂದರೆ, ಕೇಳ್ಕರ್ ಸಮಿತಿಯ ಶಿಫಾರಸ್ಸುಗಳನ್ನು ಜಾರಿಗೊಳಿಸಿದಲ್ಲಿ ತ್ರಿಮೂರ್ತಿ (ಐಎಂಎಫ್, ವಿಶ್ವಬ್ಯಾಂಕ್, ವಿಶ್ವವ್ಯಾಪಾರ ಸಂಘಟನೆ)ಗಳ ಷರತ್ತುಗಳನ್ನು 'ತ್ರಿಶೂಲ' (ಸಂಘಪರಿವಾರ) ಜಾರಿಗೊಳಿಸಿದಂತೆ ಆಗುತ್ತದೆ ಅಷ್ಟೆ.

ಲಾಭಕೋರರಿಗೆ ಲಾಭ:

ಕೇಳ್ಕರ್ ಸಮಿತಿಯ ಶಿಫಾರಸ್ಸುಗಳ ಪ್ರಕಾರ ಕಾರ್ಪೊರೇಟ್ ಸಂಸ್ಥೆಗಳಿಗೆ ಹೇರಳ ಲಾಭವಾಗಲಿದೆ. ಈ ಸಂಸ್ಥೆಗಳಿಗೆ ಆದಾಯ ತೆರಿಗೆಯನ್ನು ಶೇ.36.5ರಿಂದ ಶೇ.30ಕ್ಕೆ ಇಳಿಸಲಾಗಿದೆ. ಅಂದರೆ 10 ಕೋಟಿ ಲಾಭ



ಮಾಡುವ ಕಂಪನಿಯು 65 ಲಕ್ಷ ರೂ. ಆದಾಯ ತೆರಿಗೆಯಲ್ಲಿ ಉಳಿತಾಯ ಮಾಡುತ್ತದೆ. ಇದರಿಂದ ಲಾಭಕೋರ ಖಾಸಗಿ ಕಂಪನಿಗಳಿಗೆ ಲಾಭವಾಗುವುದು ಮಾತ್ರವಲ್ಲದೆ, ದೇಶದ ಖಜಾನೆಗೆ ಕೋಟಿಗಟ್ಟಲೆ ನಷ್ಟವುಂಟಾಗುತ್ತದೆ. ಇದರ ಹೊರೆಯನ್ನು ಪುನಃ ಜನಸಾಮಾನ್ಯರು ಭರಿಸಬೇಕಾಗುತ್ತದೆ. ಕೇಳ್ಕರ್ ಸಮಿತಿಯೇ ಹೇಳುವ ಪ್ರಕಾರ 1 ರಿಂದ 1.5 ಲಕ್ಷ ಆದಾಯವಿರುವವರಿಗೆ 2567 ರೂ ಲಾಭವಾದರೆ 10 ಲಕ್ಷಕ್ಕಿಂತ ಜಾಸ್ತಿ ಆದಾಯ ಇರುವವರಿಗೆ 69,579 ರೂ. ಲಾಭ ಆಗಲಿದೆ. ಯಾರಿಗೆ ಲಾಭ, ಯಾರಿಗೆ ನಷ್ಟ - ಓದುಗರೇ ನಿರ್ಧರಿಸಬೇಕು.

ಕೇಳ್ಕರ್ ಸಮಿತಿಯ ಶಿಫಾರಸ್ಸುಗಳ ಪ್ರಕಾರ ಈ ವಿಭಾಗದವರಿಗೆ ಆದಾಯ ತೆರಿಗೆಯಲ್ಲಿ ಮಾತ್ರ ಉಳಿತಾಯವಾದುದಲ್ಲ. ರಫ್ತು ಆದಾಯದ ಮೇಲಿನ ತೆರಿಗೆಯನ್ನು ಹಿಂದಕ್ಕೆ ಪಡೆಯಲಾಗಿದೆ. ಆಮದು ತೆರಿಗೆಯ ಮೇಲೆ ಗರಿಷ್ಠ ಮಿತಿಯನ್ನು ಶೇ.10ಕ್ಕೆ ಇಳಿಸಲಾಗಿದೆ. ಇದರಿಂದ ಈಗಾಗಲೇ **ನಾಶವಾಗುತ್ತಿರುವ ದೇಶೀಯ ಕೈಗಾರಿಕೆಗಳು ಸುಟ್ಟು ಬೂದಿಯಾಗಲಿದೆ.** ಅಲ್ಲದೇ ದೇಶದ ಆದಾಯ ಕಡಿಮೆಯಾಗಲಿದೆ.

ಬಿಜೆಪಿ- ವಿರೋಧದ ನಾಟಕ: ಆಶ್ಚರ್ಯದ ಸಂಗತಿ ಎಂದರೆ ತಾನೇ ನೇಮಿಸಿದ ಕೇಳ್ಕರ್ ಸಮಿತಿಯ ಶಿಫಾರಸ್ಸುಗಳನ್ನು ಬಿಜೆಪಿ ವಿರೋಧ ಮಾಡುತ್ತಿದೆ. ಕೇಳ್ಕರ್ ಸಮಿತಿಯ ಮುಖ್ಯಸ್ಥ ವಿಜಯ್ ಕೇಳ್ಕರ್ ಕೇಂದ್ರ ಹಣಕಾಸು ಸಚಿವ ಜಸವಂತ್ ಸಿಂಗ್ ಅವರ ಇಲಾಖೆಯ ಕಾಯದರ್ಶಿ ಈ ಸರಕಾರಿ ಅಧಿಕಾರಿ ತನ್ನ ಮೇಲಿನ ಮಂತ್ರಿಯ ಮಾತನ್ನು ಕೇಳದೆ ಇನ್ನಾರನ್ನು ಕೇಳಬೇಕು. ಈ ಪತ್ರಿಕೆಯಲ್ಲಿ ಹಲವಾರು ಬಾರಿ ಚರ್ಚಿಸಿದಂತೆ, ಫ್ಯಾಸಿಸಂ ಪ್ರವೃತ್ತಿಯ ಬಿಜೆಪಿ, ಜನವಿರೋಧಿ ಕಾನೂನುಗಳನ್ನು ತಾನೇ ಜಾರಿಗೊಳಿಸಿ, ತಾನೇ ವಿರೋಧ ಮಾಡುತ್ತದೆ. ಕೇಳ್ಕರ್ ಸಮಿತಿಯ ಶಿಫಾರಸ್ಸುಗಳು ಜ್ಯಾರಿಯಾಗುವುದಿದ್ದರೂ, ವಿರೋಧದ ನಾಟಕದ ಮೂಲಕ, ತನ್ನಿಂದ ದೂರ ಸರಿಯುತ್ತಿರುವ ಮಧ್ಯಮ ವರ್ಗವನ್ನು ಪುನಃ ವಂಚಿಸುವ ಪ್ರಯತ್ನ ನಡೆಸಿದೆ.

ಭಾರತ ಪೆಟ್ರೋಲಿಯಂ ಮತ್ತು ಹಿಂದೂಸ್ತಾನ ಪೆಟ್ರೋಲಿಯಂನ ಖಾಸಗೀಕರಣದ ಬಗ್ಗೆ ಈ ನಾಟಕ ನಡೆದುದನ್ನು ಜನತೆ ಮರೆತಿಲ್ಲ. ಜಾರ್ಜ್ ಫರ್ನಾಂಡಿಸ್, ಮುರಳಿಮನೋಹರ ಜೋಷಿ ಮತ್ತು ಪೆಟ್ರೋಲಿಯಂ ಖಾತೆ ಸಚಿವ ರಾಮನಾಯಕ್ ವಿರೋಧ ಮಾಡಿದರೆಂದು ಪತ್ರಿಕೆಗಳಲ್ಲಿ ದೊಡ್ಡ ಪ್ರಚಾರಗಿಟ್ಟಿಸಿಕೊಳ್ಳಲಾಯ್ತು. ಆದರಿಂದಾಗಿ ಖಾಸಗೀಕರಣದ ನಿರ್ಧಾರವನ್ನು 3 ತಿಂಗಳು ಮುಂದಕ್ಕೆ ಹಾಕಲಾಯ್ತು. ಆದರೆ ಈಗ! ಸಂಸತ್ತಿನ ಒಪ್ಪಿಗೆಯನ್ನು ಪಡೆಯದೆ ಎಂದು ತೈಲ ಕಂಪನಿಗಳು ಖಾಸಗಿಯವರಿಗೆ ಮಾರಾಟ ಮಾಡಲು ವಾಜಪೇಯಿ ನೇತೃತ್ವದ ಬಿಜೆಪಿ ಸರಕಾರ ನಿರ್ಧರಿಸಿದೆ. ಹಾಗಾದರೆ ವಿರೋಧ/ನಾಟಕವಲಲದೆ ಇನ್ನೇನು? ಮಾಡಿದ್ದು ಯಾಕೆ? ಇದು ಪ್ರಮುಖ ವಿರೋಧಪಕ್ಷ ಕಾಂಗ್ರೆಸ್ ಈ ಶಿಫಾರಸ್ಸುಗಳು ತನಗೆ ಸಂಬಂಧವೇ ಇಲ್ಲ ಎಂಬಂತೆ ತೆಪ್ಪಗೆ ಕುಳಿತಿದೆ. ಜನಪರ ನೀತಿ ಸಿದ್ಧಾಂತಗಳನ್ನು ಗಾಳಿಗೆ ತೂರುತ್ತಿರುವ ಕಾಂಗ್ರೆಸ್ ಮುಖ್ಯಮಂತ್ರಿಗಳನ್ನು ಬದಲಿಸಿ, ಮತಗಳನ್ನು ಗಳಿಸಿ ಅಧಿಕಾರಕ್ಕೇರಬೇಕೆಂದು ಬಯಸುತ್ತದೆ.


ಆದ್ದರಿಂದ ತೀವ್ರವಾದ ಪ್ರತಿಭಟನೆ, ಚಳುವಳಿ ಮಾತ್ರವೇ ಕೇಳ್ಕರ್ ಸಮಿತಿಯ ಶಿಫಾರಸ್ಸುಗಳನ್ನು ಕಸದ ಬುಟ್ಟಿಗೆ ಎಸೆಯಬಹುದು.

ಸಿಪಿಐ(ಎಂ) ಪ್ರಚಾರಾಂದೋಲಕ್ಕೆ ಅಪೂರ್ವ ಸ್ಪಂದನ

ಪುಟ 3 ರಿಂದ

ಸಿಎಂ ಎನ್ನಲು ಪತ್ರಿಕೆಗಳು ಹಿಂಜರಿಯುತ್ತಿವೆ. ಹಾಗೆ ಹೇಳಿದರೆ ಜನ ನಂಬಬೇಕಲ್ಲ. ಹೇಗೋ ಹೇಗೋ ಅಲಂಕರಿಸಿದ ಅಧಿಕಾರದ ಕುರ್ಚಿಯಲ್ಲಿ ಕೃಷ್ಣ ಸಾರ್ವಭೌಮನಂತೆ ಬೀಗಬಹುದು. ಆದರೆ ಜನ ಕೇಳಬೇಕಲ್ಲ. ಕೃಷ್ಣ ಸೃಷ್ಟಿಸಿದ ಭ್ರಮಾಲೋಕದ ಪೊರೆ ಹರಿಯುತ್ತಿದೆ. ಮೆಲ್ಲಮೆಲ್ಲನೆ ವಿಶ್ವಬ್ಯಾಂಕ್ ಪ್ರಾಯೋಜಿತ ಅಧಿಕಾರದ ಮೇಕಪ್ ಕರಗುತ್ತಿದೆ. ಆದ್ದರಿಂದಲೇ ಜನತೆಯ ಅತೃಪ್ತಿಯು ಬೆಳೆಯುತ್ತಿದೆ, ಪ್ರತಿಭಟನೆಯಾಗಿ ಮೂಡಿಬರುತ್ತಿದೆ. ಇದೇ ಸಂದರ್ಭದಲ್ಲಿ ಇಂತಹ ಸಂದರ್ಭವನ್ನು ಬಳಸಿಕೊಳ್ಳಲು ಬಿಜೆಪಿಯು ಹವಣಿಸುತ್ತಲೇ ಇದೆ. ಹಳ್ಳಿಗೆ ನಡೆಯಿರಿ ಎಂದೋ, ಕೃಷ್ಣಾ ದುರಾಡಳಿತ ವಿರೋಧಿಸಿ ಎಂದೋ ಬಿಜೆಪಿ ನಾಯಕ ಗಣ ಹಗಲು ರಾತ್ರಿ ಸುತ್ತಾಡಿ ಜನರ ಪ್ರತಿಕ್ರಿಯೆ ಅಷ್ಟಾಗಿ ಸಿಗದೇ ಸುಸ್ತಾಗಿ ಕುಳಿತು ದಣಿವಾರಿಸಿಕೊಂಡು ಮತ್ತೊಮ್ಮೆ ಹಳ್ಳಿಗೆ ಹೊರಡಲು ಅಣಿಯಾಗುತ್ತಿದ್ದಾರೆ. ಆರ್‌ಎಸ್‌ಎಸ್, ಭಜರಂಗದಳಗಳೆಂಬ ಸಂಘ ಗ್ಯಾಂಗ್ ಪಡೆಗಳು ಕೋಮು ಗಲಭೆಗಳನ್ನು ಹಲವು ಸುತ್ತಿನಲ್ಲಿ ನಡೆಸಿ ಪೂರ್ವೋಪಾದಿ ಸಿದ್ಧತೆಗೆ ಮುಂದಾಗಿವೆ. ಜನತಾದಳ ಬಣಗಳು ಒಂದಾಗುವ ಮಾತು ಬಿಟ್ಟಿಲ್ಲ. ಆದರೆ ಒಂದಾಗದೇ 'ಸ್ಪರ್ಧಾ ಪ್ರಪಂಚ' ಪ್ರವೇಶಿಸುತ್ತಿವೆ.

ಇಂತಹ ಸನ್ನಿವೇಶದಲ್ಲಿ ಜನರ ಮೂಲಭೂತ ಪ್ರಶ್ನೆಗಳು, ರಾಜ್ಯವನ್ನು ಕಾಡುವ ಭೀಕರ ಸಮಸ್ಯೆಗಳನ್ನು ಮರೆಮಾಚಲು ಬಲಪಂಥೀಯ ಶಕ್ತಿಗಳು ಹವಣಿಸುತ್ತಿವೆ. ಆದರೆ ಆ ಪ್ರಶ್ನೆಗಳನ್ನೆ ಕೃಷ್ಣಾ ಸರ್ಕಾರದ ವೈಫಲ್ಯಗಳನ್ನು ಜನರೆದುರು ತೆರೆದಿಟ್ಟ ಜನರನ್ನು ಜಾಗೃತಗೊಳಿಸಲು ದುಡಿಯುವ ವರ್ಗದ ರಾಜಕೀಯವನ್ನು ಕೊಂಡೊಯ್ಯಲು ಸಿಪಿಐ(ಎಂ) ರಾಜ್ಯ ಸಮಿತಿ 'ರಾಜಕೀಯ ಪ್ರಚಾರಾಂದೋಲನ' ಸಾರಿತು. ಕೃಷ್ಣ ಸರ್ಕಾರದ ವೈಫಲ್ಯಗಳನ್ನು ಪಟ್ಟಿ ಮಾಡಿ ಸಾರ್ವಜನಿಕ ಸಭೆಗಳಲ್ಲಿ ಬಿಡುಗಡೆ ಮಾಡಿತು. ಜಾಥಾ, ಬಹಿರಂಗ ಸಭೆ, ಲಕ್ಷಾಂತರ ಕರಪತ್ರಗಳು, ಸಾವಿರಾರು ಕಿರುಹೊತ್ತಿಗೆಗಳನ್ನು



ಜನರ ನಡುವೆ ಕೊಂಡೊಯ್ಯಲಾಯಿತು. ಈ ಆಂದೋಲನವು ಅತ್ಯಂತ ಯಶಸ್ವಿಯಾದ ಬಗ್ಗೆ ಪ್ರಾಥಮಿಕ ವರದಿಗಳು ಲಭ್ಯವಿದ್ದು ಸಂಕ್ಷಿಪ್ತವಾಗಿ ನೀಡಲಾಗಿದೆ. ಈ ಪ್ರಚಾರಾಂದೋಲನದಾದ್ಯಂತ ಜನತೆಯು ಅಪೂರ್ವವಾಗಿ ಸ್ಪಂದಿಸಿದೆ.

ಬೆಂಗಳೂರಿನಲ್ಲಿ ಸುಮಾರು 50 ಸಾವಿರ ಕರಪತ್ರ ಹಂಚಲಾಗಿದೆ. ಪೀಣ್ಯ-ದಾಸರಹಳ್ಳಿ, ಯಶವಂತಪುರ, ಕೆ.ಆರ್.ಪುರಂ, ವರ್ತೂರು,ಶ್ರೀರಾಮಪುರ, ನಗರ ಕೇಂದ್ರ, ಆನೇಕಲ್, ದೊಡ್ಡಬಳ್ಳಾಪುರದಂತಹ ಗ್ರಾಮೀಣ ಜಿಲ್ಲೆಯಲ್ಲಿಯೂ ಬಹಿರಂಗ ಸಭೆ, ಮನೆ ಮನೆಗೆ ಕರಪತ್ರ ವಿತರಣೆ ಪ್ರಚಾರ ನಡೆದಿದೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಮೂರು ದಿನಗಳ ಜೀಪ್ ಜಾಥಾ ನಡೆದಿದೆ. ಶಹಪುರ, ಯಾದಗಿರಿ, ಸುರಪುರ ತಾಲೂಕುಗಳಲ್ಲಿ ಬಹಿರಂಗ ಸಭೆ ಜರುಗಿದೆ. 25 ಸಾವಿರ ಕರಪತ್ರ ವಿತರಿಸಲಾಗಿದೆ. ಕಮಲಾಪುರ ಕ್ಷೇತ್ರ, ಸೇಡಂ, ಚಿತ್ತಾಪುರ, ಗುಲ್ಬರ್ಗಾ ಎರಡನೇ ಹಂತದ ಪ್ರಚಾರ ಯೋಜನೆ ರೂಪಿಸಲಾಗಿದೆ. ಬೀದರ್, ಹುಮ್ನಾಬಾದ್ ತಾಲೂಕುಗಳಲ್ಲಿ ಜೀಪ್ ಜಾಥಾದ ಮೂಲಕ ಪ್ರಚಾರಿಸಿ ಬಹಿರಂಗ ಸಭೆ ನಡೆಸಲಾಗಿದೆ. ಗುಲ್ಬರ್ಗಾದಲ್ಲಿ ವಿಶೇಷ ಸಭೆ ನಡೆಸಿ ಜನವರಿ 19 ರಂದು ಆರೋಪಪಟ್ಟಿ ಬಿಡುಗಡೆ ಮಾಡಲಾಗಿದೆ. ದ.ಕ. ಜಿಲ್ಲೆಯಲ್ಲಿ ಹತ್ತಾರು ಪ್ರಮುಖ ಕೇಂದ್ರಗಳಲ್ಲಿ ಬಹಿರಂಗಸಭೆಗಳು ನಡೆದಿವೆ.

ಬಳ್ಳಾರಿ ಜಿಲ್ಲೆಯಲ್ಲಿ ಜನವರಿ 18 ರಿಂದ 21 ರವರೆಗೆ ಜೀಪ್ ಜಾಥಾ ನಡೆದಿದೆ. ಬಹು ಪ್ರಮುಖ ಸ್ಥಳಗಳಲ್ಲಿ 32 ಕಡೆ ಬಹಿರಂಗ ಸಭೆ ಜರುಗಿವೆ. ಜಾಥಾದಲ್ಲಿ ಹಾಡಿನ ತಂಡವಿದ್ದು ಜನಮನ ಸೆಳೆಯಿತು. ಹಗರಿಬೊಮ್ಮನಹಳ್ಳಿ, ಹೊಸಪೇಟೆ, ತೆಕ್ಕಲಕೋಟೆ, ಶಿರಗುಪ್ಪ, ಕುರುಗೋಡು, ರಾರಾವಿ ತುಂಬಾ ಯಶಸ್ವಿಯಾದ ಸಭೆಗಳು. ಉತ್ತರ ಜಿಲ್ಲೆಯಲ್ಲಿಯೂ ಪ್ರಚಾರಕ್ಕೆ ಉತ್ತಮ ಪ್ರತಿಕ್ರಿಯೆ ಸಿಕ್ಕಿದೆ. ರಾಯಚೂರು, ಕೊಪ್ಪಳ ಜಿಲ್ಲೆಯಲ್ಲಿ 27 ರಿಂದ ಆರಂಭಗೊಂಡು ಎಲ್ಲಾ ತಾಲೂಕುಗಳು ಪ್ರಮುಖ ಕೇಂದ್ರಗಳಲ್ಲಿ ಸಭೆ ಜರುಗುತ್ತಿವೆ. ಕೊಡಗು ಎರಡು ದಿನಗಳ ಪ್ರಚಾರ, ಬಹಿರಂಗ ಸಭೆ ನಡೆದಿದೆ. ವಿರಾಜಪೇಟೆ, ಸಿದ್ದಾಪುರಗಳಲ್ಲಿ ಮನೆ ಮನೆಗೆ ಕರಪತ್ರ ನೀಡಿ, ಬೀದಿ ಬದಿ ಸಭೆಗಳನ್ನು ನಡೆಸಲಾಗಿದೆ. ಬಹಿರಂಗಸಭೆಗಳನ್ನು ಯೋಜಿಸಲಾಗಿದೆ. ಬೆಳಗಾಂನಲ್ಲಿ ಫೆ 8 ... ಆರಂಭಗೊಳ್ಳಲಿದೆ. ಮಂಡ್ಯಜಿಲ್ಲೆಯಲ್ಲಿ ಮಳ... ತಾಲೂಕಿನಾದ್ಯಂತ ಪ್ರಚಾರ, ಬಹಿರಂಗ... ಜರುಗಿವೆ. ಮೈಸೂರು ನಗರದಲ್ಲಿ ಪ್ರಚ... ನಡೆದಿದ್ದು. ಉಳಿದ ಕೆಲ ತಾಲೂಕುಗ... ಸಭೆಗಳನ್ನು ಯೋಜಿಸಲಾಗಿದೆ.

ದ.ಕನ್ನಡ ಜಿಲ್ಲೆಯಲ್ಲಿ ಜಿ.ಎನ್.ನಾಗರಾಜ... ಕೆ.ಆರ್.ಶ್ರೀಯಾನ್, ಉಡುಪಿ ಜಿಲ್ಲೆಯ... ನಾಗರಾಜ್, ಬೆಂಗಳೂರು - ಜಿ.ಸಿ.ಬಯ್ಯಾರೆ... .ಜಿ.ಎನ್.ನಾಗರಾಜ್, ಬಳ್ಳಾರಿ - ನಾಗರಾಜ... ಎಸ್.ವೈ.ಗುರುಶಾಂತ್, ಪ್ರಸನ್ನಕುಮಾ... ಗುಲ್ಬರ್ಗಾ-ಮಾರುತಿ ಮಾನ್ಪಡೆ, ಉ... ಕನ್ನಡ-ಧಾರವಾಡ ಜಿಲ್ಲೆಗಳಲ್ಲಿ ನಿತ್ಯಾನಂದ ಸ್ವಾ... ರಾಜ್ಯದರ್ಶಿ ಮಂಡಳಿಯಿಂದ ಪ್ರಚಾರಾಂದೋ... ದಲ್ಲಿ ಭಾಗವಹಿಸಿ ಮಾತನಾಡಿದ್ದಾರೆ.

ಈಗ ದೊರೆತಿರುವ ಪ್ರಾಥಮಿಕ ವರದಿಗಳ... ಪ್ರಚಾರಾಂದೋಲನಕ್ಕೆ ಜನತೆಯಿಂದ ಅತ್ಯುತ್ತ... ಪ್ರತಿಕ್ರಿಯೆ ದೊರೆತಿದೆ. ಕೇಂದ್ರದ ವೈಫ... ಮುಚ್ಚಿಕೊಳ್ಳಲು ಕೃಷ್ಣ ಸರ್ಕಾರದ ಮೇಲಿನ ಅ... ಬಳಸಲು ಬಿಜೆಪಿ ಹಳ್ಳಿಗೆ ನಡೆಯಿರಿ ಎನ್ನುವಂ... ಹಲವು ಸುತ್ತಿನಪ್ರಚಾರ ನಡೆಸಿದರೂ ಅ... ಅಷ್ಟಾಗಿ ಪ್ರಭಾವಿಸಿಲ್ಲ. ಮತ್ತು ಪಟ್ಟಣಗ... ಪತ್ರಿಕಾಗೋಷ್ಠಿ, ಪ್ರಚಾರಕ್ಕೂ ಸೀಮಿತಗೊಂಡಿ... ಇದೆ. ಆದರೆ ಸಿಪಿಐ(ಎಂ) ನ ಪ್ರಚಾರಾಂದೋ... ಒಳಗೊಂಡ ವಿಷಯಗಳೂ ಇತರರಿಗಿ... ಭಿನ್ನವಾಗಿ ನೇರವಾಗಿ ಜನಮನ ಹೊಕ್ಕ... ಇವುಗಳು ಹೊಸ ಮಾಹಿತಿಗಳ... ಕುತೂಹಲದಿಂದಲೂ ಸ್ವೀಕರಿಸಿದ್ದಾರೆ. ಇನ್... ಹೆಚ್ಚು ತಿಳಿಯಬಯಸಿದ್ದಾರೆ. ಇದು ಸತ್ಕಾಲಿಕವ... ರಾಜಕೀಯ ಮಧ್ಯ ಪ್ರವೇಶವಾಗಿದೆ. ವಿ... ಜಿಲ್ಲೆಗಳ ವಿವರ ವರದಿಗಳು ವಿಶಿಷ್ಟ ಅನುಭವಗ... ಬೆಳವಣಿಗೆಗಳನ್ನು ತೆರೆದಿಡಬಲ್ಲದು.

- ಎಸ್.ವೈ.ಗುರುಶಾಂ...

...ಯುದ್ಧ ಆಗಗೊಡುವುದಿಲ್ಲ

ಪುಟ 11 ರಿಂದ

ಅಮೇರಿಕದ ಹಲವು ನಗರಗಳಲ್ಲಿ ಒಂದೇ ಕಾಲದಲ್ಲಿ ಲಕ್ಷಾಂತರ ಜನ ಬೀದಿಗಿಳಿದು ಯುದ್ಧದ ವಿರುದ್ಧ ಪ್ರತಿಭಟಿಸಿದರು. 'ಈ ಯುದ್ಧವನ್ನು ಪ್ರಾಣ ಕೊಟ್ಟಾದರೂ ಆಗಗೊಡುವುದಿಲ್ಲ' ಎಂದು ಪಣ ತೊಟ್ಟರು. ವಾಶಿಂಗ್‌ಟನ್ ಯುದ್ಧ-ವಿರೋಧಿ ರ್‍ಯಾಲಿಯಲ್ಲಿ 5 ಲಕ್ಷಕ್ಕೂ ಹೆಚ್ಚು ಜನರು ಭಾಗವಹಿಸಿ ಅಮೇರಿಕದ ಸರ್ಕಾರದ 'ರಣಭೇರಿ'ಗೆ ಜನತೆಯ ಬೆಂಬಲ ಇಲ್ಲ. ಅಮೇರಿಕದ ಯುದ್ಧಕೋರ ನೀತಿಯನ್ನು ದೂಷಿಸುತ್ತಿರುವ ಜಗತ್ತಿನ ಜನತೆ ಮತ್ತು ಸರ್ಕಾರಗಳ ಜತೆ ನಾವು ಇದ್ದೇವೆ ಎಂದು ತೋರಿಸಿದರು. ಸಾನ್‌ಫ್ರಾನ್ಸಿಸ್ಕೋದಲ್ಲಿ ಎರಡು ಲಕ್ಷ ಜನರ ರ್‍ಯಾಲಿ ನಡೆಯಿತು. ಅದೇ ದಿನ ಜಪಾನ್, ಐರ್ಲೆಂಡ್, ಈಜಿಪ್ಟ್, ಸ್ಪೇನ್, ಅರ್ಜೆಂಟೀನಾ , ದಕ್ಷಿಣ ಆಫ್ರಿಕಾ, ರಷ್ಯಾ, ಜರ್ಮನಿ, ಬ್ರಿಟನ್ ಸೇರಿದಂತೆ 30 ದೇಶಗಳಲ್ಲಿ ಯುದ್ಧ-ವಿರೋಧಿ ರ್‍ಯಾಲಿ ನಡೆಯಿತು. ಈ ಒಂದು ದಿನದ ಅಂತರರಾಷ್ಟ್ರೀಯ ಪ್ರತಿಭಟನೆಯನ್ನು answer (Act Now to Stop War and End Racism) ಎಂಬ ಅಂತರಾಷ್ಟ್ರೀಯ ಒಕ್ಕೂಟ ಸಂಘಟಿಸಿತು. ಇದೊಂದು ಅಭೂತಪೂರ್ವ ಚಾರಿತ್ರಿಕ ಘಟನೆಯಾಗಿತ್ತು.

ಒಂದು ದಿನದ ಸಾಂಕೇತಿಕ ಕಾರ್ಯಾಚರಣೆಗೆ ಈ ಚಳುವಳಿ ಸೀಮಿತವಾಗಿಲ್ಲ. ಫೆಬ್ರುವರಿ 13-21 ರ ವಾರವನ್ನು ಯುದ್ಧ ವಿರೋಧಿ ಅಂತರಾಷ್ಟ್ರೀಯ ವಾರವಾಗಿ ಆಚರಿಸಲು answer ನಿರ್ಧರಿಸಿದೆ. ಫೆಬ್ರುವರಿ 15 ರಂದು ಯುರೋಪಿನಾದ್ಯಂತ ಯುದ್ಧ-ವಿರೋಧಿ ದಿನವನ್ನಾಗಿ ಆಚರಿಸಲಾಗುತ್ತಿದೆ. ಇತ್ತೀಚೆಗೆ ಮುಗಿದ ವಿಶ್ವ ಸಾಮಾಜಿಕ ಫೋರಂನಲ್ಲೂ ಸಹ ಯುದ್ಧವಿರೋಧಿ ಜಾಗತಿಕ ಅಲೆ ಸ್ಪಷ್ಟವಾಗಿ ವ್ಯಕ್ತವಾಯಿತು. ಯುದ್ಧ-ವಿರೋಧಿ ಚಳುವಳಿ ಸಾಂಕೇತಿಕ ಪ್ರತಿಭಟನೆಗೆ ಸೀಮಿತವಾಗದೆ. ನೇರ ಕಾರ್ಯಾಚರಣೆಗೆ ಇಳಿಯುವ ಸ್ಪಷ್ಟ ಲಕ್ಷಣಗಳಿವೆ. ಯುದ್ಧ ತಯಾರಿ ನೇರ ಅಡಚಣೆ ಒಡ್ಡುವ ಬಗ್ಗೆ ಚಳುವಳಿಯೊಳಗೆ ತಯಾರಿ ನಡೆಯುತ್ತಿದೆ. ಇತ್ತೀಚಿನ ರ್‍ಯಾಲಿಗಳಲ್ಲಿ ಹಲವು ವಿಯೆಟ್ನಾಂನ ಯುದ್ಧ ವಿರೋಧಿ ಚಳುವಳಿಯ ಅನುಭವ ಇರುವ ನಾಯಕರು, ಆಗ ಅನುಸರಿಸಿದ ಯುದ್ಧ-ಸಂಬಂಧಿ ಚಟುವಟಿಕೆಗಳನ್ನು ನೇರವಾಗಿ ತಡೆಯುವ, ನಾಗರೀಕ- ಅಸಹಕಾರದ ಚಳುವಳಿ ಕೈಗೆತ್ತಿಕೊಳ್ಳುವ ಬಗ್ಗೆ ಗಂಭೀರ ಸಲಹೆಗಳನ್ನು ಮುಂದಿಟ್ಟಿದ್ದಾರೆ.

ಫ್ರಾನ್ಸ್, ಜರ್ಮನಿ ವಿರೋಧ

ಈ ಜಾಗತಿಕ ಚಳುವಳಿಯ ಒತ್ತಡ ಎಲ್ಲೆಡೆ ಕಂಡು ಬರುತ್ತಿದೆ. ಫ್ರಾನ್ಸ್, ಜರ್ಮನಿ ಸರ್ಕಾರಗಳು ಬುಶ್ ಯುದ್ಧ ಯೋಜನೆಯನ್ನು ಸ್ಪಷ್ಟವಾಗಿ ವಿರೋಧಿಸಿವೆ. ಬ್ರಿಟನ್ ಬಿಟ್ಟರೆ ಯಾವುದೇ ದೇಶ ಅಮೇರಿಕದ ಜತೆ ಸಹಕಾರ ಕೊಡುವ ಲಕ್ಷಣಗಳಿಲ್ಲ. ರಷ್ಯಾ, ಚೀನಾ, ಫ್ರಾನ್ಸ್, (ಶಾಶ್ವತ 5 ಸದಸ್ಯರಲ್ಲಿ ಮೂವರು) ಭದ್ರತಾ ಸಮಿತಿಯಲ್ಲಿ ಅಮೇರಿಕದ ಯುದ್ಧ ಪ್ರಸ್ತಾಪ ಇಟ್ಟರೆ ಅದನ್ನು ವಿರೋಧಿಸುವುದಾಗಿ ಸ್ಪಷ್ಟವಾಗಿ ಹೇಳಿದೆ. ಫ್ರಾನ್ಸ್ ತನ್ನ ವಿಟೋ ಅಗತ್ಯ ಬಿದ್ದರೆ ಬಳಸುವುದಾಗಿ ಹೇಳಿದೆ. ಅಮೇರಿಕ ಮತ್ತು ಯುರೋಪಿಯನ್ ಸರ್ಕಾರಗಳ ಬಗ್ಗೆ ಮುನಿಸು ಎಷ್ಟು ತೀವ್ರವಾಗಿದೆ ಯೆಂದರೆ, ಅಮೇರಿಕದ ರಕ್ಷಣಾ ಸಚಿವ ಕೊಲಿನ್ ಪೊವೆಲ್ ಯುದ್ಧವನ್ನು ವಿರೋಧಿಸುವ ಚಳುವಳಿ 'ಹಳೆ ಯುರೋಪು' ಎಂದು ಹೇಳಿದರು. ಭದ್ರತಾ ಸಮಿತಿಯ ಬಹುಸಂಖ್ಯಾತರು ಯುದ್ಧವನ್ನು ವಿರೋಧಿಸುವುದಾಗಿ, ಪರೀಕ್ಷಣಾ ತಂಡಕ್ಕೆ ಹೆಚ್ಚು ಸಮಯ ನೀಡುವುದಾಗಿ ಹೇಳಿದ್ದಾರೆ. ಅರ... ದೇಶಗಳಲ್ಲೂ ವ್ಯಾಪಕ ವಿರೋಧ ಕಂಡುಬಂದಿ... ಭದ್ರತಾ ಸಮಿತಿ ಮುರಿದಿನ ಸಭೆ ... ನಿರ್ಣಾಯಕವಾಗಲಿದೆ. ಇಷ್ಟು ವ್ಯಾಪಕ ಭೀ... ಪ್ರತಿರೋಧ ಇದ್ದಾಗ್ಯೂ, ಬುಶ್ ಗ್ಯಾಂಗ್ ಭದ್ರ... ಸಮಿತಿಯ ಪಶ್ಚಿಮ ಯುರೋಪಿನ ಪ್ರಮು... ದೇಶಗಳನ್ನು ಆಮಿಷ ಬೆದರಿಕೆಗಳಿಂದ ರಣಭೇ... ಓಗೊಡುವಂತೆ ಮಾಡುವ ಅಪಾಯ ಇಲ್ಲದಿ... ಜನತಾ ಚಳುವಳಿಯ ಒತ್ತಡ ಇವರೆಲ್ಲರ ಮೇಲ... ಹಾಕಬೇಕು. ಯುದ್ಧಕ್ಕೆ ಅದು ಆರಂಭವಾಗು... ಮೊದಲೇ ಅದನ್ನು ನೇರವಾಗಿ ತಡೆಯುವ ... ಇಲ್ಲದಿದ್ದರೆ ಬುಶ್ ಗ್ಯಾಂಗ್‌ನ್ನು ತಡೆಯುವು... ಕಷ್ಟ.

ಜನವರಿ 30 ರಂದು ಬೆಂಗಳೂರಿನಲ್ಲಿ ವಿಮಾ ನೌಕರರು ಅಮೆರಿಕ ಯುದ್ಧ ನೀತಿ ವಿರೋಧಿಸಿ ಪ್ರತಿಭಟನೆ ನಡೆಸಿದ...



ಇರಾಕ್ ಯುದ್ಧಕ್ಕೆ ಬುಶ್ ಗ್ಯಾಂಗ್ ತರಾತುರಿ

ಇರಾಕ್ ಯುದ್ಧಕ್ಕೆ ಬುಶ್ ಗ್ಯಾಂಗ್ ತರಾತುರಿಯ ತಯಾರಿ ನಡೆಸಿದೆ. ಆದರೆ ಅದಕ್ಕೆ ಎಲ್ಲೆಡೆಯಿಂದಲೂ ಭೀಕರ ಪ್ರತಿರೋಧ ಕಂಡುಬಂದಿದೆ. ಅಮೇರಿಕದ ಜನತೆ, ಯುರೋಪಿನ ಜನತೆ ಮತ್ತು ಸರ್ಕಾರಗಳು, ವಿಶ್ವಸಂಸ್ಥೆ ಭದ್ರತಾ ಸಮಿತಿ, ನಾಟೋ ಸಹಚರರು, ಅಂತರಾಷ್ಟ್ರೀಯ ಸಾರ್ವಜನಿಕ ಅಭಿಪ್ರಾಯ, ಅರಬ್‌ನ ಮಿತ್ರ ದೇಶಗಳು- ಎಲ್ಲೆಡೆ ಇರಾಕ್ ಯುದ್ಧಕ್ಕೆ ಭೀಕರ ಪ್ರತಿರೋಧ ಕಂಡುಬಂದಿದೆ. ಬುಶ್ ಗ್ಯಾಂಗ್‌ನ ಹಾಸ್ಯಾಸ್ಪದ ರಣಭೇರಿಯ ಪ್ರಯತ್ನ, ಭೀಕರ ಪ್ರತಿರೋಧ, ಬಗ್ಗೆ ಇಲ್ಲಿದೆ ಒಂದು ಚಿತ್ರಣ.

ಇರಾಕ್ ಯುದ್ಧ ಆಗಗೊಡುವುದಿಲ್ಲ

ಶರತ್‌ಚಂದ್ರ

ಇರಾಕ್ ಮೇಲೆ ಯುದ್ಧ ಹೂಡಲು ಬುಶ್ ಗ್ಯಾಂಗ್ ತರಾತುರಿಯ ತಯಾರಿ ನಡೆಸಿದೆ. ಅಕ್ಟೋಬರ್‌ನಿಂದ 'ಈಗ ಆರಂಭವಾಗುತ್ತೆ' 'ಆಗ ಆರಂಭವಾಗುತ್ತೆ' - ಎಂಬ ಪ್ರಚಾರ ಈಗ ತಾರಕಕ್ಕೆ ಹೋಗಿದೆ. ಇರಾಕ್ ಸುತ್ತಮುತ್ತ ಭಾರೀ ಸೇನಾ ಜಮಾವಣೆ ನಡೆದಿದೆ. ಪ್ರತಿದಿನ ಸುದ್ದಿ ಮಾಧ್ಯಮಗಳಲ್ಲಿ ಜಮಾವಣೆ ಬಗ್ಗೆ ಸುದ್ದಿ ಬರುತ್ತಿದೆ. ಕೊಲ್ಲಿ ಪ್ರದೇಶದಲ್ಲಿರುವ ಅಮೇರಿಕಾದ ಸೇನಾ ನೆಲೆಗಳಲ್ಲಿ ಮತ್ತು ಯುದ್ಧ ಹಡಗುಗಳಲ್ಲಿ ಎರಡುವರೆ ಲಕ್ಷಕ್ಕೂ ಹೆಚ್ಚು ಸೈನಿಕರ ಮತ್ತು ಮಾರಕ ಶಸ್ತ್ರಾಸ್ತ್ರಗಳ ಜಮಾವಣೆ ನಡೆದಿದೆ. ಇತ್ತೀಚೆಗೆ ಇರಾಕಿ ಸರ್ಕಾರದ ನಿಯಂತ್ರಣದಲ್ಲಿ ಇಲ್ಲದಿರುವ ಉತ್ತರ ಇರಾಕ್‌ನ ಕುರ್ದಿಸ್ ಪ್ರದೇಶದಲ್ಲಿ ಸೈನ್ಯವನ್ನು ಆಗಲೇ ಇಳಿಸಲಾಗುತ್ತಿದೆ ಎಂದು ವರದಿಯಾಗಿದೆ. ಯುದ್ಧದ ರಣಭೇರಿಯ ಕರ್ಕಶ ಶಬ್ದ ಎಷ್ಟು ತಾರಕಕ್ಕೆ ಹೋಗಿದೆಯೆಂದರೆ, ಬಾಗ್ದಾದ್ ಇನ್ನೊಂದು ಹಿರೋಶಿಮಾ- ನಾಗಸಾಕಿ ಆಗಬಹುದು ಎಂಬ ಭೀತಿ ಹರಡಿದೆ. ಇರಾಕ್ ಮೇಲೆ ಸಾಮೂಹಿಕ ನರಮೇಧದ ಶಸ್ತ್ರಾಸ್ತ್ರಗಳನ್ನು ಸೇರಿ ಯಾವುದೇ ಶಸ್ತ್ರಾಸ್ತ್ರಗಳನ್ನು ಹೊಂದಿರುವ ಆರೋಪನೆ ಮಾಡುವ ಹುಶ್‌ಗ್ಯಾಂಗ್ ಅಣ್ವಸ್ತ್ರಗಳನ್ನು ಬಳಸಲು ಹಿಂಜರಿಯುವುದಿಲ್ಲ ಎಂದು ಹೇಳುತ್ತಾ ತಿರುಗುತ್ತಿದೆ.

ಬ್ಲಿಕ್ಸ್ ವರದಿ- 'ಅಡ್ಡಗೋಡೆ ಮೇಲೆ ದೀಪ'

ಕಳೆದ ವಾರದ ಎರಡು ನಿರೀಕ್ಷಿತ ಘಟನೆಗಳು ಯುದ್ಧದ ಭವಿಷ್ಯದ ಬಗ್ಗೆ ಸ್ಪಷ್ಟ ಸುದ್ದಿ ಕೊಡಬಹುದು ಎಂಬ ನಿರೀಕ್ಷೆ ಹುಸಿಯಾಗಿದೆ.

ಆ ಘಟನೆಗಳೆಂದರೆ ಇರಾಕ್‌ನಲ್ಲಿ ಶಸ್ತ್ರಾಸ್ತ್ರ ಪರೀಕ್ಷಣೆ ನಡೆಸುತ್ತಿರುವ ವಿಶ್ವಸಂಸ್ಥೆ ತಂಡದ ವರದಿ ಮತ್ತು ದೇಶವನ್ನುದ್ದೇಶಿಸಿ ಅಧ್ಯಕ್ಷ ಬುಶ್ ಭಾಷಣ. ವಿಶ್ವಸಂಸ್ಥೆ ಶಸ್ತ್ರಾಸ್ತ್ರ ತಂಡದ ಮುಖ್ಯಸ್ಥ ಹನ್ಸ್ ಬ್ಲಿಕ್ಸ್ ವರದಿ ಕೊಟ್ಟಿದ್ದು, ಯುದ್ಧ ಆರಂಭಿಸಲು ಬುಶ್ ಗ್ಯಾಂಗ್‌ಗೆ ನಿರ್ದಿಷ್ಟ ಕಾರಣಗಳು ಒದಗಿಲ್ಲ. ಆದರೆ **ಅಮೇರಿಕದ ಯುದ್ಧ** ಪ್ರಯತ್ನದ ಮೇಲೆ ತಣ್ಣೀರು ಎರಚಲಿಲ್ಲ. ಬ್ಲಿಕ್ಸ್ ವರದಿ ಅಡ್ಡಗೋಡೆಯ ಮೇಲೆ ದೀಪ ಇಟ್ಟಿದೆ. ಸಾಮೂಹಿಕ ನರಮೇಧದ ಶಸ್ತ್ರಾಸ್ತ್ರ(ಅಣು, ಜೈವಿಕ, ರಾಸಾಯನಿಕ)ಗಳನ್ನು ಇರಾಕ್ ಈಗ ಹೊಂದಿರುವ ಬಗ್ಗೆ ಬ್ಲಿಕ್ಸ್ ತಂಡಕ್ಕೆ ಏನೇನೂ ಪುರಾವೆ ಸಿಕ್ಕಿಲ್ಲ ಎಂಬುದರ ಬಗ್ಗೆ ಏನೇನೂ ಸಂಶಯ ಉಳಿದಿಲ್ಲ. ಏನೂ ಸಿಗದೇ ಬ್ಲಿಕ್ಸ್ ವರದಿ- ಪರೀಕ್ಷಣಾ ತಂಡದ ಜತೆ ಇರಾಕ್ ಸಹಕಾರ 'ನಿರೀಕ್ಷಿತ ಮಟ್ಟ'ದಲ್ಲಿ ಇಲ್ಲ ಎಂದು ಹೇಳಿ ಬುಶ್ ಗ್ಯಾಂಗ್‌ಗೆ 'ಮಾನ ಮುಚ್ಚಿಕೊಳ್ಳುವ' ಅವಕಾಶ ಕೊಟ್ಟಿದೆ. ಹಲವು ಸ್ಥಾವರಗಳಿಗೆ ಅನಿರೀಕ್ಷಿತ ಭೇಟಿ ಕೊಡುವ ಅವಕಾಶ, ರಕ್ಷಣಾ ವಲಯದ ವಿಜ್ಞಾನಿಗಳ ಜತೆ ಭೇಟಿ, ಅಧ್ಯಕ್ಷೀಯ ಬಂಗಲೆ (ಮುಂತಾದ ಹಿಂದೆ ಪರೀಕ್ಷಣಾ ತಂಡಕ್ಕೆ ನಿಷಿದ್ಧ ಪ್ರವೇಶ) ಪ್ರವೇಶಕ್ಕೆ ಅವಕಾಶ- ಮುಂತಾದವುಗಳನ್ನು ಇರಾಕ್ ಸರ್ಕಾರ ಒದಗಿಸಿರುವ ಹಿನ್ನೆಲೆಯಲ್ಲಿ ಬ್ಲಿಕ್ಸ್ ವರದಿಯ ಈ 'ಹೇಳಿಕೆ'ಯನ್ನು ಇರಾಕ್ ಖಂಡಿಸಿದೆ. ಬ್ಲಿಕ್ಸ್ ಈ ರೀತಿ ವರದಿಗೆ ಅಮೇರಿಕ ಈ ತಂಡದ ಮೇಲೆ ತರುತ್ತಿರುವ ಭಾರಿ ಒತ್ತಡವೇ ಕಾರಣವೆನ್ನಲಾಗಿದೆ. ಪರೀಕ್ಷಣಾ ತಂಡ ಇರಾಕ್‌ಗೆ ಹೋಗುವ ಮೊದಲು, ಮತ್ತು ಇತ್ತೀಚೆಗೆ ವರದಿ ಸಲ್ಲಿಸುವ ಮೊದಲು ಬ್ಲಿಕ್ಸ್ ಮತ್ತು ಕೆಲವು ತಂಡದ ಸದಸ್ಯರು ಅಮೇರಿಕನ್ ಸರ್ಕಾರದ ಹಲವು ಅಧಿಕಾರಿಗಳ ಜತೆ ಮಾತುಕತೆ ನಡೆಸಿದ್ದು, ಈ ವರದಿಯ ನಿಷ್ಪಕ್ಷಪಾತತೆ ಬಗ್ಗೆ ಸಂದೇಶ ಉಂಟುಮಾಡಿದೆ. ಬ್ಲಿಕ್ಸ್ ವರದಿಯನ್ನು ಯುದ್ಧ-ಪರ ವಿರೋಧಿ ಎರಡೂ ತಂಡಗಳು ತಮ್ಮ ನಿಲುವನ್ನು ಸಮರ್ಥಿಸಲು ಬಳಸುತ್ತಿರುವ ಹಾಸ್ಯಾಸ್ಪದ ಪರಿಸ್ಥಿತಿ ಉಂಟಾಗಿದೆ. ಇರಾಕ್ ಪರೀಕ್ಷಣಾ ತಂಡ'ದ ಜತೆ ಸಾಕಷ್ಟು ಸಹಕಾರ ಕೊಡದೆ ಇರುವುದರಿಂದ, ಶಾಂತಿಯುತವಾಗಿ ವಿಶ್ವಸಂಸ್ಥೆ ನಿರ್ಣಯದ ಪ್ರಕಾರ ಇರಾಕ್‌ನ್ನು ಮಾರಕ ಶಸ್ತ್ರಾಸ್ತ್ರ-ರಹಿತ ಮಾಡುವ ಸಾಧ್ಯತೆ ಉಳಿದಿಲ್ಲ. ಯುದ್ಧವೊಂದೇ ಮಾರ್ಗ ಎಂದು ಬುಶ್ ಗ್ಯಾಂಗ್ ಹೇಳುತ್ತದೆ. ಈ ಅಭಿಪ್ರಾಯವನ್ನು ಭದ್ರತಾ ಸಮಿತಿಯ ಸದಸ್ಯ ದೇಶಗಳು ವಿರೋಧಿಸಿವೆ. ಆಶ್ಚರ್ಯವೆಂದರೆ ಬ್ಲಿಕ್ಸ್ ಸ್ವತಃ ವರದಿ ಬಗ್ಗೆ ಅಮೇರಿಕದ ಈ ಅಭಿಪ್ರಾಯವನ್ನು ತಪ್ಪು ಎಂದು ಟೀಕಿಸಿದ್ದಾರೆ. ಪರೀಕ್ಷಣಾ ತಂಡಕ್ಕೆ ಕೇಳಿದಂತೆ ಇನ್ನಷ್ಟು ಸಮಯ ಕೊಡಬೇಕು. ಬ್ಲಿಕ್ಸ್ ತಂಡ ಯಾವ ವಿಷಯಗಳಲ್ಲಿ ಇರಾಕ್ ಸರ್ಕಾರದ ಸಹಕಾರ ಬಯಸುತ್ತದೆ ಎಂಬ ಬಗ್ಗೆ ಮಾತುಕತೆ ನಡೆಸಬಹುದು. ಶಾಂತಿಯುತವಾಗಿ ಇರಾಕ್ ವಿಶ್ವಸಂಸ್ಥೆಯ ನಿರ್ಣಯ ಜಾರಿ ಮಾಡುವ ಎಲ್ಲಾ ಸಾಧ್ಯತೆಗಳು ಇವೆ. ಈವರೆಗೆ ಇರಾಕ್ ಮಾರಕ ಅಸ್ತ್ರಗಳ ಬಗ್ಗೆ ಸಲ್ಲಿಸಿದ ನಮ್ಮ ವರದಿ ಏನನ್ನಾದರೂ ಮುಚ್ಚಿಟ್ಟಿದೆ ಅಥವಾ ಮಾರಕ ಅಸ್ತ್ರಗಳ ತಯಾರಿ ಬಗ್ಗೆ ಯಾವುದೇ ಸುಳಿವು ಪರೀಕ್ಷಣಾ ತಂಡಕ್ಕೆ ಸಿಕ್ಕಿಲ್ಲ. ಆದ್ದರಿಂದ ಯುದ್ಧಕ್ಕೆ ಕಾರಣವಲ್ಲ ಎಂಬುದು ಭದ್ರತಾ ಸಮಿತಿಯು ಹೆಚ್ಚಿನ (ಶಾಶ್ವತ 5 ,ಸದಸ್ಯರಲ್ಲಿ ಅಮೇರಿಕ ಬಿಟ್ಟರೆ ಇತರ 4 ದೇಶಗಳ) ಸದಸ್ಯ ದೇಶಗಳ ಅಭಿಪ್ರಾಯ.

ಬ್ಲಿಕ್ಸ್ ವರದಿ ಅಥವಾ ವಿಶ್ವಸಂಸ್ಥೆಗೆ ಇರಾಕ್ ಸಲ್ಲಿಸಿದ ಸಮಗ್ರ ವರದಿ-ಎರಡೂ ಬುಶ್‌ಗೆ ಯುದ್ಧ ಸಾರಲು ಯಾವುದೇ ನೆಪ ಕೊಟ್ಟಿಲ್ಲ. ಆದ್ದರಿಂದ ಬುಶ್ ಈತನಕ 'ದೇಶವನ್ನುದ್ದೇಶಿಸಿದ ಭಾಷಣ' ಇರಾಕ್ ಮೇಲೆ ಯುದ್ಧದ ಘೋಷಣೆ ಆಗುವ ಅಪಾಯ ತಪ್ಪಿದೆ. ಆದರೂ ಬುಶ್ ಯುದ್ಧದ 'ಆಸೆ' ಇನ್ನೂ ಬಿಟ್ಟುಕೊಟ್ಟಿಲ್ಲ. ಬುಶ್ ತಮ್ಮ ಭಾಷಣದಲ್ಲಿ ಇರಾಕ್ ಅಲ್-ಖಾಯಿದಾ ಜತೆ ಶಾಮೀಲಾದ ಬಗ್ಗೆ (ಈಗಾಗಲೇ ಹಲವು ಬಾರಿ ಹೇಳಲಾದ ಆದರೆ ಯಾವುದೇ ಪುರಾವೆ ಇಲ್ಲದ) ಇರಾಕ್ ಮಾರಕ ಅಸ್ತ್ರಗಳನ್ನು ಬಚ್ಚಿಟ್ಟಿರುವ ಬಗ್ಗೆ ಗೂಢಚಾರ ವರಧಿ ಬಗ್ಗೆ ಹೇಳಿ, ವಿಶ್ವಸಂಸ್ಥೆಗೆ ಈ ಬಗ್ಗೆ ಮನದಟ್ಟು ಮಾಡಿಸುವುದಾಗಿ ಹೇಳಿದ್ದಾರೆ. ಯುದ್ಧ ಒಂದೇ ದಾರಿ ಎಂದು ಹೇಳಲು ಮರೆಯಲಿಲ್ಲ.



ವಾಶಿಂಗ್‌ಟನ್‌ನಲ್ಲಿ 5 ಲಕ್ಷ ಜನರ ಚಾರಿತ್ರಿಕ ಯುದ್ಧ ವಿರೋಧಿ ರ್‍ಯಾಲಿ

ಆದರೂ ಇತ್ತೀಚೆಗೆ ಜಗತ್ತಿನಾದ್ಯಂತ ಬುಶ್ ಗ್ಯಾಂಗ್‌ನ ಯುದ್ಧ ಕೂಗಿಗೆ ಕಂಡ ಭೀಕರ ಪ್ರತಿರೋಧ ಈ ಮೇಲಿನ ಘಟನೆಗಳು ಯುದ್ಧದ ಆರಂಭ ಘೋಷಣೆಯ ಸಂದರ್ಭಗಳಾಗಿ ಪರಿವರ್ತನೆ ಆಗುವುದನ್ನು ತಡೆಹಿಡಿದಿದೆ. ಬುಶ್ ಗ್ಯಾಂಗ್ ಎಂದೂ ಇಷ್ಟು ಏಕಾಂಗಿಯಾಗಿರಲಿಲ್ಲ. ಬ್ರಿಟನ್ ಪ್ರಧಾನಿ ಬ್ಲೇರ್ ಸರ್ಕಾರ ಅಮೇರಿಕದ ರಿಪಬ್ಲಿಕನ್ ಪಕ್ಷ, ಅಮೇರಿಕದ ಸೆನೆಟ್ ಬಿಟ್ಟರೆ ಎಲ್ಲಿಂದಲೂ ಬುಶ್‌ಗೆ ಯುದ್ಧದ ವಿಷಯದಲ್ಲಿ ರಾಜಕೀಯ ಬೆಂಬಲ ಇಲ್ಲ. ಬದಲಾಗಿ ಏಕಪಕ್ಷೀಯವಾಗಿ 'ತೈಲ ಹಿತಾಸಕ್ತಿ' ಗಳನ್ನು ಕಾಪಾಡಲು ಹೂಡಲು ಹವಣಿಸುತ್ತಿರುವ ಯುದ್ಧ ಎಂದು ದೂಷಿಸಲಾಗುತ್ತಿದೆ. ಈ ಸೀಮಿತ ಬೆಂಬಲದಲ್ಲೂ ಇತರೆಡೆಗಿನ ಭೀಕರ ಪ್ರತಿರೋಧದಿಂದ ಒಡಕು ಕಾಣಲಾರಂಭಿಸಿದೆ. ಬ್ರಿಟನ್ ಸಚಿವ ಸಂಪುಟದಲ್ಲೂ, ಆಳುವ ಲೇಬರ್ ಪಾರ್ಟಿಯಲ್ಲೂ ಯುದ್ಧ ತೀವ್ರ ವಿರೋಧ ಕಂಡು ಬಂದಿದೆ. 100 ಜನ ಲೇಬರ್ ಪಾರ್ಟಿ, ಪಾರ್ಲಿಮೆಂಟ್ ಸದಸ್ಯರು, ಹಲವು ಕ್ಯಾಬಿನೆಟ್ ಸದಸ್ಯರು ಯುದ್ಧ ಆರಂಭವಾದರೇ ಬಂಡೇಳುವ ಬೆದರಿಕೆ ಹಾಕಿದ್ದಾರೆ. ಸೆನೆಟ್‌ನಲ್ಲಿ ಯುದ್ಧಕ್ಕೆ ಅಂಗೀಕಾರ ಕೊಟ್ಟರೂ ಹಲವು ಡೆಮೊಕ್ರಾಟಿಕ್ ಸದಸ್ಯರು ಯುದ್ಧ-ವಿರೋಧಿ ಹೇಳಿಕೆಗಳನ್ನು ಕೊಡಲಾರಂಭಿಸಿದ್ದಾರೆ.

ಅತ್ಯಂತ ಪ್ರಭಲ ಪ್ರತಿರೋಧ ಬಂದಿರುವುದು ಅಮೇರಿಕಾದ ಜನತೆಯಿಂದ. ಜನವರಿ 18.ರಂದು

ಪುಟ 10 ಕ್ಕೆ

ಯುದ್ಧ ವಿರೋಧಿ ಚಳುವಳಿಯ ಚಾರಿತ್ರಿಕ ಮಹತ್ವ

ಜನವರಿ 18 ರಿಂದ ವಾಶಿಂಗ್‌ಟನ್‌ನಲ್ಲಿ ನಡೆದ ಯುದ್ಧ-ವಿರೋಧಿ ರ್‍ಯಾಲಿ, ಎಪ್ರಿಲ್ 1971ರಲ್ಲಿ ವಿಯೆಟ್ನಾಮ್ ಯುದ್ಧದ ವಿರುದ್ಧ ನಡೆದ ರ್‍ಯಾಲಿಗಿಂತ ದೊಡ್ಡದಾಗಿತ್ತು. ಆ ರೀತಿಯಲ್ಲಿ ಚಾರಿತ್ರಿಕವಾಗಿತ್ತು. ಹಲವು ರೀತಿಯಲ್ಲಿ ಈ ಚಳುವಳಿ ಮಹಾನ್ ವಿಯೆಟ್ನಾಮ್ ಯುದ್ಧ-ವಿರೋಧಿ ಚಳುವಳಿಗಿಂತಲೂ ಪ್ರಭಲವಾಗಿದೆ. ಆಗಿನ ಯುದ್ಧ- ವಿರೋಧಿ ಚಳುವಳಿ ಹಲವು ವರ್ಷಗಳ ಯುದ್ಧದ ನಂತರ ಬಂದಿತ್ತು. ಈಗಿನ ಪ್ರತಿಭಟನೆ ಯುದ್ಧ ಆಗಗೊಡದಂತೆ ಪಣ ತೊಟ್ಟಿದೆ. ಆಗಿನ ಪ್ರತಿಭಟನೆ ವಿದ್ಯಾರ್ಥಿಗಳ ಮೇಲೆ ಹೆಚ್ಚು ಆಧಾರಿತವಾಗಿತ್ತು. ವಿದ್ಯಾರ್ಥಿಗಳನ್ನು ಕಡ್ಡಾಯವವಾಗಿ ಯುದ್ಧದಲ್ಲಿ ಭಾಗವಹಿಸುವ ವಿಷಯದ ಮೇಲೆ ಇತ್ತು. ಆದರೆ ಇಂದಿನ ಯುದ್ಧ-ವಿರೋಧಿ ಚಳುವಳಿಗೆ ವಿಶಾಲ ತಳಹದಿ ಇದೆ. ಕಾರ್ಮಿಕ ವರ್ಗ, ಇತರ ಜನವಿಭಾಗಗಳು ಗಮನಾರ್ಹ ರೀತಿಯಲ್ಲಿ ಭಾಗವಹಿಸುತ್ತಿವೆ. ಯುದ್ಧ-ವಿರೋಧ ಚಳುವಳಿ 60 ರ ದಶಕದಲ್ಲಿ ಏಕ-ವಿಷಯ ಚಳುವಳಿಯಾಗಿತ್ತು. ಆದರೆ ಇಂದು ಅದು ಶಾಂತಿ ಮತ್ತು ಸಾಮಾಜಿಕ ನ್ಯಾಯದ ಚಳುವಳಿಯಾಗಿದೆ. ಇಂದಿನ ಚಳುವಳಿ ತೋರಿಸಿರುವ ಅಂತರಾಷ್ಟ್ರೀಯ ಸಂಯೋಜನೆ ಅದ್ಭುತವಾದದ್ದು. ಜಗತ್ತನ್ನು ಇನ್ನಷ್ಟು ಘನಿಷ್ಟವಾಗಿ ಹತ್ತಿರ ತಂದಿರುವ ಇಂಟರ್‌ನೆಟ್ ಮುಂತಾದ ಮಾಧ್ಯಮಗಳನ್ನು ಬಳಸಿ ಈ ಚಳುವಳಿ ನಿಜವಾಗಲು ಅಂತರಾಷ್ಟ್ರೀಯ ವ್ಯಾಪಕತೆ ಹೊಂದಿದೆ.

ಪುಸ್ತಕ ಪರಿಚಯ

ನೈಜ ಬದುಕಿನ ಸ್ಪರ್ಶಗೀತೆ ಯಶವಂತನ ಯಶೋಗೀತ

ಇವತ್ತು ನಮ್ಮ ಮಕ್ಕಳ ದಿನಚರಿ ಆರಂಭಗೊಳ್ಳುವುದೇ ಭ್ರಮಲೋಕದ ಕಲ್ಪನಾ ಚಿತ್ರಣಗಳೊಂದಿಗೆ. ಜೀವನವೆಂದರೆ ಅದೊಂದು ಕೇವಲ ಕನಸಿನ ಲೋಕ ಮಾತ್ರವೇ, ಅಲ್ಲಿ ವಾಸ್ತವಿಕ ಬದುಕಿಗೆ ಯಾವೊಂದು ಸ್ಥಾನವಿಲ್ಲದಂತಾಗಿದೆ. ಮಕ್ಕಳ ಮೇಲೆ ಬುದ್ಧಿಪೂರ್ವಕವಾಗಿ ಹೇರುತ್ತಿರುವ ಕಥೆ- ಕಾದಂಬರಿಗಳಲ್ಲಿ ಪ್ರಕೃತಿಯೊಂದಿಗೆ ಬೆಸದಿರುವ ನಮ್ಮ ಬದುಕು, ಆ ಬದುಕಿನ ಕಷ್ಟ-ಸುಖಗಳು ದುಗುಡದುಮ್ಮಾನಗಳು, ಮೋಸ, ಕಪಟತನಗಳನ್ನು ನಾವು ಕಾಣುವುದೇ ಕಡಿಮೆ. ಇಂತಹ ಸ್ಥಿತಿಯಲ್ಲಿ ಭ್ರಮಾಲೋಕದ ಕನಸಿನಿಂದ ನೈಜ ಬದುಕಿನ ಸ್ಪರ್ಶವನ್ನು ಮೂಡಿಸುವಲ್ಲಿ ಇತ್ತೀಚೆಗೆ ನವಕರ್ನಾಟಕ ಪ್ರಕಾಶನದ ಖ್ಯಾತ ಲೇಖಕ ಡಾ.ಆರ್.ವಿ.ಭಂಡಾರಿಯವರು ರಚಿಸಿರುವ ಮಕ್ಕಳ ಕಾದಂಬರಿ 'ಯಶವಂತನ ಯಶೋಗೀತ' ಚಿಂತನಶೀಲ ಕೃತಿಯಾಗಿದೆ.



ಅತ್ಯಂತ ಸರಳವಾಗಿ, ಆಳವಾಗಿ ವಾಸ್ತವಿಕತೆಯ, ಪ್ರಕೃತಿಯ ಜನಜೀವನವನ್ನು ಚಿತ್ರಿಸುತ್ತ, ನಿಜಜೀವನದಲ್ಲಿ ಎದುರಾಗುವ ಏರುಪೇರು, ಸಿಹಿ-ಕಹಿ ಅನುಭವಗಳನ್ನು ಸ್ಪರ್ಶಿಸುತ್ತ ಹಲವಾರು ಅದ್ಯಾಯಗಳು ಓದುಗರನ್ನು ಗಂಭೀರ ಚಿಂತನೆಯತ್ತ ಕೊಂಡೊಯ್ಯಲಿವೆ. ಆ ಮೂಲಕ, ಸಮಾಜ, ಕುಟುಂಬದೊಳಗೆ ಸಂಭವಿಸುವ ಘಟನೆಗಳು, ಬದುಕಿನ ಅನಿವಾರ್ಯತೆಯಲ್ಲಿ ಬರುವ ಕಷ್ಟ ನಷ್ಟಗಳನ್ನು ವಿವರಿಸುತ್ತಾ ನಡೆದಿದೆ.

ಕೆ.ಮಹಾಂತೇಶ್

ಕಾದಂಬರಿಯುಲ್ಲಿ ಬರುವ ಯಶವಂತ ಜೋಶಿ, ಸನ್ಯಾಸಿ ಸಹವಾಸದ ಸಿದ್ದಪ್ಪ, ಹೋಟೇಲ್ ಮಾಣಿ ಗರುಡ, ಪೇಪರ್‌ವಾಲಾ ಮತ್ತು ಉಪಸಂಪಾದಕ ಸುಕುಮಾರಸ್ವಾಮಿ, ಚಾರ್ವಕ ಹಾಗೂ ಹಸನ್ ಪಾತ್ರಗಳು ನಮ್ಮೊಳಗಿನ ಒಬ್ಬರಾಗಿ ಕಣ್ಮುಂದೆ ನಿಲ್ಲುತ್ತಾರೆ. ಮಾತ್ರವಲ್ಲ ಇಂತಹದೇ ಸ್ಥಿತಿಯಲ್ಲಿ ಬದುಕಲು ಕಾತರಿಸುವ, ನೂರಾರು, ಸಾವಿರಾರು ಯುವಜನರ ಪ್ರತಿನಿಧಿಗಳಾಗಿ ನಮ್ಮೆದುರಿಗೆ ಬರುತ್ತಾರೆ. ಉತ್ತರಕನ್ನಡ ಜಿಲ್ಲೆಯ ಆಡುಗ್ರಾಮ್ಯಭಾಷೆ ಕಾದಂಬರಿಯ ಸರಾಗ ಓದಿಗೆ ಆಗಾಗ ಅಡ್ಡಿಯಾಗುತ್ತಿದೆಯೇ? ಎಂಬಂತೆ ಬಾಸವಾದರೂ ಅದೇ ಭಾಷೆ ಗಂಭೀರ ಹಿಡಿತಕ್ಕೂ, ಓದಿಗೂ ಗ್ರಾಸವಾಗಿದೆ.

ಮಕ್ಕಳನ್ನು ಗಮನದಲ್ಲಿಟ್ಟುಕೊಂಡೇ ರಚಿಸಲಾಗಿರುವ ಈ ಕಾದಂಬರಿಯಲ್ಲಿ ಒಟ್ಟು 8 ಭಾಗಗಳಿವೆ. ಗಡಿಯಾರ ಕದ್ದವರು ಯಾರು?, ದೆವ್ವದ ಜೊತೆ ಮಾತುಕತೆ ಮತ್ತು ಬಣ್ಣದ ವೇಷದಲ್ಲಿ ಜೋಡಿ ಅಧ್ಯಾಯಗಳಲ್ಲಿ ಯಶವಂತನ ಪಾತ್ರದೊಂದಿಗೆ ಪ್ರವೇಶಿಸುವ ಕಾದಂಬರಿ ನಾಯಕನ ಬಾಲ್ಯದ ಬದುಕನ್ನು ಸೊಗಸಾಗಿ ಚಿತ್ರಿಸಲಾಗಿದೆ. ಅದೊಂದು ಪ್ರಕೃತಿಯ ನೈಜತೆಯೊಂದಿಗೆ ನಮ್ಮ ಸುತ್ತಲಿನ ಮಕ್ಕಳ ಸಹಜ ಗುಣಗಳಾದ ಸೂಕ್ಷ್ಮತೆ, ಗಹನವಾದ ಆಸಕ್ತಿ, ನೋವಿನಲ್ಲಿ ಸಂತೋಷ ಪಡುವ ಮುಗ್ಧತೆ ಪ್ರಕೃತಿಯೊಂದಿಗಿನ ಸ್ಪಂದನೆ. ಮುಂತಾದ ಆಸಕ್ತಿದಾಯಕ ಅಂಶಗಳನ್ನು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಇವತ್ತಿಗೂ ಚಾಲ್ತಿಯಲ್ಲಿರುವ 'ಒಗಟು'ಗಳ ಅನುಭವಗಳು ಓದುಗರನ್ನು ಮುದಗೊಳಿಸುತ್ತದೆ. ಅನಂತರದ ಅಧ್ಯಾಯಗಳಲ್ಲಿ ಇದೇ ಯಶವಂತ, ಸಿದ್ದಪ್ಪನಾಗಿ, ಹೊಟೆಲ್ ಮಾಣಿ ಗರುಡನಾಗಿ, ಬಾಲಕನಾಗಿ ನಂತರ ಪೇಪರ್‌ವಾಲ, ಸುಕುಮಾರ ಸ್ವಾಮಿಯಾಗಿ ಸಾಗುವ ಯಶವಂತನ ಪಾತ್ರ ಕೊನೆಯಲ್ಲಿ ಒಂದು ಪ್ರತಿಷ್ಠಿತ ದಿನಪತ್ರಿಕೆಯಲ್ಲಿ ಉಪಸಂಪಾದಕ ಸ್ಥಾನ ಪಡೆಯುವಲ್ಲಿ ಯಶಸ್ವಿಯೊಂದಿಗೆ ಕಾದಂಬರಿ ಅಂತ್ಯಗೊಳ್ಳುತ್ತದೆ. ಬಹುತೇಕ ಈ ಎಲ್ಲಾ ಪಾತ್ರಗಳಲ್ಲಿ ಬಾಲ್ಯದಿಂದ, ಯುವಕನಾಗುವ ಹಂತದಲ್ಲಿ ಏನೆಲ್ಲಾ ಜಟಿಲ ಹಂತಗಳನ್ನು ಜೀವನಕ್ಕಾಗಿ ನಡೆಸಬೇಕಾಗುತ್ತದೆ. ಇಂತಹ ಎಲ್ಲಾ ಅನಿವಾರ್ಯತೆಗಳು ಬದುಕಬೇಕೆಂಬ ಅನಿವಾರ್ಯತೆಯಲ್ಲಿ ಸಿಕ್ಕಿ ಹಾಕಿಕೊಂಡಿರುವ ಯುವಜನರ ಎದುರು ನಿಲ್ಲುತ್ತದೆ ಎಂಬುದನ್ನು ಕಾದಂಬರಿ ಹಲವು ಪಾತ್ರಗಳ ಮೂಲಕ ಹೇಳುತ್ತದೆ.

ಆದರೆ ಈ ಕಾದಂಬರಿ ವಿಶೇಷವೆಂದರೆ ಇಡೀ ಕಾದಂಬರಿ ಓದಿದಾಗ ಮಾತ್ರವೇ ಇದು 'ಯಶವಂತನ ಯಶೋಗೀತೆ ಎಂದೆನಿಸುತ್ತದೆ. ಯಾಕೆಂದರೆ ಮೊದಲ ಎರಡೂವರೆ ಅಧ್ಯಾಯದಲ್ಲಿ ಯಶವಂತನ ಪಾತ್ರ ಮಾಯವಾಗಿ ಜೋಶಿ, ನಂತರದಲ್ಲಿ ಸಿದ್ದಪ್ಪ, ನಂತರ ಗರುಡ ಹೀಗೆ ಪಾತ್ರಗಳು ಪ್ರವೇಶಿಸುವುದರಿಂದ ಒಂದು ಕ್ಷಣ ಇದೊಂದು ಕಾದಂಬರಿಯೇ ಅಥವಾ ಕಥಾ ಸಂಕಲನವೇ? ಎಂಬ ಅನುಭವ ಕಾಡಲು ಆರಂಭವಾಗುತ್ತದೆ. ಬಹುಶಃ ಮಕ್ಕಳ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿತವಾಗಿರುವ ಕೃತಿಯಾಗಿರುವುದರಿಂದ ಹೀಗಾಗಿರಬಹುದೇ ಎಂದು ಊಹಿಸಿದರೂ ಕೊನೆಗೂ ವಿಭಿನ್ನ ಪಾತ್ರಗಳಲ್ಲಿ ಯಶವಂತನನ್ನು ಪರಿಚಯಿಸಿದ್ದು ಯಾಕೆ? ಎಂಬ ಪ್ರಶ್ನೆ ಕಾಡುತ್ತದೆ.

ಸರಳವಾದಂತಹ ವಿವರಣೆಯೊಂದಿಗೆ ಸಾಗುವ ಪ್ರತಿಯೊಂದು ಅದ್ಯಾಯಗಳು ಆಸಕ್ತಿದಾಯಕವಾಗಿ ನಮ್ಮನ್ನು ವಾಸ್ತವಿಕ ಜಗತ್ತಿನ ಚಿಂತನೆಯತ್ತ ಕರೆದೊಯ್ಯುವುದರಿಂದ ಕಾದಂಬರಿ ಹಿಡಿದು ಕುಳಿತರೆ ಓದಿಯೇ ಮುಗಿಸಬೇಕು ಎನ್ನಿಸುವುದಂತೂ ಸತ್ಯ. ಇನ್ನೇನು ಪರೀಕ್ಷೆಗಳು ಸಮೀಪಿಸುತ್ತಿವೆ ನಂತರ ರಜಾದಿನಗಳು ಹತ್ತಿರವಾಗುತ್ತಿವೆ. ಮಕ್ಕಳ ಬೌದ್ಧಿಕ ಮಟ್ಟ ಹೆಚ್ಚಿಸುವ, ಅವರನ್ನು ಚಿಂತನೆಗೆ ಪ್ರೇರೇಪಿಸುವ ಮತ್ತು ಅವರ ಮನೋವಿಕಾಸಕ್ಕೆ ಅವಶ್ಯಕವಿರುವ ಪುಸ್ತಕಗಳ ಅಭಾವವು ಅವರನ್ನು 'ದೂರದರ್ಶನ' ಎಂಬ ಭ್ರಮಾಲೋಕದ ಮುಂದೆ ಅನಿವಾರ್ಯವಾಗಿ ಕುಳಿಸಿದೆ. 'ಯಶವಂತನ ಯಶೋಗೀತೆ'ಯಂತಹ ಆಸಕ್ತಿದಾಯಕ ಕೃತಿಗ[...] ಮಾತ್ರವೇ ಈಗ ಮಕ್ಕಳ ಮುಂದಿರುವ ಭ[...] ಕಂದಕ'ವನ್ನು ತುಂಬಲು ಸಾಧ್ಯ. ಈ ದಿಶೆಯ[...] ಎಲ್ಲಾ ಪೋಷಕರು ಇಂತಹ ಕೃತಿಯನ್ನು ಓದಿಸ[...] ಮಕ್ಕಳನ್ನು ಪ್ರೇರೇಪಿಸಬೇಕು.

ಯಶವಂತನ ಯಶೋಗೀ[...]
ಲೇಖಕರು : ಆರ್.ವಿ.ಭಂಡಾರಿ
ಬೆಲೆ ರೂ. 50
ಪ್ರಕಾಶಕರ
ನವ ಕರ್ನಾಟಕ ಪ್ರಕಾಶ
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ,
ಬೆಂಗಳೂರು 560 001

ತುಂಬಾ ಹಿಡಿಸಿದ ಯಶೋಗೀತ - ಆದರೆ ಅರ್ಥವಾಗದ ಕೆಲವಂಶಗಳು

ಆರ್.ವಿ ಭಂಡಾರಿ ಅವರು ಬರೆದ ಯಶವಂತನ ಯಶೋಗೀತಗಳು ಪುಸ್ತಕ ತುಂಬಾ ಮೆಚ್ಚುಗೆಯಾಯಿತು. ಇದರಲ್ಲಿ ನನಗೆ ಗಡಿಯಾರ ಕದ್ದವರು ಯಾರು? ದೆವ್ವದ ಜೊತೆ ಮಾತುಕಥೆ, ಬಣ್ಣದ ವೇಷದಲ್ಲಿದ್ದ ಜಾನಿ ಈ ಕಥೆಗಳು ತುಂಬಾ ಹಿಡಿಸಿದೆ. ಗಡಿಯಾರ ಕದ್ದವರು ಯಾರು? ಇದರಲ್ಲಿ ಜೇಡರ ಬಲೆಯ ಬಗ್ಗೆ ವರ್ಣನೆ ನನಗೆ ತುಂಬಾ ಹಿಡಿಸಿತು. ಆದರೆ ಕೊನೆಗೂ ಯಶವಂತ ನಿರಪರಾಧಿ ಎಂದು ಯಾರಿಗೂ ತಿಳಿಯಿಯದೇ ಹೋಯಿತಲ್ಲ ಎಂದು ಬೇಸರವಾಯಿತು.

ಇದರಲ್ಲಿ ದೆವ್ವದ ಜೊತೆ ಮಾತುಕತೆ ಅಂತೂ ನನಗೆ ಅಚ್ಚುಮೆಚ್ಚಿನ ಕಥೆ ಆಗಿದೆ ಇದರಲ್ಲಿ ಒಗಟಿನ ಹುಡುಗಿ ಪಾರ್ವತಿ ಬಗ್ಗೆ ತುಂಬಾ ಚೆನ್ನಾಗಿದೆ. ಅವಳು ಯಶವಂತನಿಂದ ಕೇಳುವ ಒಗಟುಗಳು ಎಂದು ಮರೆಯಲಾಗದಂತವು. ಆ ಒಗಟುಗಳಲ್ಲಿ ನನಗಿಷ್ಟವಾದ ಒಗಟುಗಳೆಂದರೆ:

ಮರದೊಳಗೆ ಮರ ಹುಟ್ಟಿ ಮರಕೆರಡು ಕಾಯಾಗಿ ಯಾರೂ ತಿನ್ನದ ಹಣ್ಣು ಬಲುರುಚಿ ತಂಗಿ ಮನೆಗೆ ಅಕ್ಕ ಬರಲ್ಲ ಅಕ್ಕನ ಮನೆಗೆ ತಂಗಿ ಹೋಗಲ್ಲ, ಅಕ್ಕನ ಮನೆಗೆ ತಂಗಿ ಬರ್ತಾಳೆ ತಂಗಿ ಮನೆಗೆ ಅಕ್ಕ ಬರಲ್ಲ. ಈ ಕಥೆಯಲ್ಲಿ ಯಶವಂತ ಪಟ್ಟ ಕಷ್ಟಗಳೆಷ್ಟು?

ಇನ್ನೊಂದು ಕಥೆ ಎಂದರೆ ಬಣ್ಣದ ವೇಷದಲ್ಲಿದ್ದ ಜಾನಿ ಈ ಕಥೆ ನನಗೆ ಹಿಡಿಸ[...] ಕಾರಣ ಇಲ್ಲಿನ ಘಟನೆಗಳು, ಇಲ್ಲಿ ಬರು[...] ಕಥೆಗಳು, ಭಟ್ಟರು, ಯಕ್ಷಗಾನದವರು, ಜೋ[...] ಯಕ್ಷಗಾನದ ಬಗ್ಗೆ ಬಂದ ಆಸಕ್ತಿ ಇವೆ[...] ಮೋಜನ್ನುಂಟು ಮಾಡುತ್ತವೆ.

ಆದರೆ ನನಗೆ ಯಶವಂತ ಸನ್ಯಾಸಿ ಆದು[...] ಅಷ್ಟೊಂದು ಖುಷಿ ಆಗಲಿಲ್ಲ. ಆದರೆ [...] ಓದುತ್ತಾ ಹೋದಂತೆ ಅರ್ಥವಾಯಿತು. ಅ[...] ಯಶು ಪತ್ರ ತೆಗೆದುಕೊಂಡು ಹೊ[...] ಮುಟ್ಟಿಸುವುದರ ತನಕ ಅರ್ಥವಾಗದಿದ್ದಂತ[...] ನಿಜ.

ಮತ್ತುಳಿದ ಕಥೆಗಳು ಕೂಡ ಇಷ್ಟವಾಯಿ[...] ಹಾಗೂ ಮತ್ತೊಮ್ಮೆ ಜೇಡರ ಬಲೆ ಕಂಡ[...] ಯಶವಂತನಿಗೆ ಹಳೇ ನೆನಪುಗಳು.... [...] ಯಶವಂತ ಶಾಲೆಯಲ್ಲಿದ್ದಾಗ ಜೇಡನ ಬ[...] ಹರಿದು ಹಾಕಿದಂತೆ ಮತ್ತೆ, ಮತ್ತೆ ಕಟ್ಟುತ್ತಿ[...] ಹಾಗೆ ಯಶವಂತ ಕೂಡಾ ಹಾಗೆ [...] ಜೀವನದಲ್ಲಿ ಎಷ್ಟುಕಷ್ಟ ಅನುಭವಿಸಿದರ[...] ಬಿಡದೇ ಛಲದಿಂದ ಪ್ರಯತ್ನಿಸಿ ಕೊನೆಗೂ[...] ದೊಡ್ಡ ಮನುಷ್ಯನಾದ. ಆದರೆ ಕೊನೆಗಾದರ[...] ಅವನು ತನ್ನ ತಾಯಿಯ[...] ಕಾಣುವಂತಿರಬೇಕಿತ್ತಲ್ಲವೆ?

ಶೀತಲ್ ಧಾರೇಶ್[...]



ಹುತಾತ್ಮ ದಿನ ಜನವರಿ 30 ರಂದು ಡಿವೈಎಫ್‌ಐ ಮತ್ತು ಜೆಎಂಎಸ್ ಬೆಂಗಳೂರು ಜಿಲ್ಲಾ ಸಮಿತಿಗಳು ನೂರಾರು ಗಾಂಧಿಗಳ ಮೆರವಣಿಗೆ ನಡೆಸಿದರು. ಟೌನ್‌ಹಾಲ್ ಎದುರು ನಡೆದ ಸಭೆಯಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಸತ್ಯವ್ರತ ಮತ್ತು ದೊರೆಸ್ವಾಮಿಯವರು ಭಾಗವಹಿಸಿದ್ದರು.

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜು
ಸಂಪಾದಕರು: ಎಸ್.ವೈ.ಗುರುಶಾಂತ್. ಸಂಪಾದಕೀಯ ಕಛೇರಿ: ನಂ.-12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH